ಬೆಲೆ: ಎರಡು ಆಣೆ

# ಕರ್ಮವೀರ

ಸಂಪಾದಕರು :
ಹ. ರಾ. ಪುರೋಹಿತ ಎಂ. ಎ.

—ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ—

Editor :
H. R. Purohit, M. A.



—( ಸಂಪುಟ ೧೯ )— ಹುಬ್ಬಳ್ಳಿ ಸೋಮವಾರ ತಾರೀಖು ೮—೯—೧೯೪೬ —( ಸಂಚಿಕೆ ೨೩ )—

# ಪರಮಾಣು ಬಾಂಬಿನ ದಾಳಿಯ ಬಗ್ಗೆ ಪಶ್ಚಾತ್ತಾಪ

## ಹಿರೋಶಿಮದ ಮೇಲೆ ಬಾಂಬೆಸೆದುದರ ಘೋರ ಪರಿಣಾಮ—ಅದರ ಬಗ್ಗೆ ನಾಗರಿಕ ಲೋಕ ಮಾಡಬೇಕಾಗಿರುವ ತಪಸ್ಯೆ—ಪ್ರಜಾಸತ್ತೆಗಳ ಹೊಣೆ

'ಎರಡು ವರ್ಷಗಳ ಕೆಳಗೆ ಆಗಸ್ಟ ೬ ರಲ್ಲಿ ಕಾಲುಚೆಂಡಿಗಿಂತ ದೊಡ್ಡದಾಗಿರದ ಅಮೇರಿಕದ ಬಾಂಬು ೭೦ ಸಾವಿರಕ್ಕಿಂತ ಹೆಚ್ಚು ಜನರನ್ನು ಕೊಂದಿತು ಮತ್ತು ಸಾವಿರಗಟ್ಟಲೆ ಜನರ ಅಂಗಭಂಗ ಮಾಡಿತು. ಅ. ಸಂ. ಸಂಸ್ಥಾನದ ಶಾಂತಸಾಗರದ ನೌಕಾಧಿಪತಿಯಾಗಿದ್ದ ಅಡ್ಮಿರಲ್ ಚೆಸ್ಟರ್ ಡಬ್ಲ್ಯು ನಿಮಿಟ್ಸನು— 'ಜಪಾನಿನ ವಿರುದ್ಧ ಯುದ್ಧವನ್ನು ಅಣುಬಾಂಬು ಗೆದ್ದು ಕೊಟ್ಟಿಲ್ಲ. ರಶಿಯನ್ನರು ಯುದ್ಧಕ್ಕೆ ಸೇರುವ ಮೊದಲೇ ಹಿರೋಶಿಮದ ಮೇಲೆ ಬಾಂಬೆಸೆಯುವ ಮುನ್ನವೇ ಜಪಾನು ಶಾಂತಿಯನ್ನು ಯಾಚಿಸಿತ್ತು. ಜಪಾನಿನ ಸೋಲಿನಲ್ಲಿ ಸಾಂಗ್ರಾಮಿಕ ದೃಷ್ಟಿಯಿಂದ ಅಣು ಬಾಂಬು ಮುಖ್ಯ ಪಾತ್ರ ವಹಿಸಿಲ್ಲ'— ಎಂದುದನ್ನಾಧರಿಸಿ ಅಮೇರಿಕದ ಸುಪ್ರಸಿದ್ಧ ಲೇಖಕರಾದ ಲುಯಿ ಫಿಶರರು ಪ್ರಜಾಸತ್ತೆಗಳ ಇಂದಿನ ಕರ್ತವ್ಯವನ್ನು ನಿರೂಪಿಸುತ್ತಾರೆ.

ಹೊಸ ರಾಜಕೀಯ ಘಟನೆಯ ಪ್ರಕಾರ ಶಸ್ತ್ರ ಬಲಗಳನ್ನಿಟ್ಟುಕೊಳ್ಳುವುದರ ವಿರುದ್ಧ ಬಹಿಷ್ಕಾರ ಹಾಕಿದ್ದನ್ನು ಕೊನೆತನಕ ಪಾಲಿಸಿದರೆ ಯುದ್ಧವಲ್ಲದ ಜಪಾನಿನ ಸೋಲನ್ನು "ಯುದ್ಧ" ವನ್ನೇ ಗೆಲ್ಲುವುದರಿಂದ ಜಪಾನು ತೊಳೆದೊಗೆಯಬಹುದಾಗಿದೆ. ಆದರೆ ಹಿರೋಶಿಮದ— ಅದಕ್ಕಿಂತಲೂ ಹೆಚ್ಚಿನ ನಾಗಸಾಕಿಯ ಮೇಲೆ ಮಾಡಲಾದ ದುಷ್ಕೃತ್ಯವನ್ನು (ಹೆಚ್ಚಿನ ದೇಕೆಂದರೆ, ಹಿರೋಶಿಮದ ಅವಸ್ಥೆಯನ್ನು ನೋಡಿ ಆಗಲೆ ಜಪಾನಿಗಳು ಅರಬ ಶಕ್ತಿಯ ಪ್ರತಾಪವನ್ನು ಅರಿತಿದ್ದು ಪುನಃ ನಾಗಸಾಕಿಯಲ್ಲಿ ಅದನ್ನು ಪ್ರಯೋಗ ಮಾಡಬೇಕಾದ ಅವಶ್ಯಕತೆ ಇಲ್ಲದುದರಿಂದ) ಯಾವುದು ತೊಳೆಯಲು ಶಕ್ತವಾದೀತು?

ಹಿರೋಶಿಮವು ರಕ್ತರಂಜಿತ ಹಾಗೂ ಐತಿಹಾಸಿಕ ಉದಾತ್ತತೆ ಕಡಿಮೆಯಾದ ಒಂದು ಹೊಸ ಮನ್ವಂತರವನ್ನು ಪ್ರಾರಂಭಿಸಿರಬಹುದು. ಅದೊಂದು ದೊಡ್ಡ ಕಪ್ಪು ಮಸಿಯ ಕಲೆಯಿಂದ ಕೊನೆಗೊಳಿಸಲಾದ ಯುಗ; ನಾಗರಿಕತೆಯು ಅಂಧಾಂಧಕಾರಕ್ಕೆ ಬಲಿಯಾದ ಕಾಲ!

### ಅಣುಶಕ್ತಿಯ ಯುಗ

ಆದರೂ ಇದು ಇಷ್ಟಕ್ಕೆ ಮುಗಿಯಿತೆಂದು ಹೇಳಲಾಗದು. ಇಂದಿನ ಜಗತ್ತು ಹೊರಳುತ್ತಿರುವ ದಿಕ್ಕನ್ನು ಕಂಡರೆ ಹಿರೋಶಿಮವು ಅವಸಾನದ ಪ್ರಾರಂಭವಾಗಿ ತೋರುತ್ತದೆ. ಆದರೆ ಅದು ನವೋದಯದ ಆರಂಭವೂ ಆಗಬಲ್ಲುದು. ಅದು ಜನರ ಹಾಗೂ ಸರಕಾರಗಳ ಮೇಲೆ ಅವಲಂಬಿಸಿದೆ.

ಅಣುಶಕ್ತಿಯು ಬೆಂಕಿಯಂತಿದೆ. ಅದು ವಿನಾಶಗೊಳಿಸಲೂ ಬಲ್ಲುದು, ಸೃಷ್ಟಿಸಲೂ ಬಲ್ಲುದು.

ಬೆಂಕಿ ಆಹಾರವನ್ನು ಬೇಯಿಸುತ್ತದೆ; ಬಟ್ಟೆಯನ್ನು ನಿರ್ಮಿಸುತ್ತದೆ, ಕಟ್ಟಡಗಳನ್ನು ಕಟ್ಟುತ್ತದೆ, ರೈಲುಗಳನ್ನು ಚಲಿಸುತ್ತದೆ. ನಮ್ಮದು ಕಬ್ಬಿಣ ಮತ್ತು ಉಕ್ಕುಗಳ ನಾಗರಿಕತೆ; ಅವನ್ನು ಕರಗಿಸಲು ಬೆಂಕಿ ಬೇಕೇಬೇಕು. ಬೆಂಕಿಯೊಂದು ವರ. ಆದರೂ ಪ್ರಾಕ್ತನ ಮಾನವನು ಅದನ್ನು ಕಂಡು ಹಿಡಿದಾಗ ಅದಕ್ಕೆ ಅಂಜಿ ಅದನ್ನು ಪೂಜಿಸಲಾರಂಭಿಸಿದನು.

ಅಣುಶಕ್ತಿಯು ಸಾಮಾನ್ಯವಾದ ಬೆಂಕಿಗಿಂತ ಹೆಚ್ಚು ವಿನಾಶಕ ಶಕ್ತಿಯುಳ್ಳದ್ದು, ಅಲ್ಲದೆ ಅದಕ್ಕಿಂತ ಹೆಚ್ಚು ಸೃಷ್ಟಿಸುವ ಸುಪ್ತ ಶಕ್ತಿಯುಳ್ಳದ್ದು. ಅದು ದಾರಿದ್ರ್ಯ ಮತ್ತು ಶ್ರಮಗಳನ್ನು ನಾಶಗೊಳಿಸಬಲ್ಲದು. ಅದು ವಿರಾಮ, ಸಂಪತ್ತು ಮತ್ತು ಸುಖಗಳನ್ನು ತರಬಲ್ಲುದು.

ಹಿರೋಶಿಮದ ಮೇಲೆ ಆ ಬಾಂಬು ಬಿದ್ದು ಸಜೀವರಾದ ಗಂಡಸರು, ಹೆಂಗಸರು, ಮಕ್ಕಳು ಮುಂಗಿಳ ಮಾಂಸವನ್ನು ಸುಡು ಸುಡನೆ ಸುಟ್ಟ ಬಳಿಕ ನಾಯಿಕೊಡೆಯ (ಅಣಬೆ) ಆಕಾರದ ಒಂದು ದೊಡ್ಡ ಮೋಡವು ನಗರದ ಮೇಲೆ ಉದಿಸಿತು. ಅಂದಿನಿಂದ ಇಡಿಯ ಪ್ರಪಂಚದನ್ನೆಲ್ಲ ವ್ಯಾಪಿಸಿ ಮಾನವ ಕುಲದ ಮೇಲೆಯೇ ಶಿಂಪರಿಯ ಮುಸುಕನ್ನೆಳೆದಿದೆ. ಮುಂಬರಬಹುದಾದ ಅಣುಬಾಂಬಿನ ಯುದ್ಧವನ್ನು ತಪ್ಪಿಸಬಹುದೆಂದು ಅನೇಕರು ನಂಬಿಲ್ಲ. ಈ ಹೊಸ ಬೆಂಕಿಯನ್ನು ನಾವು ನಿಯಂತ್ರಿಸಬಹುದು, ಜನೋಪಯೋಗಕರ ಕೆಲಸಗಳಿಗೆ ಬಳಸಬಹುದು ಎಂಬುದನ್ನು ನಂಬುವುದಿಲ್ಲ.

### ಶ್ರದ್ಧೆ ಶಿಥಿಲವಾಯಿತು

ಬೆಂಕಿಯು ಪೂಜಿಸಲ್ಪಟ್ಟಿತು; ಅದೊಂದು ದೇವತೆಯಾಗಿತ್ತು. ಆದರೆ ಅಣುವಿನ ಕಿಚ್ಚು ಮನುಷ್ಯನಿಗೆ ಮನುಷ್ಯನಲ್ಲಿರುವ ಶ್ರದ್ಧೆಯನ್ನು ಶಿಥಿಲಮಾಡಿತು. ಅದು ಈ ಯುಗವನ್ನು ಗಾಬರಿಗಾಲವನ್ನಾಗಿ ಮಾಡಿದೆ. ವೈಯಕ್ತಿಕ ಹಾಗೂ ರಾಷ್ಟ್ರೀಯ ಅರಕ್ಷಿತತೆಯು ಮಾನವರ ಮತ್ತು ರಾಜತಂತ್ರದ ಮಾರ್ಗದರ್ಶಕವೆನಿಸಿಬಿಟ್ಟಿದೆ. ಮೊದಲೇ ಇದ್ದ ಯುದ್ಧ ಮತ್ತು ತತ್ಪರಿಣಾಮವಾದ ಸರ್ವನಾಶ—ಇವುಗಳ ಭಯವನ್ನು ಅಣುಬಾಂಬು ಇನ್ನೂ ಹೆಚ್ಚಿಸಲು ಕಾರಣವಾಯಿತು.

ಭಯ, ದ್ವೇಷ, ಸ್ಪರ್ಧೆ ಮತ್ತು ಪರಪೀಡನ ಇವು ರಾಷ್ಟ್ರಗಳನ್ನು ಕಾರ್ಯಾಸಕ್ತವನ್ನಾಗಿ ಮಾಡುತ್ತಿವೆ. ಆಧುನಿಕ ನವನಿರ್ಮಿತಿಗಳಿಂದ ಏಕೀಕೃತವಾದ ಜಗತ್ತೂ ಭೋಗೋಲ ಶಾಸ್ತ್ರ ಇತಿಹಾಸ ಮತ್ತು ಸಂಸ್ಕೃತಿಗಳಿಂದ ಸಂಬಂಧಿಸಲ್ಪಟ್ಟ ದೇಶಗಳೂ ಪಂಗಡಗಳ ಅಗ್ರಹದಿಂದ ಹಾಗೂ ವ್ಯಕ್ತಿಗಳ ದೌರ್ಜನ್ಯದಿಂದ ಭಿನ್ನ ಭಿನ್ನವಾಗಿ ಮಾಡಲ್ಪಟ್ಟಿವೆ.

ಮನುಷ್ಯನಲ್ಲಿ ಮನುಷ್ಯನಿಗಿರುವ ಶ್ರದ್ಧೆಯ ಒಂದು ಬಹುದೊಡ್ಡ ಕಾರ್ಯವಾಗಬೇಕೆಂಬ ದಾಹ ಜಗತ್ತಿಗೆ ಉಂಟಾಗಿದೆ. ಮಾನವಕುಲ ಬದುಕಬಲ್ಲುದೆಂದು ನಾವು ನಂಬದಿದ್ದರೆ ಅದು ಎಂದೂ ಬದುಕುವುದಿಲ್ಲ. ಜಗತ್ತನ್ನು ಉಳಿಸಬೇಕಾದರೆ ಮೊಟ್ಟಮೊದಲು ಅದನ್ನು ಉಳಿಸಬೇಕು ಮತ್ತು ಅದನ್ನು ಉಳಿಸಲು ಸಾಧ್ಯವೆಂಬುದು ನಿಃಸ್ಸಂದಿಗ್ಧವಾಗಿ ನಮ್ಮ ತಲೆಯಲ್ಲಿ ಹೊಗಬೇಕು.

### ಹಿರೋಶಿಮದತ್ತ ಯಾತ್ರೆ

ಮೆಚ್ಚುವಂತೆ ಪ್ರಾಮಾಣಿಕವಾದ, ಅತಿಶಯವಾಗಿ ಕಲ್ಪನಾತ್ಮಕವಾದ ಮತ್ತು ಭರವಸೆ, ಮೈತ್ರಿ ಹಾಗೂ ಸ್ನೇಹ ಜನರಲ್ಲಿ ಪುನಃ ಹುಟ್ಟುವಂತೆ ಮಾಡುವ ಒಂದು ಕಾರ್ಯವನ್ನು ನಾವಿಂದು ಮಾಡಬೇಕಾದ ಅಗತ್ಯವಿದೆ. ಇಂದಿನಿಂದ ಒಂದು ವರ್ಷವಾದ ಬಳಿಕ, ೧೯೪೭ ನೆಯ ಅಗಸ್ಟ ೬ ರಲ್ಲಿ, ಅಣುಶಕ್ತಿಯು ಪ್ರಥಮಾಹುತಿಯಾಗಿ ಸರಿಯಾಗಿ ೨ ವರ್ಷವಾದಾಗ, ಭೂಗೋಲದ ನಾನಾ ಭಾಗದ ಸಾವಿರಾರು ವ್ಯಕ್ತಿಗಳು ಹಿರೋಶಿಮಕ್ಕೆ ಹೋಗಿ ಅಲ್ಲಿಯ ಗತಜೀವಗಳ ಮತ್ತು ನಷ್ಟಹೊಂದಿದ ವಸ್ತುಗಳ ಧೂಳಿಯಲ್ಲಿ ಮಂಡಿಯೂರಿ ನಿಲ್ಲಬೇಕು. ಬಾಂಬನ್ನು ರಚಿಸಿದ ವಿಜ್ಞಾನಿಗಳು ನೆರೆಯಬೇಕು; ತಮ್ಮ ಕ್ರೈಸ್ತ ಧರ್ಮವನ್ನು ಪಾಲಿಸದ ಕ್ರೈಸ್ತ ಭಕ್ತಮಂಡಲದ ಚರ್ಚುಗಳ ಪಾದ್ರಿಗಳು ಹೋಗಿ ಸೇರಬೇಕು; ವಿದ್ಯಾರ್ಥಿಗಳು, ಉಪಾಧ್ಯಾಯರು, ಲೇಖಕರು ಮತ್ತು ಕಲೆಗಾರರು ಅಲ್ಲಿಗೆ ಪಯಣಬೆಳಸಬೇಕು, ತಾಯಂದಿರು ಸಾಗಬೇಕು, ಯುದ್ಧಪ್ರವೀಣರು ನಡೆಯಬೇಕು, ರಾಜತಂತ್ರಜ್ಞರು, ರಾಜಕಾರಣಿಗಳು ಮತ್ತು ಸೇನಾನಿಗಳು ಹೋಗಿ ಸೇರಬೇಕು. ಅವರು ಭೂಚಕ್ರದ ಮೂಲೆ ಮೂಲೆಗಳಿಂದ ಹೊರಟು ಅಲ್ಲಿ ಕೂಡಬೇಕು—ಅದರಲ್ಲೂ ಆ ಬಾಂಬನ್ನು ಎಸೆದ ಅಮೇರಿಕದಿಂದ ವಿಶೇಷತಃ ಜನ ಅಲ್ಲಿಗೆ ಯಾತ್ರೆ ಬೆಳಸಬೇಕು. ಅವರೆಲ್ಲರದೊಂದು ಮಹಾಜನಸಮುದಾಯವಾಗಬೇಕು, ಹಿರೋಶಿಮಕ್ಕೆ ಭಕ್ತಿಸಲ್ಲಿಸುವ ಯಾತ್ರಿಕರ ಒಂದು ಮಾನವ್ಯ ಮಹಾಸಾಗರವಾಗಬೇಕು. ಎಲ್ಲ ಮಾನವ ಕುಲದ ಪರವಾಗಿ ಯಾತ್ರಿಕರು ನಾಗರಿಕತೆಯ ಇತಿಹಾಸದಲ್ಲಿಯ ಆ ಅಸ್ರತಿಮವಾದ, ಅತ್ಯಂತ ದೊಡ್ಡದಾದ ಸಾಮೂಹಿಕ ಸ್ಮಶಾನದ ಮುಂದೆ ಸಾಷ್ಟಾಂಗ ಪ್ರಣಾಮ ಮಾಡಬೇಕು. ಮತ್ತು ಅಣುಬಾಂಬಿನಿಂದಾದ ದುಷ್ಕೃತ್ಯಕ್ಕಾಗಿ ಪಶ್ಚಾತ್ತಾಪ ಪಡಲು ಪ್ರಯತ್ನ ನೆಸಗಬೇಕು.

ಅಂದಿನ ಮತ್ತು ಇಂದಿನ ನಡುವಿನ ವರ್ಷದಲ್ಲಿ ಹಿರೋಶಿಮವನ್ನು ಹಾಳುಗೆಡಹಿದ ಮಿದುಳುಗಳು ತಮ್ಮ ಆ ಅಪರಾಧವನ್ನು ಅರಿತುಕೊಳ್ಳಲು ಶಕ್ತವಾಗಿವೆಯೆಂಬುದನ್ನು ತೋರ್ಪಡಿಸಲು ಪರದೇಶದವರು ಹೋಗಿ ಅದನ್ನು ಪುನಃ ಕಟ್ಟಿಕೊಟ್ಟು ಬರಬೇಕು. ನಾವು ಸಹಿಸುವ ದೌರ್ಜನ್ಯಕ್ಕೆ ನಮ್ಮಲ್ಲಿಯ ಪ್ರತಿಯೊಬ್ಬನೂ ಕರ್ತೃ ಮತ್ತು ಬೇಟೆಯಾಗಿದ್ದಾನೆ. ಪ್ರಜಾಪ್ರಭುತ್ವವಿದ್ದೆಡೆಗಳಲ್ಲಾದರೂ ಕಡೆಯ ಪಕ್ಷ ಸಮಾಜದ ಕಾರ್ಯಗಳ ಹೊಣೆಯಿಂದ ಯಾವ ಮನುಷ್ಯನೂ ತಪ್ಪಿಸಿಕೊಳ್ಳಲಾರನು. ಹಿರೋಶಿಮಕ್ಕಾದ ಅನ್ಯಾಯದ ಬಗ್ಗೆ ವ್ಯಕ್ತಿಗಳು ತಪ್ಪೊಪ್ಪಿಕೊಂಡರೆ, ಅದರಿಂದ ಮುಂದೆಂದಾದರೂ ಯುದ್ಧವೊಂದರಲ್ಲಿ ಅಣುಬಾಂಬು ಎಸೆಯಲ್ಪಟ್ಟಿದಾದರೆ ಅದು ನನ್ನ ಅಪರಾಧ ಮತ್ತು ನಿನ್ನ ಅಪರಾಧ ಎಂಬುದಾಗಿ ಜಗತ್ತಿಗೆ ಮೊದಲೇ ಹೇಳಿದಂತಾಗುವುದು.

### ಜನತೆಯ ಜವಾಬುದಾರಿ

ಜನತಾ ಸರಕಾರವೆಂದರೆ, ಸರಕಾರದ ಕೃತ್ಯಗಳಿಗೆ ಪ್ರತಿಯೊಬ್ಬ ನಾಗರಿಕನೂ ವೈಯಕ್ತಿಕವಾಗಿ ಜವಾಬುದಾರನೆಂಬುದಾಗಿ ಅರ್ಥವಾಗುತ್ತದೆ. ಅದನ್ನೇ ಇನ್ನೊಂದು ವಿಧವಾಗಿ ಹೇಳಿದರೆ, ಅಳಿಕೆಗಾಗಿ ಸರ್ಕಾರ ಸಂಯುಕ್ತ ಧುರಂಧರತೆಯಿಂದಾಗುತ್ತದೆ. ಇದನ್ನು ಎಲ್ಲರೂ ಹೆಚ್ಚು ಹೆಚ್ಚಾಗಿ ತಿಳಿದುಕೊಂಡರೆ ರಾಜಕಾರಣದಲ್ಲಿ ಹೆಚ್ಚು ಜನರು ಭಾಗ ವಹಿಸಬಹುದು. ಸರಕಾರದ ಪ್ರತಿಯೊಬ್ಬ ನಟನೆಯ ಅದಿನ ಯತ್ನವು ವೈಯಕ್ತಿಕವಾಗಿ ನಮ್ಮಲ್ಲಿಯ ಪ್ರತಿಯೊಬ್ಬನೂ ಶಿಕ್ಷಿಸಲ್ಪಡುವನೆಂದು ಗೊತ್ತಾದರೆ ನಾವು ಅವನ ಯೋಗ್ಯತೆ ಮತ್ತು ಅರ್ಹತೆಗಳ ಬಗ್ಗೆ ಹೆಚ್ಚು ಲಕ್ಷ್ಯ ಕೊಡುವೆವು. ನಿಜವಾಗಿಯೂ ನಾವು ಶಿಕ್ಷಿಸಲ್ಪಡುತ್ತೇವೆ. ಅಧಿಕಾರಿಗಳ ತಪ್ಪು ಮತ್ತು ವಂಚನೆಗಳ ಪರಿಣಾಮದಿಂದ ಯಾವನೊಬ್ಬನೂ ತಪ್ಪಿಸಿಕೊಳ್ಳುವುದಿಲ್ಲ. ಹಾಗಾದರೆ ಮೊಟ್ಟಮೊದಲಿನದೆಂದರೆ ಪ್ರಜಾಸತ್ತಾತ್ಮಕ ಭಾವವುಳ್ಳವರಾಗದೆ ಮತ್ತು ಕ್ರೈಸ್ತರಾಗದೆ ಹಿರೋಶಿಮದ ದುರಂತಕ್ಕೆ ನಾವೆಲ್ಲರೂ ಕಾರಣರಾದೆವೆಂಬುದನ್ನು ಸಾರ್ವಜನಿಕರು ಘಂಟಾಘೋಷವಾಗಿ ಒಪ್ಪಬೇಕು. ಅದು ನಮ್ಮ ಆತ್ಮದೊಳಗೆ ಬರಿಯಾಗಿ ಹೊಕ್ಕರೆ ಮತ್ತೊಂದು ಅಂತಹ ದುರಂತವಾಗದಂತೆ ಮುಂಜಾಗ್ರತೆ ವಹಿಸಬೇಕೆಂಬ ಎಚ್ಚರ ನಮಗುಂಟಾಗುತ್ತದೆ. ಆಗ ೧೯೪೭ ನೆಯ ಅಗಸ್ಟ ೬ ರಲ್ಲಿ ಹಿಂದೆ ಹೇಳಿದ ಪ್ರಕಾರ ಆ ಸ್ಥಳದಲ್ಲಿ ನೇರವಾಗಿ ಪಶ್ಚಾತ್ತಾಪದಗ್ಧವಾದ ಜಾಗತಿಕ ಭಕ್ತ ಮಂಡಲವು ಪ್ರಪಂಚಕ್ಕೆ ಸಂಯುಕ್ತ ರಾಜ್ಯಭಾರವನ್ನು ವ್ಯವಸ್ಥೆಗೊಳಿಸಲು ಒಂದು ಪ್ರಪಂಚ ಪರಿಷತ್ತನ್ನು ತೆರೆಯುವುದು.

### ಯುದ್ಧ ನಿಲ್ಲಿಸುವ ಒಂದು ದಾರಿ

ರಾಷ್ಟ್ರಗಳ ನಡುವಣ ಇಂದಿನ ಸ್ಪರ್ಧಾಗಲಾಟೆವು ಮತ್ತೊಂದು ಯುದ್ಧಕ್ಕೆ ಕಾರಣವಾಗಲಿದೆ. ರಾಷ್ಟ್ರೀಯತೆಯೇ ಯುದ್ಧಗಳ ಮುಖ್ಯ ಕಾರಣ. ಅಂತರ್ರಾಷ್ಟ್ರೀಯ ಸರಕಾರದಲ್ಲಿ ರೂಪಿಸಲ್ಪಟ್ಟ ಅಂತರ್ರಾಷ್ಟ್ರೀಯತೆಯೊಂದೇ ಶಾಂತಿಯನ್ನು ತರಬಲ್ಲದು. ಇದು ಬಹು ತ್ವರಿತದ್ದಾಯಿತು, ಆದರ್ಶಸ್ವರೂಪದ್ದಾಯಿತು ಎನ್ನುವವರು ಮೂರನೆಯ ಜಾಗತಿಕ ಯುದ್ಧವನ್ನು ನಿಲ್ಲಿಸಲಸಾಧ್ಯವೆಂಬುದನ್ನು ಒಪ್ಪಿಕೊಳ್ಳುವರು. ಸಕಾಲಿಕ ಕಾರ್ಯದಿಂದ ಅದನ್ನು ನಿಲ್ಲಿಸಬಹುದೆಂದು ನನ್ನ ಮತ. ಕಟ್ಟಕಡೆಯದಾಗಿ ನಾವು ಮಾಡತಕ್ಕದ್ದೆಂದರೆ ಇಂದಿನ ಯುದ್ಧಪತ್ತಣದ ಒಲೆತವನ್ನು ತಡೆಯಲು ನಮ್ಮ ಕೈಯಲ್ಲಾಗುವುದನ್ನು ಕಟ್ಟಕಡೆಯ ವರೆಗೆ ಮಾಡುವುದೇ ಆಗಿದೆ.

ಪ್ರತಿದಿನವೂ ನೀನು ಶಾಂತಿಗಾಗಿ ದುಡಿಯುತ್ತಿಲ್ಲವಾದರೆ ಮೊಟ್ಟಮೊದಲಿನ ಅಣುಬಾಂಬಿನ ಯುದ್ಧಕ್ಕೆ ನೀನು ವ್ಯಕ್ತಿಶಃ ಕಾರಣನಾಗುವೆ. ಇತ್ತೀಚಿನ ಯುದ್ಧವು ನಮ್ಮನ್ನು ಸ್ಥಾಯಿಯಾದ ಶಾಂತಿಯತ್ತ ಒಯ್ಯಲಿಲ್ಲ; ರಾಷ್ಟ್ರ ರಾಷ್ಟ್ರಗಳ ನಡುವಣ ಸಂಬಂಧಗಳ ಸಾಳಭೂತವಾದ ಪ್ರಶ್ನೆಯನ್ನು ಅದು ಬಿಡಿಸಲಿಲ್ಲವೆಂಬುದಕ್ಕಿಂತ ಮೊದಲು ಎದುರಿಸಲೂ ಇಲ್ಲವೆಂಬುದೇ ಅದಕ್ಕೆ ಕಾರಣ. ಈ ಮಾತನ್ನು ಮೂಲತಃ ವಿಚಾರಕ್ಕೆ ತೆಗೆದುಕೊಳ್ಳಬೇಕು. ರಾಷ್ಟ್ರೀಯತೆಯ ಆಧಾರದ ಮೇಲೆ ಆ ಸಮಸ್ಯೆಯನ್ನು ಬಹುಶಃ ಉತ್ತರಿಸಲು ಸಾಧ್ಯವಿಲ್ಲದಿರಬಹುದು. ರಾಷ್ಟ್ರೀಯತೆಯೆಂದರೆ, ಭೇದವಾದ, ಬಲಪ್ರಾಧಾನ್ಯ, ದೌರ್ಬಲ್ಯದ ದುರುಪಯೋಗ ಮತ್ತು ಸ್ಪರ್ಧೆ. ಇದು ಅಣುಬಾಂಬಿನ ಪ್ರಯೋಗದತ್ತ ಒಯ್ಯದೆ ಹೇಗೆ ನಿಂತೀತು? ದುರ್ಬಲರನ್ನು ದಕ್ಕಿಸುವ, ಶಾಸ್ತ್ರಜ್ಞ ಹಾಗೂ ಧನಾರ್ಜನೆಗಳಲ್ಲಿಯ ಅನಾಗರಿಕ ರೀತಿಯ ಸ್ಪರ್ಧೆಯನ್ನು ನಾಶಗೊಳಿಸುವ ಅಂತರ್ರಾಷ್ಟ್ರೀಯ ಸಂಸ್ಥೆಯಲ್ಲಿ ರಾಷ್ಟ್ರೀಯ ಶಕ್ತಿಯನ್ನು ಸಂಗ್ರಹಿಸಿಡುವುದೇ ಅದಕ್ಕೆ ನಿವಾರಣ. ತನ್ನ ವೈಯುಕ್ತಿಕ ನಡತೆ ಹಾಗೂ ರಾಜಕೀಯ ಚಟುವಟಿಕೆಗಳಿಂದ ವ್ಯಕ್ತಿಯು ತನ್ನ ಸರಕಾರವನ್ನು ಆ ಧ್ಯೇಯದತ್ತ ಎಳೆದೊಯ್ಯಬೇಕು.

# ರಾಷ್ಟ್ರಭಾಷೆಯ ಸಮಸ್ಯೆ

ಲೇ:— ಶ್ರೀ ಜಿ. ರಾಮರಾವ್

ಭಾರತ ಒಂದು ರಾಷ್ಟ್ರ. ರಾಷ್ಟ್ರಕ್ಕೊಂದು "ರಾಷ್ಟ್ರ ಭಾಷೆ" ಬೇಕು ಎಂಬುದು ನಿರ್ವಿವಾದ ವಿಷಯ. ಹಿಂದೆ ಸಂಸ್ಕೃತವಿತ್ತು. ಇನ್ನು ಮುಂದೆ ಯಾವುದು ಎಂಬುದು ವಾದಗ್ರಸ್ತ ವಿಷಯವಾಗಿದೆ. ಹಿಂದಿಯೋ? ಹಿಂದುಸ್ತಾನಿಯೋ? ಅಥವಾ ಉರ್ದುವೋ? ಭಾಷೆಯ ಪ್ರಶ್ನೆಯಂತೆ ಲಿಪಿಯದೂ ಜಟಿಲವಾಗಿದೆ.

ಭಾರತ ಘಟನಾಸಮಿತಿಯು ಶಾಂ. ಪಕ್ಷದವರು ದೇವನಾಗರಿ ಲಿಪಿಯಲ್ಲಿ ಬರೆದ ಹಿಂದೀ ಭಾಷೆಯೇ ಭಾರತದ ರಾಷ್ಟ್ರ ಭಾಷೆಯಾಗಬೇಕೆಂದು ನಿರ್ಧರಿಸಿ, ಅದರಂತೆ ಪ್ರಾಂತಿಕ ಮತ್ತು ಒಕ್ಕೂಟ ಘಟಕಗಳಲ್ಲಿ ನಿರ್ದೇಶ ಮಾಡಬೇಕೆಂಬ ಗೊತ್ತುವಳಿಯನ್ನು ಭಾಷೆಗೆ ಸಂಬಂಧಪಟ್ಟ ಕಲಮು ಚರ್ಚೆಗೆ ಬಂದಾಗ ಮಂಡಿಸಬೇಕೆಂದು ಗೊತ್ತಾಗಿದೆ. ಮತ್ತು ಈ ಬಗ್ಗೆ ನಿರ್ಣಯವನ್ನು ಬರೆಯಲು ಸಮಿತಿಯೊಂದನ್ನು ನಿಯಮಿಸಲಾಗಿದೆ.

ಈಗ ಕೆಲವು ಕಡೆಗಳಲ್ಲಿ ಹಿಂದುಸ್ತಾನಿ ರಾಷ್ಟ್ರ ಭಾಷೆಯಾಗಲಿ ಎಂಬ ಕೂಗು ಕೇಳಿ ಬರುತ್ತಿದೆ. ಹಿಂದುಸ್ತಾನಿಗೊಂದು ನಿರ್ದಿಷ್ಟ ಲಕ್ಷಣ (Definition) ಯಾವುದೂ ಇಲ್ಲ. ಭಾರತೀಯ ಸೇನಾಧಿಕಾರಿಗಳಿಗೆ ಹಿಂದುಸ್ತಾನಿ ಎಂದರೆ "ಉರ್ದು" ಆಗಿದೆ. ಇನ್ನು ಕೆಲವರಿಗೆ ಹಿಂದುಸ್ತಾನಿ ಎಂದರೆ "ಹಿಂದೀ" ಆಗಿದೆ. ನಮ್ಮ ಕೆಲವು ಮುಖಂಡರು ಹಿಂದುಸ್ತಾನಿಗೆ ಮಾಡಿರುವ ವ್ಯಾಖ್ಯೆ-"ಹಿಂದೀ ಮತ್ತು ಉರ್ದುವಿನ ಮಿಶ್ರ" ಅಥವಾ ಕಲಸುಮೇಲೋಗರವೆನ್ನಬಹುದು. ಈ ಮಿಶ್ರವೆಂಬ ವ್ಯಾಖ್ಯೆಯನ್ನು ಸಮರ್ಥಿಸುವ ಯಾವ ಸಾಹಿತ್ಯವೂ ಇಲ್ಲ. ಈ ವಿಷಯವನ್ನು ಪ್ರಸ್ತಾಪಿಸುವ ಮೊದಲು ಹಿಂದೀ ಮತ್ತು ಉರ್ದುವಿನಿರುವ ಭೇದವನ್ನು ತಿಳಿಯುವುದು ಅಗತ್ಯ. ಮೂಲತಃ ಇವೆರಡೂ ಒಂದೇ ಭಾಷೆ. ವ್ಯಾಕರಣ, ನುಡಿಗಟ್ಟು ಒಂದಾಗಿದೆ. ಇದು ಪ್ರಾಚೀನ ಶೌರಸೇನಿ ಪ್ರಾಕೃತವಿತ್ತು. ಅಪಭ್ರಂಶದಿಂದ ಹುಟ್ಟಿದ್ದು. ಈ ಎರಡು ಭಾಷೆಗಳನ್ನು ಪರಿಶೀಲಿಸಿದರೆ ಭೇದವಾರಂಭವಾಗತೊಡಗುತ್ತದೆ. ಬಹುಸಂಖ್ಯಾಕರ ಲಿಪಿಯಾದ ದೇವನಾಗರಿ ಲಿಪಿಯಲ್ಲಿ ಹಿಂದೀ ಬರೆಯಲ್ಪಡುತ್ತಿದೆ; ಉರ್ದು ಪರ್ಷಿಯನ್ ಲಿಪಿಯಲ್ಲಿ (ಫಾರಸೀ, ತುರ್ಕಿ ಮತ್ತು ಅರಬ್ಬಿ ಭಾಷೆಯಲ್ಲಿಲ್ಲದ ಕೆಲವು ವ್ಯಂಜನಗಳನ್ನು ಹೊಂದಿಸಿಕೊಂಡು) ಬರೆಯಲಾಗುತ್ತಿದೆ. ಹಿಂದಿಯು ಸಂಸ್ಕೃತ ಜ್ಞಾನ ಭಂಡಾರದಿಂದ ಕೂಡಿದೆ. ಉರ್ದುವಿಗೆ ಅರಬ್ಬಿ ಫಾರಸೀ ಭಾಷೆಗಳ ನೆರವಿದೆ. ಹಿಂದಿಯು ವಾಲ್ಮೀಕಿ, ವ್ಯಾಸ, ಕಾಳಿದಾಸ ಮೊದಲಾದವರ ಸಾಹಿತ್ಯಿಕ ಪರಂಪರೆಯನ್ನು ಕಾಪಾಡುತ್ತಿದೆ. ಉರ್ದು ತನ್ನ ಸ್ಫೂರ್ತಿಗಾಗಿ ಅರಬ್ಬಿ ಪರ್ಷಿಯ ದೇಶಗಳ ಕಡೆ ನೋಡುತ್ತಿದೆ. ಭಾರತೀಯರ ಆಧ್ಯಾತ್ಮಿಕ ಜೀವನದ ಪ್ರತಿಬಿಂಬವಾಗಿದೆ ಹಿಂದೀ. ಹಿಂದಿಯು ಎಲ್ಲ ಮುಖಗಳಲ್ಲೂ ಭಾರತೀಯ ಮನೋಭಾವವನ್ನು ಪ್ರತಿನಿಧಿಸುವುದಾಗಿದೆ.

## ಹಿಂದೀ ಮತ್ತು ಉರ್ದು

ಈ ಎರಡರ ಸಮನ್ವಯ ಆಗುವುದು ಹೇಗೆ? ಅದು ಸಾಧ್ಯವೆ? ಅಖಿಲ ಭಾರತ ಆಕಾಶವಾಣಿ ಸಂಸ್ಥೆಯವರು ಈ ಬಗ್ಗೆ ಪಟ್ಟ ಶ್ರಮ ಫಲಕಾರಿಯಾಗಲಿಲ್ಲವಾಗಿ ಗೊತ್ತಾಗುತ್ತದೆ. ಬಿಹಾರ ಮತ್ತು ಕಾಶ್ಮೀರ ಸರಕಾರಗಳು ತಮ್ಮ ಶಿಕ್ಷಣ ಕ್ಷೇತ್ರದಲ್ಲಿ ತೋರಿಸಿದ ಮನೋಭಾವವು ಉರ್ದುವಿನ ಕಡೆಗೇ ಒಲಿದಿದೆ. ಪಂ. ಜವಾಹರಲಾಲ ನೆಹರು ಮತ್ತು ಮೌಲಾನಾ ಅಬುಲ್‌ಕಲಾಂ ಆಜಾದರವರ ಭಾಷಣಗಳು ಶುದ್ಧ ಸಾಹಿತ್ಯಿಕ ಉರ್ದು ಆಗಿವೆ. ಎಲ್ಲೋ, ಅಲ್ಲೋ ಇಲ್ಲೋ ಸೇರಿಸಿದ ಹಿಂದೀ ಶಬ್ದಗಳು ಒಂದೆರಡು ಇದ್ದ ಮಾತ್ರಕ್ಕೆ ಅದನ್ನೇ ಹಿಂದುಸ್ತಾನಿ ಎಂದು ಕರೆಯಲಾಗುತ್ತಿದೆ.

ಹಿಂದುಸ್ತಾನಿಯ ಮೂಲಕರ್ತೃವಾದ ಮಹಾತ್ಮಾ ಗಾಂಧೀಜಿಯು ಅಖಿಲ ಭಾರತ ಆಕಾಶವಾಣಿಯ ಭಾಷೆ ಮತ್ತು ಬಿಹಾರ್ ಹಾಗೂ ಕಾಶ್ಮೀರ ಸರ್ಕಾರದ ಪಠ್ಯಪುಸ್ತಕಗಳಿಂದ ಸಂತುಷ್ಟರಾಗಿಲ್ಲ.

ಪ್ರತಿನಿತ್ಯ ಮಾತನಾಡುವ, ವಿದ್ವಾಂಸರ, ಅಧಿಕಾರಿಗಳ, ಹಾಗೂ ಶಾಸನಕರ್ತರ ಭಾಷೆಯನ್ನು ಪರಿಶೀಲಿಸಬೇಕಾಗಿದೆ. ಸುಮಾರು ಹಿಂದುಸಾವಿರ ಶಬ್ದಗಳಲ್ಲಿ ಜನತೆಯ ಭಾಷೆಯನ್ನು ಬರೆದಿಡಬಹುದು. ಉನ್ನತಭಾವನಾ ಪ್ರಕಾಶನಕ್ಕೆ ಕೆಲವು ಲಕ್ಷಶಬ್ದಗಳಾದರೂ ಬೇಕಾಗುತ್ತವೆ.

## ಹಿಂದುಸ್ತಾನಿ

ಒಂದು ದಿನದಲ್ಲಿ ಭಾಷೆಯನ್ನು ಕಟ್ಟಲು ಅಸಾಧ್ಯವಿಲ್ಲ. ಸಾಹಿತ್ಯದೃಷ್ಟಿಯಿಂದ ನೋಡಿದರೆ ಹಿಂದುಸ್ತಾನಿ ಇನ್ನೂ ಜನ್ಮವೆತ್ತಿಲ್ಲ. ಇದರ ಅಸ್ತಿತ್ವವನ್ನು ಎಲ್ಲರೂ ಒಪ್ಪಬೇಕಾಗಿದೆ. ಇದರ ಜನ್ಮಕ್ಕೋಸ್ಕರ ಯಾರು ಕಾತರರಾಗಿರುವರೋ ಅವರು ಶತಮಾನವಾದರೂ ಇದರ ಅನುಪಾಲನೆಯಲ್ಲಿ ತೊಡಗಬೇಕಾಗಿದೆ, ಬೆಳೆಸಬೇಕಾಗಿದೆ. ಭಾವನಾ ಪ್ರಚೋದನೆಯ ಶಕ್ತಿಯುತ ಸಾಧನವಾಗಿ ಬೆಳೆದು ಬಂದಮೇಲೆ ಅದರ ಬಗ್ಗೆ ಆಗ ಯೋಚನೆಮಾಡಬಹುದು. ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿಸ ಹೊರಟಂತಾಗಬಾರದು. ಕಲ್ಪನಾ ಪ್ರಪಂಚದಲ್ಲಿ ಅದರ ಅಸ್ತಿತ್ವವಿರುವಾಗ ಆ ವಿಷಯವನ್ನು ಬಿಡುವುದು ಒಳ್ಳೆಯದು.

ಪಾಕಿಸ್ತಾನದ ಸ್ಥಾಪನೆಯಿಂದ ಹಿಂದುಸ್ತಾನಿಯ ಉದ್ದೇಶ ಸೋತು ಹೋಗಿದೆ.

ಹಿಂದುಸ್ತಾನಿಯನ್ನು ಹಿಂದೀ ಮತ್ತು ಉರ್ದು ಎಂಬುದಾಗಿ ಪರಿಭಾವಿಸಿದರೂ ಅರ್ಥವಿವರಣೆಯು ಕೂಡ ಉದ್ದೇಶವಿಹೀನವಾಗುತ್ತದೆ. ಸಾಹಿತ್ಯದೃಷ್ಟಿಯಿಂದ ಎರಡೂ ಪೂರ್ವ ಪಶ್ಚಿಮವಾಗಿವೆ. ಕೆಲವು ಸರಳ ಸುಲಭ ಶಬ್ದಗಳ ಹೊರತಾಗಿ ಮತ್ತೇನೂ ಸಾಮ್ಯವಿಲ್ಲ. ವಾಕ್ಯದ ಪ್ರತಿಯೊಂದು ಪ್ರಧಾನ ಶಬ್ದವೂ ಎರಡು ಭಾಷೆಗಳಲ್ಲೂ ಬೇರೆ ಬೇರೆ ಯಾಗಿರುತ್ತದೆ.

ದಕ್ಷಿಣ ಭಾರತೀಯರಿಗೆ ಉರ್ದು, ಉರ್ದುಮಯಹಿಂದುಸ್ತಾನಿ, ಅಥವಾ ನೇಕಡಾ ೫೦ ರಷ್ಟಿರುವ ಉರ್ದು ಇದು ಕಬ್ಬಿಣದ ಕಡಲೆಯಾಗಿದೆ. ಸಂಸ್ಕೃತ ಶಬ್ದವನ್ನು ಬಿಡುವುದೇ ಹಿಂದುಸ್ತಾನಿಯ ಗುರಿಯಾಗಿದೆ. ಉತ್ತರದ ಮತ್ತು ದಕ್ಷಿಣದ ಭಾಷೆಗಳಿಗೆ ಸಂಸ್ಕೃತ ಶಬ್ದಗಳೇ ಕೊಂಡಿಗಳಾಗಿವೆ. ಈ ಕೊಂಡಿಗಳನ್ನು ಬಹಳ ಜಾಣ್ಮೆಯಿಂದ ಹಿಂದುಸ್ತಾನಿಯಲ್ಲಿ ಕಳಚಿ ಹಾಕಲಾಗುತ್ತಿದೆ. ಇದರಿಂದ ಭಾಷಾಸಂಬಂಧವೇ ಕೊಡೆದು ಹೋಗುತ್ತದೆ.

## ಲಿಪಿ

ಹಿಂದೀ ಲಿಪಿಗೂ ಮತ್ತು ದಕ್ಷಿಣ ಭಾರತ ಲಿಪಿಗೂ ವ್ಯತ್ಯಾಸವಿದೆ. (ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸಿದರೆ ಸಾಮ್ಯ ಕಂಡು ಬರುತ್ತದೆ) ದೇವನಾಗರಿ ಮತ್ತು ದಕ್ಷಿಣ ಭಾರತದ ಲಿಪಿಗಳು ಬ್ರಾಹ್ಮಿಯಿಂದ ಬಂದುವು, ಅಥವಾ ಅಶೋಕನ ಕಾಲದಿಂದ ಎನ್ನಬಹುದು. ಆಗಿನ ಕಾಲದಲ್ಲಿ ನೇಪಾಳದಿಂದ ಮೈಸೂರು, ಮತ್ತು ಗುಜರಾತಿನಿಂದ ಬಂಗಾಳದವರೆಗೂ ಒಂದೇ ಲಿಪಿ ಇದ್ದಿತು. ಆ ಲಿಪಿಗೆ ಬ್ರಾಹ್ಮಿ ಎಂದು ಹೆಸರು. ಈ ಲಿಪಿಯಿಂದಲೇ ಭಾರತದ ಎಲ್ಲ ಹಾಗೂ ಟಿಬೆಟ್, ಬರ್ಮಾ, ಸಯಾಂ ಜಾವಾ ಮತ್ತು ಸಿಲೋನಿನ ಲಿಪಿಗಳು ಉದ್ಭವಿಸಿವೆ. ಶತಮಾನಗಳ ವ್ಯಾಪ್ತಿಯಿಂದ ಬ್ರಾಹ್ಮೀ ಲಿಪಿಯು ಭಿನ್ನ ಭಿನ್ನ ಪ್ರಾಂತದಲ್ಲಿ ಭಿನ್ನ ಭಿನ್ನ ರೀತಿಯಲ್ಲಿ ವಿಕಸಿಸಿ ಈಗ ಕಾಣುವಂತೆ ರೂಪುಗೊಂಡಿದೆ. ಆಕಾರ ಬೇರೆಯಾದರೂ ಶಬ್ದಧ್ವನಿ ಒಂದೇ ಆಗಿ ಭಾಷೆಗಳಲ್ಲಿ ಸ್ವರಾಕ್ಷರಗಳೂ, ವ್ಯಂಜನಾಕ್ಷರಗಳೂ ಒಂದೇ ರೀತಿ ಇರುವುದನ್ನು ಕಾಣಬಹುದು. ಭಾರತೀಯ ಭಾಷೆಯಲ್ಲಿ ಶಬ್ದಧ್ವನಿ ಒಂದೇ ರೀತಿ ಇದ್ದು, ಭಾಷೆಗೆ ತಕ್ಕಂತೆ ಒಂದೆರಡು ಅಕ್ಷರಗಳನ್ನು ಕೆಲವು ಭಾಷೆಗಳಲ್ಲಿ ಸೇರಿಸಿಕೊಳ್ಳಲಾಗಿದೆ. ಉತ್ತರ ಭಾರತದ ಯಾವ ಶಬ್ದವನ್ನಾದರೂ ಸ್ಪಷ್ಟವಾಗಿ ಉಚ್ಚಾರಣ ಭೇದ ಬಾರದಂತೆ ಬರೆಯಬಹುದು. ತಮಿಳು ಅಕ್ಷರ ಮಾತ್ರ ಪೂರ್ಣತೆಯನ್ನು ಹೊಂದಿಲ್ಲ. ಕನ್ನಡ, ತೆಲಗು, ಮಲೆಯಾಳ ಭಾಷೆಗಳಲ್ಲಿ ಅಕ್ಷರಗಳು ಪೂರ್ಣ ಶಾಸ್ತ್ರೀಯವಾಗಿವೆ. ಬರೆಯುವುದೊಂದು ಓದುವುದೊಂದು ರೀತಿ ಇಲ್ಲ. ದಕ್ಷಿಣದವರಿಗೆ ದೇವನಾಗರಿ ಲಿಪಿಯನ್ನು ಕಲಿಯುವುದು ಕಷ್ಟವೇನಲ್ಲ. ಕೆಲವು ಕನ್ನಡಿಗರು ನಾಗರೀಲಿಪಿಯಲ್ಲಿ ಕನ್ನಡ ಕಾಗದಪತ್ರಗಳನ್ನು ಬರೆಯುತ್ತಿರುವುದನ್ನು ನೋಡುತ್ತಿದ್ದೇವೆ. ಸಂಸ್ಕೃತ ಕಲಿತವರ ವಿಷಯವನ್ನು ಹೇಳುವಂತಿಲ್ಲ.

## ಉರ್ದು ಲಿಪಿ

ಉರ್ದು ಲಿಪಿಯನ್ನು ನೋಡಿದರೆ ಅದರ ಪಾಂಡಿತ್ಯ ಪಡೆಯಲು ತಿಂಗಳುಗಟ್ಟಲೆ ಬೇಕಾಗುತ್ತದೆ. ಅಕ್ಷರವನ್ನು ಓದುವುದೇ ಒಂದು ಸಮಸ್ಯೆ. ಅದು ಪರಿಪೂರ್ಣವಾದ ಶಾಸ್ತ್ರೀಯ ಲಿಪಿಯಾಗಿಲ್ಲ. ಅಕ್ಷರ ಕೂಡಿಸುವುದನ್ನು ಕಲಿಯಬೇಕು. ಅದೊಂದು ಚಿತ್ರ ಭ್ರಮೆಯ ಒಗಟಿನ ಭಾಷೆಯಾಗಿದೆ. ಸ್ವರಗಳು ಸರಿಯಾಗಿಲ್ಲ. ಮತ್ತು ಸಾಕಷ್ಟಿಲ್ಲ, ಸ್ಪಷ್ಟವಾಗಿಲ್ಲ. ಬೇಕಾದವರು ಭಾರತೀಯ ಭಾಷೆಯ ಯಾವುದಾದರೂ ಒಂದು ಪದ್ಯದ ಸಾಲನ್ನು ಉರ್ದುವಿನಲ್ಲಿ ಬರೆದು ಉರ್ದುಬಲ್ಲವನಿಗೆ ಓದಲು ಕೊಟ್ಟರೆ, ಅವನು ಯಾವ ರೀತಿ ಓದುತ್ತಾನೆಂಬುದು ಗೊತ್ತಾಗುತ್ತದೆ. ಅದರಲ್ಲಿ ಎಷ್ಟು ಅನರ್ಥಗಳಾಗುತ್ತವೆ, ಕೊಲೆಯಾಗುತ್ತದೆ, ತಮಾಷೆ ಇರುತ್ತದೆ ಎಂಬುದು ಗೊತ್ತಾಗುತ್ತದೆ. ಸಂಸ್ಕೃತಪದಗಳನ್ನು ಬರೆಯಲು ಸಾಧ್ಯವೇ ಇಲ್ಲ.

## ಹಿಂದೀ ಮತ್ತು ದ. ಭಾ. ಭಾಷೆಗಳು

ವ್ಯಾಕರಣದಲ್ಲಿ ಹಿಂದಿಗೂ ಮತ್ತು ದ. ಭಾ. ಭಾಷೆಗಳಿಗೂ ಸಾಮ್ಯವಿಲ್ಲದೆ ಹೋದರೂ ಶಬ್ದ ಭಾಂಡಾರದಲ್ಲಿ ಹೇರಳ ಸಾಮ್ಯವಿದೆ. ಸಂಸ್ಕೃತವೇ ಇದಕ್ಕೆ ಕಾರಣ. ಗಣಿತ, ಭೂಗೋಳ, ಕಲೆ, ಸಂಗೀತ ಮೊದಲಾದುವು ಪಂಜಾಬಿನಿಂದ ಸಿಲೋನಿನ ವರೆಗೂ ವ್ಯಾಕರಣಬದ್ಧ ಪರಿಭಾಷೆಗಳಲ್ಲಿಯೇ ವ್ಯವಹಾರದಲ್ಲಿದೆ. ಶಾಲಾಶಬ್ದಗಳನ್ನು ಬಿಟ್ಟರೆ, ಆಯುರ್ವೇದ, ಧರ್ಮ, ಜ್ಯೋತಿಷ, ದರ್ಶನ ಮೊದಲಾದ ವಿಷಯಗಳ ಸಾವಿರಾರು ಶಬ್ದಗಳು ಭಾರತದ ಭಾಷೆಗಳಲ್ಲಿ ಒಂದಾಗಿ ಪರಿಣಮಿಸಿವೆ. ಹಿಂದುಸ್ತಾನಿ ಎಂದರೆ ಈ ಸಂಬಂಧವನ್ನು ಪ್ರತ್ಯೇಕಿಸುವ ಕೊಲ್ಲಿಯಂತಿದೆ. ೨೦೦೦ ವರ್ಷಗಳಿಂದ ಬೆಳೆದು ಬಂದ ಭಾಷಾ ಸಂಪರ್ಕ ಹಿಂದುಸ್ತಾನಿಯಿಂದ ಬೇರೆಯಾಗುತ್ತದೆ; ಉಪಯೋಗವಿಲ್ಲದಂತಾಗುತ್ತದೆ. ಹಿಂದಿಯೊಂದೇ ಈ ಭಾಷಾ ಸಂಪರ್ಕವನ್ನು ಬಿಗಿಪಡಿಸಲು ಮತ್ತು ಸುರಕ್ಷಿತಗೊಳಿಸಲು ಸಾಧ್ಯ ಮಾಡಬಲ್ಲದು.

ಹಿಂದುಸ್ತಾನಿ ನಿರ್ಮಾಪಕರು ನಮ್ಮ ದುರದೃಷ್ಟದಿಂದ ಭಾಷಾ ವಿಜ್ಞಾನಿಗಳಲ್ಲ; ರಾಜಕೀಯ ವ್ಯಕ್ತಿಗಳು. ಭಾಷಾ ವಿಷಯದಲ್ಲೂ ಮುಸಲ್ಮಾನರಿಗೆ ಸ್ಥಳ ಕೊಡುವುದಕ್ಕಾಗಿ ಹಿಂದುಸ್ತಾನಿಯನ್ನು ಕಲ್ಪಿಸಲಾಗಿದೆ.

(ಘಟನಾ ಸಮಿತಿಯು) ದೇವನಾಗರೀ ಲಿಪಿಯಲ್ಲೇ ಬರೆದ ಹಿಂದೀ ಭಾಷೆಯನ್ನು ರಾಷ್ಟ್ರ ಭಾಷೆಯಾಗಿ ಸ್ವೀಕರಿಸಿ ದಕ್ಷಿಣ ಉತ್ತರ ಭಾಗಗಳ ಸಾಂಸ್ಕೃತಿಕ ಸಂಪರ್ಕವನ್ನು ವೃದ್ಧಿಗೊಳಿಸುವುದೆಂದು ಆಶಿಸಲಾಗಿದೆ.

---

# ಸಾದರ ಸ್ವೀಕಾರ

೧. ಆನಂದಜ್ಯೋತಿ
ಸಂಪಾದಕರು— ಎಂ. ರಾಮಯ್ಯ. ೧೫ ಲಾಲಬಾಗ ಕೋರ್ಟರೋಡ ಬೆಂಗಳೂರನಗರ.
ಪುಟಗಳು ೫೦ ಬೆಲೆ ೩ ಆಣೆ

೨. ಕಹಳೆ
ಸಂಪಾದಕರು— ಕೆ. ವೆಂಕಟಸುಬ್ಬಯ್ಯ. ೫೫೦ ರಾಮಚಂದ್ರ ಅಗ್ರಹಾರ ಮೈಸೂರು.
ಪುಟಗಳು ೧೨ ಬೆಲೆ ೧ ಆಣೆ

೩. ನವಯುಗ ಸ್ವಾತಂತ್ರ್ಯ ಸಂಚಿಕೆಗಳು
ಸಂಪಾದಕರು— ಕೆ. ಎಚ್. ಶೆಟ್ಟಿ ನವಯುಗ ಪ್ರೆಸ್ ಉಡುಪಿ.
ಪುಟಗಳು ೬೦ ಬೆಲೆ ೫ ಆಣೆ

೪. ವಿಶ್ವಕರ್ನಾಟಕ
ಸಂಪಾದಕರು— ಎಮ್. ಎಸ್. ಶಾಮಯ್ಯಂಗಾರ ವಿಶ್ವಕರ್ನಾಟಕ ಆಫೀಸ. ಬೆಂಗಳೂರುನಗರ.
ಪುಟಗಳು ೫೦ ಬೆಲೆ ೪ ಆಣೆ

೫. ನವಭಾರತ
ಸಂಪಾದಕರು— ವ್ಹಿ. ಎಸ್. ಕುಡ್ವಾ ನವಭಾರತ ಪ್ರೆಸ್ ಮಂಗಳೂರ.
ಪುಟಗಳು ೪೦ ಬೆಲೆ ೬ ಆಣೆ

೬. ಸ್ವಾತಂತ್ರ್ಯೋದಯ(ನವೀನ ದ್ವೈವಾರ ಪತ್ರಿಕೆ)
ಸಂಪಾದಕರು— ಪಿ. ಸೀಪಪ್ಪ ೧೬೮ ಬಳೆಪೇಟೆ ಬೆಂಗಳೂರುನಗರ.
ಪುಟಗಳು ೮ ಬೆಲೆ ೦-೦-೬

೭. ದಕ್ಷಿಣೀಹಿಂದ (ಹಿಂದೀ ಸ್ವಾತಂತ್ರ್ಯೋತ್ಸವ ಸಂಚಿಕೆ)

8. U. P. Information
(Freedom Number) Aug 15
By The Directorate of Information U. P. Allahabad India

9. The All India Women's Conference
Report of the Nineteenth Session Dec. 28 to 31-1946. Akola (Berar)
ಸಂಪಾದಕರು— ಶ್ರೀ. ರಮಾನಂದ ಶಾರ್
ಹಿಂದೀ ಪ್ರಚಾರ ಸಭಾ ಮದ್ರಾಸ ೧೭.
ಪುಟಗಳು ೩೦ ಬೆಲೆ ೮ ಆಣೆ

೧೦. ಬಿತ್ತಿದಬೆಳೆ
ಲೇಖಕರು— ಶಿವರಾಮ ಕಾರಂತ.
ಪ್ರಕಾಶಕರು— ಮನೋಹರ ಗ್ರಂಥಪ್ರಕಾಶನ ಸಮಿತಿ ಧಾರವಾಡ.
ಪುಟಗಳು ೧೩೦ ಬೆಲೆ ೧ ರೂ.

೧೧. ರಾಷ್ಟ್ರಪುರುಷ
ಲೇಖಕರು— ಮಿರ್ಜಿ ಅಣ್ಣಾರಾಯ.
ಪ್ರಕಾಶಕರು— ಮನೋಹರ ಗ್ರಂಥಪ್ರಕಾಶನ ಸಮಿತಿ ಧಾರವಾಡ.
ಪುಟಗಳು ೭೨೦ ಬೆಲೆ ೭ ರೂ.

೧೨. ಮೇಘದೂತ
ಲೇಖಕರು— ಕು ವೆಂಪು.
ಪ್ರಕಾಶನ— ಕಾವ್ಯಾಲಯ ಮೈಸೂರು.
ಪುಟಗಳು ೩೦ ಬೆಲೆ ೬ ಆಣೆ

೧೩. ಶೂದ್ರ ತಪಸ್ವಿ—ಮತ್ತು ಬಲಿದಾನ
ಲೇಖಕರು— ಕು ವೆಂಪು.
ಪ್ರಕಾಶನ— ಕಾವ್ಯಾಲಯ ಮೈಸೂರು.
ಪುಟಗಳು ೫೬ ಬೆಲೆ ೧೨ ಆಣೆ

೧೪. ಗಣೇಶದರ್ಶನ
ಲೇಖಕರು— ಪು. ತಿ. ನರಸಿಂಹಾಚಾರ.
ಪ್ರಕಾಶಕರು— ಕಾವ್ಯಾಲಯ ಮೈಸೂರು.
ಪುಟಗಳು ೯೦ ಬೆಲೆ ೧-೮-೦

೧೫. ಬಿರಳ್—ಗೆ—ಕೊರಳ್
ಲೇಖಕರು— ಕು ವೆಂಪು.
ಪ್ರಕಾಶಕರು— ಕಾವ್ಯಾಲಯ ಮೈಸೂರು.
ಪುಟಗಳು ೭೦ ಬೆಲೆ ೧ ರೂ.

೧೬. ಪಂಚವರ್ಣ
ಲೇಖಕರು— ಕೆ. ಕೇಶವ ಕುಡುವ.
ಪ್ರಕಾಶಕರು— ನವಭಾರತ ಪುಸ್ತಕ ಭಾಂಡಾರ ಉಡುಪಿ.
ಪುಟಗಳು ೪೦ ಬೆಲೆ ೬ ಆಣೆ

೧೭. ನಂದಾದೀಪ
ಲೇಖಕರು— ಕೊರಡಕಲ್ ಶ್ರೀನಿವಾಸರಾವ್
ಪ್ರಕಾಶಕರು— ಕಿರಿಯರ ಪ್ರಪಂಚ ಉಡುಪಿ
ಪುಟಗಳು ೧೦೦ ಬೆಲೆ ೧೪ ಆಣೆ

೧೮. ಜನಪದ ರಾಷ್ಟ್ರೀಯ ಗೀತಗಳು
(ಗೀ—ಗೀ ಪದ್ಯ ಸಂಗ್ರಹ)
ಲೇಖಕರು— ಭೀಮಕವಿ.
ಪ್ರಕಾಶಕರು— ಜನತಾ ಸೇವಕ ಸಮಾಜ ಬೈಲಹೊಂಗಲ.
ಪುಟಗಳು ೧೦೦ ಬೆಲೆ ೨ ರೂ.

19. India of My Dreams
By M. K. Gandhi
Pub. By Hind Kitab Ltd. Bombay.
ಪುಟಗಳು ೧೩೦ ಬೆಲೆ ೨ ರೂ.

೨೦. ಸ್ವಾತಂತ್ರ್ಯ ಮಹೋತ್ಸವ [ಕವಿತೆ]
ಲೇಖಕರು } ಕೋ. ಚನ್ನಬಸಪ್ಪ
ಪ್ರಕಾಶಕರು } ಬಳ್ಳಾರಿ.
ಪುಟಗಳು ೧೪ ಬೆಲೆ ೪ ಆಣೆ

## ಮಹಾತ್ಮರ ಉಪವಾಸ

ವಿರೋಧಿಗಳ ಆಹ್ವಾನವನ್ನು ಸ್ವೀಕರಿಸಿ ಅನ್ನುವದಕ್ಕಿಂತ ಹಿಂದು—ಮುಸ್ಲಿಂ ಐಕ್ಯದ ಬಗ್ಗೆ ಇದ್ದ ಕಳಕಳಿಯಿಂದ ಮಹಾತ್ಮರು ಸ್ವಾತಂತ್ರ್ಯೋತ್ಸವ ದಿನವನ್ನು ದಿಲ್ಲಿಯಲ್ಲಿ ಕಳೆಯದೆ ಜಾತೀಯ ಭೂತಕ್ಕೆ ಬಲಿಯಾದ ಕಲಕತ್ತೆಗೆ ಧಾವಿಸಿ ಬಂದರು. ಕಲಕತ್ತೆಯಲ್ಲಿ ಶಾಂತತೆಯನ್ನು ಪ್ರಸ್ಥಾಪಿಸಿದ ಹೊರತು ಅಲ್ಲಿಂದ ಕದಲುವದಿಲ್ಲೆಂದು ಹಟಹಿಡಿದು ದಂಗೆ ಊರ್ಜಿತವಲ್ಲಿದ್ದ ಬಾಲಿಯಾಘಾಟ ವಿಭಾಗದಲ್ಲಿಯೆ ಮುಸ್ಲಿಂನೊಬ್ಬನ ಮನೆಯಲ್ಲಿ ಬಿಡಾರ ಬಿಟ್ಟರು. ಜ. ಸುಹ್ರವರ್ದಿಯವರೂ ಇವರ ಈ ಸತ್ಕಾರ್ಯದಲ್ಲಿ ನೆರವಾಗಲು ಅಲ್ಲಿಯೆ ಉಳಿದರು. ಉಭಯತರ ಪ್ರಯತ್ನಗಳಿಂದ ನಗರದಲ್ಲಿಯ ಪರಿಸ್ಥಿತಿ ಶಾಂತವಾಯಿತು. ಮಹಾತ್ಮರು ತಮ್ಮ ಕಾರ್ಯವನ್ನು ನೌಖಾಲಿಯಲ್ಲಿ ಮುಂದುವರಿಸಬೇಕೆಂದು ಸಪ್ಟಂಬರ ೨ಕ್ಕೆ ನೌಖಾಲಿಗೆ ಶಾಂತಚಿತ್ತರಾಗಿ ತೆರಳಬೇಕೆಂದು ನಿಶ್ಚಯಿಸಿದರು. ಆದರೆ ದುರ್ದೈವದಿಂದ ಒಂದನೇ ತಾರೀಖಿಗೆ ಕಲಕತ್ತೆಯಲ್ಲಿ ಜಾತೀಯ ದಂಗೆಯು ಪುನಃ ತಲೆಯೆತ್ತಿ ತನ್ನ ವಿಕಾರ ಸ್ವರೂಪದಿಂದ ಎಲ್ಲರನ್ನೂ ಕಂಗೆಡಿಸಿತು. ಮಹಾತ್ಮರು ಬಹು ವ್ಯಥಿತರಾಗಿ ಕಲಕತ್ತೆಯ ಜನರಲ್ಲಿ ವಿವೇಕವನ್ನು ಜಾಗ್ರತಗೊಳಿಸುವದಕ್ಕಾಗಿ ಒಂದನೇ ತಾರೀಖಿಗೆ ರಾತ್ರಿ ೮—೧೫ ಕ್ಕೆ ಉಪವಾಸ ಕೈಕೊಂಡರು.

ಕಲಕತ್ತೆಯಲ್ಲಿ ಮಹಾತ್ಮರು ತೋರಿದ ಚಮತ್ಕಾರವನ್ನು ಕಂಡು ಪಂಜಾಬಿಗಳು ಅವರನ್ನು ಆದರದಿಂದ ತಮ್ಮಲ್ಲಿಗೆ ಬರಮಾಡಿಕೊಳ್ಳಲಿಚ್ಛಿಸಿದ್ದರು. ಆದರೆ ಈ ದಂಗೆ ತಾವಿದ್ದಲ್ಲಿಯೆ ಪುನಃ ಪ್ರಾರಂಭವಾದ್ದರಿಂದ 'ಯಾವ ಮೋರೆಯಿಂದ ನಾನು ಪಂಜಾಬಕ್ಕೆ ಹೋಗಲಿ' ಎಂದು ಹಲುಬಿದರು. ಜನರಲ್ಲಿಯ ವಿವೇಕವನ್ನು ಹೊಡೆದೆಬ್ಬಿಸಲು ಮಹಾತ್ಮರು ತಮ್ಮ ಕೊನೆಯ ಅಸ್ತ್ರವನ್ನು ಹಿರಿದಿದ್ದಾರೆ. ಜಾತಿ ದ್ವೇಷದಿಂದ ವ್ಯಾಕುಲವಾಗಿರುವ ಭಾರತಕ್ಕೆ ನಿಜವಾದ ಶಾಂತಿ ಸೌಹಾರ್ದಗಳನ್ನು ನೀಡಬಲ್ಲ ಶಕ್ತಿ ಮಹಾತ್ಮರೊಬ್ಬರಲ್ಲಿದೆಯೆಂಬುದನ್ನು ಮರೆಯಲಿಕ್ಕಾಗದು. ಅವರ ಉಪದೇಶದಂತೆ ನಡೆದರೆ ಭಾರತದ ಕಲ್ಯಾಣ ಕಟ್ಟಿಟ್ಟದ್ದು. ಮಹಾತ್ಮರೀಗ ಉಪವಾಸವನ್ನು ಹೂಡಿ ಜನರಿಗೆ ಆಹ್ವಾನವನ್ನೇ ಇತ್ತಿದ್ದಾರೆ. ೭೮ ವರ್ಷದ ಮುಪ್ಪಿನ ಮಹಾತ್ಮರನ್ನು ಇಂತು ಹೇಳಿಸಿ ಉಪವಾಸ ಕೈಕೊಳ್ಳುವಂತೆ ಮಾಡುವದು ಯಾರಿಗೂ ಭೂಷಣವಲ್ಲ. ಮಹಾತ್ಮರ ಪ್ರಾಣವುಳಿಸುವ ಹೊಣೆ ಬಂಗಾಲಿಗಳದು ಎಂದು ರಾಜಾಜಿಯವರು ಎಚ್ಚರಿಸಿದ್ದು ಸಮಯೋಚಿತವಾಗಿದೆ. ಮಹಾತ್ಮರು ಉಪವಾಸ ಕೈಕೊಳ್ಳದಂತೆ ರಾಜಾಜಿಯವರೂ ಆಚಾರ್ಯ ಕೃಪಲಾನಿಯವರೂ ಪ್ರಯತ್ನಿಸಿದರು. ಆದರೆ ಅವರ ಮನವೊಲಿಸುವದು ಸಾಧ್ಯವಾಗಲಿಲ್ಲ. ಉಪವಾಸ ಪ್ರಾರಂಭಿಸಿದ ಮೂರು ದಿನಗಳ ನಂತರ ಮಹಾತ್ಮರ ಪ್ರಕೃತಿಯು ಬಹಳ ಕ್ಷೀಣವಾಗಿದೆ. ಈಗಿನ ದೇಹಸ್ಥಿತಿಯಲ್ಲಿ ಏನಾದರೂ ಹೆಚ್ಚುಕಡಿಮೆಯಾದರೆ ಉಪವಾಸದಿಂದ ಅನಿಷ್ಟ ಪರಿಣಾಮವಾಗುವದೆಂದು ಡಾಕ್ಟರರ ಅಭಿಪ್ರಾಯವಾಗಿದೆ. ಇಂಥ ಪರಿಸ್ಥಿತಿಯಲ್ಲಿ ಮಹಾತ್ಮರ ಪ್ರಾಣವನ್ನುಳಿಸಿಕೊಳ್ಳುವ ಭಾರ ಕಲಕತ್ತೆಯ ನಾಗರಿಕರನ್ನೇ ಕೂಡಿದೆ.

## ಜಿನ್ನಾರ ಭಾಷಣ

"ಒಂದು ಹನಿ ರಕ್ತ ಸುರಿಸದೆ ಪಾಕಿಸ್ತಾನವನ್ನು ಪಡೆದುಕೊಂಡಿದ್ದೇವೆ. ಈ ನಮ್ಮ ಅಪೂರ್ವ ವಿಜಯವನ್ನು ಈಗ ಕೊಲೆ ಸುಲಿಗೆ ರಕ್ತಪಾತಾದಿಗಳಿಂದ ಕಲಂಕಿತಗೊಳಿಸುವದೆ? ಎಂದು ಬ್ಯಾ. ಜಿನ್ನಾರು ಲಾಹೋರದಲ್ಲಿ ೩೧ ನೇ ತಾರೀಖಿಗೆ ಆಕಾಶವಾಣಿಯಲ್ಲಿ ಭಾಷಣ ಮಾಡಿ ಈ ದಂಗೆಗೆ ಕಾರಣರಾರು ಎಂಬುದನ್ನು ನಾನೇನೂ ಹೇಳುವದಿಲ್ಲ; ಚರಿತ್ರಕಾರರೇ ನಿಷ್ಪಕ್ಷಪಾತದಿಂದ ನಿರ್ಧರಿಸಲಿ ಎಂದು ಸೂಚಿಸಿದ್ದಾರೆ. ಇವರಿಗೆ ಉತ್ತರವಾಗಿ ಪಂ. ನೆಹರೂರು ಶೇಖುಪುರದಲ್ಲಿ ಒಂದನೇ ತಾರೀಖಿಗೆ ಮುಸ್ಲಿಂರಿಗೆ ಹೇಳಿದ ಮಾತುಗಳನ್ನು ಉದಾಹರಿಸಬಹುದು. "ಯುದ್ಧವನ್ನು ನಿಲ್ಲಿಸಿರೆಂದು ಕೇಳಿಕೊಳ್ಳುತ್ತಿರುವಿರಿ? ಏನು ವಿವೇಕವನ್ನೆಲ್ಲ ಕಳೆದುಕೊಂಡಿರಾ? ಈ ಹಾಳಾದ ಗ್ರಾಮಗಳೂ ಬೀದಿಯಲ್ಲಿ ಬಿದ್ದ ಹೆಣಗಳೂ ಏನನ್ನು ನಿರ್ದೇಶಿಸುತ್ತವೆ? ಯುದ್ಧವನ್ನು ಮಾಡುತ್ತಿರುವವರಾರು?" ಎಂದು ಪಂ. ನೆಹರೂರಂಥ ಹೊಣೆಗಾರ ವ್ಯಕ್ತಿಗಳು ಆಡಿ ತೋರಿಸುವದರ ಮಹತ್ವವನ್ನಾದರೂ ಬ್ಯಾ. ಜಿನ್ನಾರು ಅರಿತುಕೊಳ್ಳಬೇಕು. ಪಶ್ಚಿಮ ಪಂಜಾಬದಲ್ಲಿ ದಂಗೆ ಪ್ರಾರಂಭವಾಗಿ ಹದಿನೈದು ದಿನಗಳಾದರೂ ಕರಾಚಿಯಿಂದ ಹೊರಬೀಳುವ ಮನಸ್ಸಿಲ್ಲದಿದ್ದ ಬ್ಯಾ. ಜಿನ್ನಾರು ಪಂ. ನೆಹರೂರ ಪಂಜಾಬದ ಸಂಚಾರದ ನಂತರ ಅನಿವಾರ್ಯವಾಗಿ ಲಾಹೋರದ ವರೆಗೆ ಬಂದರು.

# ಸಂಪಾದಕೀಯ ಟೀಕಾಟಿಪ್ಪಣಿಗಳು

ಸಂಯುಕ್ತ ಸಂರಕ್ಷಣ ಮಂಡಳದ ಸಭೆಯಲ್ಲಿ ಭಾಗವಹಿಸಿದರು. ಆದರೆ ತಮ್ಮ ಪಶ್ಚಿಮ ಪಂಜಾಬದಲ್ಲಿ ಜಾತೀಯ ಭೂತವು ಅಕಾಂಡ ತಾಂಡವ ನಡೆಸಿದ್ದಾಗ ಪ್ರಾಂತವನ್ನೆಲ್ಲ ಸುತ್ತಿಕೊಂಡು ಬರುವ ಸೌಜನ್ಯವನ್ನು ತೋರಲಿಲ್ಲ. ಮುಕ್ತಿ ಪೂರ್ವ ಪಂಜಾಬದಲ್ಲಿಯೆ ಮುಸ್ಲಿಂರ ಕಗ್ಗೊಲೆ ನಡೆದಿದೆಯೆಂದು ಆಕ್ರೋಶ ನಡೆಸಿದರು. ಮುಸ್ಲಿಂ ಲೀಗಿನ ರಾಷ್ಟ್ರರಕ್ಷಕ ದಳದವರೂ ಪೋಲೀಸರೂ ಸೇರಿಕೊಂಡೆ ಪಶ್ಚಿಮ ಪಂಜಾಬದಲ್ಲಿ ನಡೆಸಿದ ಕೊಲೆ ಸುಲಿಗೆಗಳ ಮೇಲೆ ಬ್ಯಾ. ಜಿನ್ನಾರು ತೆರೆಯೆಳೆದು ಹಿಂದುಸ್ತಾನದ ಪ್ರಾಂತವಾದ ಪೂರ್ವ ಪಂಜಾಬದ ಬಗ್ಗೆ ಕೋಪಾಟೋಪವನ್ನು ತೋರಿದ್ದಾರೆ. ಈಗ ಪಂ. ನೆಹರೂರ ಸಂಚಾರದಲ್ಲಿ ಮುಸ್ಲಿಮರ ಅತ್ಯಾಚಾರಗಳು ಒಂದೊಂದಾಗಿ ಬಯಲಿಗೆ ಬೀಳಹತ್ತಿವೆ. ಇದನ್ನು ಕಂಡು ಬ್ಯಾ. ಜಿನ್ನಾರಿಗೆ ಕಸವಿಸಿಯಾಗುತ್ತಿರಬಹುದು. ಏನೇ ಇರಲಿ, ಬ್ಯಾ. ಜಿನ್ನಾರ ಭಾಷಣದಲ್ಲಿಯ ಒಂದೇ ಒಂದು ಗಮನಾರ್ಹ ಅಂಶವೆಂದರೆ ಸರ್ವ ಪ್ರಯತ್ನದಿಂದ ದಂಗೆಯನ್ನು ಹತ್ತಿಕ್ಕಬೇಕು ಎಂದು ಹೇಳಿದ್ದು. ಆದರೆ ಬರಿ ಮಾತಿನಿಂದ ಏನೂ ಪ್ರಯೋಜನವಾಗಲಾರದು. ಪ್ರತ್ಯಕ್ಷ ಉಪಾಯಗಳನ್ನೇನಾದರೂ ಯೋಜಿಸಲು ಮುಂದೆ ಬರಲಿ.

## ನಿರಾಶ್ರಿತರ ಸ್ಥಾನಾಂತರ

ಪೂರ್ವ ಪಂಜಾಬದಲ್ಲಿ ಮುಸ್ಲಿಮರ ಕಗ್ಗೊಲೆ ನಡೆದಿದೆಯೆಂದು ಪಾಕಿಸ್ತಾನಿಗಳೂ ಪಶ್ಚಿಮ ಪಂಜಾಬದಲ್ಲಿ ಹಿಂದೂ—ಶೀಖರು ಮುಸ್ಲಿಮರ ಕೈಯಲ್ಲಿ ನಿರ್ನಾಮ ಹೊಂದುತ್ತಿದ್ದಾರೆಂದು ಹಿಂದುಸ್ತಾನಿಗಳೂ ವಿವಂಚನೆಗೀಡಾಗಿದ್ದಾರೆ. ಮುಸ್ಲಿಂರು ಪಶ್ಚಿಮ ಪಂಜಾಬಕ್ಕೆ ಹಾಗೂ ಹಿಂದೂ ಶೀಖರು ಪೂರ್ವ ಪಂಜಾಬಕ್ಕೆ ತಮ್ಮ ಜೀವ ಉಳಿಸಿಕೊಳ್ಳಲು ಧಾವಿಸಿಬರುತ್ತಿದ್ದಾರೆ. ಈ ನಿರಾಶ್ರಿತರಿಗೆ ಸೌಕರ್ಯ ಒದಗಿಸಿಕೊಡುವ ವಿಚಾರವೇ ಈಗ ಅಲ್ಲಿಯ ಮಂತ್ರಿಗಳ ತಲೆತಿನ್ನುತ್ತಿದೆ. ಇನ್ನೊಂದುಮಾತೆಂದರೆ ಪೂರ್ವಪಂಜಾಬ ಸರಕಾರವು ತಮ್ಮ ಪ್ರಾಂತದಲ್ಲಿ ದಂಗೆ ಕಡಿಮೆಯಾಗಿದೆ. ಪರಿಸ್ಥಿತಿ ಸುಧಾರಿಸುತ್ತಿದೆಂಬ ಪ್ರಕಟನೆ ಹೊರಡಿಸಿದೆ. ಆದರೆ ಲಾಹೋರದಿಂದ ಅಂಥ ಪ್ರಕಟನೆ ಏನೂ ಹೊರಟಿಲ್ಲ. ಈಗ ಪಂ. ನೆಹರೂರಿಗೆ ಈ ನಿರಾಶ್ರಿತರ ಯೋಗಕ್ಷೇಮಕ್ಕಿಂತ ಅವರನ್ನು ಪಶ್ಚಿಮ ಪಂಜಾಬದಿಂದ ಹೇಗೆ ಪಾರುಮಾಡಿಕೊಂಡು ಬರಬೇಕೆಂಬ ಚಿಂತೆಹತ್ತಿದೆ. ಪಂ. ನೆಹರೂರು ಹೋದ ಹೋದಲ್ಲೆಲ್ಲ ನಿರಾಶ್ರಿತರನ್ನು ಕಂಡು ಅವರಿಗೆ ಧೈರ್ಯಹೇಳಿ ಮೋಟಾರುಗಳಿಂದ ಕೊನೆಗೆ ಅಂಥ ಪ್ರಸಂಗ ಬಂದಲ್ಲಿ ವಿಮಾನಗಳಿಂದಾದರೂ ಅವರನ್ನು ಪಾರುಮಾಡುವದಾಗಿ ಹೇಳಿದ್ದಾರೆ. ನಿರಾಶ್ರಿತರು ಸುರಕ್ಷಿತವಾಗಿ ಪೂರ್ವಪಂಜಾಬಕ್ಕೆ ಬರಬೇಕು ಎಂದು ಪಶ್ಚಿಮಪಂಜಾಬದಲ್ಲಿ ಲಾಹೋರದಲ್ಲಿ ಮೆ. ಜ. ರೀಜರನೇತೃತ್ವದಲ್ಲಿ ಪೂರ್ವ ಪಂಜಾಬ ಒಂದು ದಳವನ್ನು ಇಡಲಾಗಿದೆ. ಈಗ ಉಭಯ ಸರಕಾರಗಳೂ ಸೇರಿ ಈ ವಿಷಯವನ್ನು ಪರಿಶೀಲಿಸುತ್ತಿರುವದರಿಂದ, ಕೆಲವು ಹೊಸ ಉಪಾಯಗಳನ್ನು ಕೈಕೊಳ್ಳಲಿರುವದರಿಂದ ನಿರಾಶ್ರಿತರ ಸ್ಥಾನಾಂತರದ ಪ್ರಶ್ನೆ ಸುಲಭವಾಗಿ ಬಗೆಹರಿಯುವ ಆತೆಯಿದೆ.

## ಮೈಸೂರ ಚಲೊ

ಭಾರತವು ಸ್ವತಂತ್ರವಾಗಿರುವ ಕಾಲದಲ್ಲಿ ತಮಗೂ ಸ್ವಾತಂತ್ರ್ಯ—ಹೊಣೆಗಾರ ರಾಜ್ಯಪದ್ಧತಿ— ಬೇಕೆಂದು ಮೈಸೂರು ಕಾಂಗ್ರೆಸ್ಸು ಸಪ್ಟಂಬರ ಒಂದನೇ ತಾರೀಖಿನಿಂದ ಸತ್ಯಾಗ್ರಹ ಪ್ರಾರಂಭಿಸಿದೆ. ಈಗೆರಡು ತಿಂಗಳ ಹಿಂದೆ ಕಾಂಗ್ರೆಸಿನ ಈ ಬೇಡಿಕೆಯು ಮಂಡಿಸಲ್ಪಟ್ಟಾಗ ಶ್ರೀಮನ್ಮಹಾರಾಜರು ಒಂದು ಘೋಷಣೆ ಹೊರಡಿಸಿ ಮೈಸೂರಿಗೆ ರಾಜಕೀಯ ಸುಧಾರಣೆಗಳನ್ನು ಕೊಡುವದಕ್ಕಾಗಿ ಪ್ರಯತ್ನ ನಡೆಸಿದ್ದು ಆ ಬಗ್ಗೆ ವರದಿ ತಯಾರಿಸಲು ದಿವಾನರಾದ ಸರ್ ಎ. ರಾಮಸ್ವಾಮಿಯವರಿಗೆ ಹೇಳಲಾಗಿದೆಯೆಂದು ಅರುಹಿದರು. ಅನಂತರ ದಿವಾನರು ಇತರ ಪಕ್ಷ ಸಂಗಡದವರೊಡನೆ ನಡೆಸಿದಂತೆ ಮೈಸೂರ ಕಾಂಗ್ರೆಸಿನೊಡನೆಯೂ ವಿಚಾರವಿನಿಮಯ ನಡೆಸಿದರು. ಆದರೆ ಯಾವದೊಂದು ತೀರ್ಮಾನಕ್ಕೆ ಬರಲಿಲ್ಲ. ಬಳಿಕ ಅವರು ನ್ಯೂಯಾರ್ಕ, ದಿಲ್ಲಿ ಹೀಗೆ ಮೈಸೂರು ಬಿಟ್ಟು ಸ್ವಕಾರ್ಯಕ್ಕಾಗಿ ಅಲೆದಾಡಿ ಮೈಸೂರು ಪ್ರಜೆಗಳ ಬೇಡಿಕೆಯನ್ನು ಕುರಿತು ಪೂರ್ಣ ಅಲಕ್ಷ್ಯವನ್ನೇ ತೋರಿದರು. ಕಾಂಗ್ರೆಸಿನವರೂ ಅವರಿಗೆ ಸಾಕಷ್ಟು ಸಮಯ ಕೊಟ್ಟು ಸಪ್ಟಂಬರ ಒಂದನೇ ತಾರೀಖಿನೊಳಗಾಗಿ ಹೊಣೆಗಾರ ರಾಜ್ಯ ಪದ್ಧತಿಯನ್ನು ನೀಡಲಿಲ್ಲವಾದರೆ ಸತ್ಯಾಗ್ರಹ ಪ್ರಾರಂಭಿಸುವದಾಗಿ ದಿವಾನರಿಗೆ ಕೊನೆಯ ಎಚ್ಚರಿಕೆಯನ್ನಿತ್ತರು. ದಿವಾನರು ಅಂತ್ಯಕಾಲಕ್ಕೆ ಎನ್ನುವಂತೆ ಅಂದರೆ ೩೧ ನೇ ತಾರೀಖಿನ ದಿನ ಇನ್ನೊಂದು ಪ್ರಕಟನೆ ಹೊರಡಿಸಿ ಮೈಸೂರ ಕಾಂಗ್ರೆಸಿನ ಬೇಡಿಕೆಯನ್ನು ವಿಚಾರಿಸಿ ತೀರ್ಮಾನಕ್ಕೆ ಬರುವಲ್ಲಿ ತಮ್ಮಿಂದ ವಿಳಂಬವಾದುದು ನಿಜ, ಇಷ್ಟು ದಿನ ಕಳೆದವರು ಇನ್ನೊಂದು ತಿಂಗಳ ತಡೆಯಬೇಕೆಂದು ಬಿನ್ನವಿಸಿದರು. ಆದರೆ ಇದು ದಿವಾನರ ಇನ್ನೊಂದು ವಿಳಂಬಕಾರೀ ಯುಕ್ತಿಯೆಂದು ಕಾಂಗ್ರೆಸು ಭಾವಿಸಿ ಸಪ್ಟಂಬರ ಒಂದನೇ ತಾರೀಖಿಗೆ ಸತ್ಯಾಗ್ರಹ ಪ್ರಾರಂಭಿಸಿ ಬಿಟ್ಟಿತು. ಕೂಡಲೆ ಹೊಣೆಗಾರ ರಾಜಪದ್ಧತಿ ಸ್ಥಾಪಿಸುವ ಮಹಾರಾಜರ ಘೋಷಣೆ ಹೊರಡದೆ ಸತ್ಯಾಗ್ರಹ ನಿಲ್ಲುವಂತಿಲ್ಲ. ಸ ಮಿ ೯ ಪ ದ ಕೊ ಚ್ಚಿ ಸಂಸ್ಥಾನಕ್ಕೆ ಹೊಣೆಗಾರ ರಾಜ್ಯಪದ್ಧತಿ ದೊರೆತಿರುವದರಿಂದ ಇವರಿಗೆ ಇನ್ನಷ್ಟು ಹುಮ್ಮಸ್ಸು ಬಂದಿದೆ.

ಒಂದನೇ ತಾರೀಖಿಗೆ ಮೈಸೂರು ಸಂಸ್ಥಾನದ ಪ್ರಮುಖ ಗ್ರಾಮಗಳಲ್ಲೆಲ್ಲ ಹರತಾಳ, ಧ್ವಜವಂದನೆ ನಡೆಯಿತು. ಸಪ್ಟಂಬರ ೧೪ಕ್ಕೆ ಅರಮನೆಯೆದುರು ಸತ್ಯಾಗ್ರಹ ಹೂಡಿ ತಮ್ಮ ಬೇಡಿಗೆಷ್ಟು ಬೆಂಬಲವಿದೆಂಬುದನ್ನು ಮಹಾರಾಜರ ನಿದರ್ಶನಕ್ಕೆ ತಂದು ಕೊಡಬೇಕೆಂದು ನಿರ್ಧರಿಸಿದ್ದಾರೆ. ಅಲ್ಲಿಯ ವರೆಗೆ ಮೈಸೂರ ಚಲೋ ಎಂಬುವದೇ ಇವರ ಘೋಷವಾಗಿದೆ. ಅಲ್ಲಿ ದಬ್ಬಾಳಿಕೆಯೂ ಈಗ ಪ್ರಾರಂಭವಾಗಿದೆ. ಸತ್ಯಾಗ್ರಹ ಸುದ್ದಿಗಳನ್ನು ಪ್ರಸಿದ್ಧ ಪೂರ್ವ ನಿಯಂತ್ರಣಕ್ಕೊಳಪಡಿಸದೆ ಪ್ರಕಟಿಸಕೂಡದು ಎಂದು ತಾಯಿನಾಡು, ಡೇಲಿ ನ್ಯೂಜ ಪತ್ರಿಕೆಗಳಿಗೆ ಕಟ್ಟಾಜ್ಞೆಯನ್ನು ಹೊರಡಿಸಿದ್ದರಿಂದ ಅವು ಪ್ರಸಿದ್ಧಿಯನ್ನೇ ನಿಲ್ಲಿಸಿಬಿಟ್ಟಿವೆ. ಸತ್ಯಾಗ್ರಹ, ಹೂಡಿದ ಶ್ರೀ ಚೆಂಗಲರಾಯ ರೆಡ್ಡಿ ಮುಂತಾದ ಮೈಸೂರ ಕಾಂಗ್ರೆಸ ಕಾರ್ಯಸಮಿತಿಯ ಸದಸ್ಯರನ್ನು ಬಂಧಿಸಲಾಗಿದೆ. ಅರಮನೆಯ ಮುಂದೆ ಮುಕಪ್ರದರ್ಶನ ನಡೆಯಬಾರದೆಂದು ಸರಕಾರವು ನಿರ್ಬಂಧಿಸಿದೆ. ಅದನ್ನು ಹತ್ತಿಕ್ಕಲು ದಬ್ಬಾಳಿಕೆ, ಅದನ್ನು ಪ್ರತಿಭಟಿಸಲು ಪುನಃ ಸತ್ಯಾಗ್ರಹ ಈ ರೀತಿ ವೇಳೆಗಳೆಯದೆ ತಮ್ಮ ಪ್ರಜೆಗಳ ಬೇಡಿಕೆಗಳನ್ನು ಮೈಸೂರ ಮಹಾರಾಜರು ಸ್ವತಃ ಪರಿಶೀಲಿಸಿ ಈಗಿನ ಸತ್ಯಾಗ್ರಹದ ಮೂಲ ಕಾರಣವನ್ನೇ ತಿತ್ತೊಗೆಯುವಂತೆ ಅವರು ಪ್ರಯತ್ನಿಸಬೇಕು ಎಂದು ಸೂಚಿಸ ಬಯಸುತ್ತೇವೆ. ಇದೇ ೧೪ಕ್ಕೆ ಅರಮನೆಯ ಮುಂದೆ ನಡೆಯುವ ಮುಕ ಪ್ರದರ್ಶನವನ್ನು ಮಹಾರಾಜರು ತಮ್ಮ ಪ್ರಜೆಗಳನ್ನು ಸಂತುಷ್ಟಗೊಳಿಸಿ ತಡೆಯುವರಾಗಿ ಹಾರೈಸುತ್ತೇವೆ.

## ವಿಷದ ಮುಳ್ಳು ಹೋಯಿತು

ಸ್ವತಂತ್ರ ಭಾರತದಲ್ಲಿ ಅಲ್ಪಸಂಖ್ಯಾತರಿಗಾಗಿ ಪ್ರತ್ಯೇಕ ಮತದಾರ ಸಂಘಗಳಿರಬಾರದು. ಅವರಿಗೆ ಶಾಸನ ಸಭೆಗಳಲ್ಲಿ ಅವರವರ ಜನಸಂಖ್ಯೆಯ ಪ್ರಮಾಣದಿಂದ ಸ್ಥಳಗಳನ್ನು ಕಾಯ್ದಿಡಲಾಗುವದು ಎಂಬ ಕಲಮು ನಿಂದೊಡಗೂಡಿದ ಸರದಾರ ಪಟೇಲರ ಅಲ್ಪಸಂಖ್ಯಾತರ ವರದಿಯು ಕಳೆದವಾರ ಘಟನಾ ಸಮಿತಿಯಲ್ಲಿ ಸ್ವೀಕೃತವಾಗಿದೆ. ಇದರಿಂದ ಜಾತೀಯ ಭಾವನೆಯನ್ನು ಹಬ್ಬಿಸುವ ವಿಷದ ಮುಳ್ಳಾದ ಪ್ರತ್ಯೇಕ ಮತದಾರ ಸಂಘಕ್ಕೆ ಸ್ವತಂತ್ರ ಭಾರತದಲ್ಲಿ ಅವಕಾಶವಿಲ್ಲದಾಯಿತು.

ಆದರೆ ಲೀಗಿನವರು ತಮಗೆ ಪ್ರತ್ಯೇಕ ಮತದಾರ ಸಂಘಗಳು ಬೇಕೆಂದು ಚರ್ಚೆಯ ಕಾಲಕ್ಕೆ ಆಕ್ಷೇಪ ಎತ್ತಿದರು. ಆದರೆ ಈ ವಿಭಾಜಕ ಧೋರಣೆಯನ್ನು ಸಹಿಸದ ಸರದಾರ ಪಟೇಲರು "ನಿಮ್ಮಂಥ ಹೊರಗಿನವರ ಪ್ರಯತ್ನದಿಂದ ಬೇಕಾದವರಿಗೆ ಪಾಕಿಸ್ತಾನವನ್ನು ಕೊಟ್ಟಿದ್ದಾಯಿತು. ಈಗಿನ ಪಾಕಿಸ್ತಾನಿಗಳಿಗೆ ಅದು ಬೇಕಾಗಿರಲಿಲ್ಲ. ನಿಮ್ಮ ಚಳವಳಿಯ ಫಲ ಅದು. ಈಗ ಉಳಿದ ಭಾರತದಲ್ಲಿ ಪುನಃ ವಿಭಜನೆಗೆ ನಾವು ಒಪ್ಪುವದಿಲ್ಲ. ಪ್ರತ್ಯೇಕ ಮತದಾರ ಸಂಘ ಬೇಕಾದವರು ಪಾಕಿಸ್ತಾನಕ್ಕೆ ತೆರಳಿ" ಎಂದು ಖಂಡಿತವಾಗಿ ನುಡಿದರು. ಸರ್ವರಿಗೂ ಸಮಾನ ಸ್ವಾತಂತ್ರ್ಯ ಸೌಕರ್ಯಗಳನ್ನು ಕೊಟ್ಟು ಸ್ವತಂತ್ರ ಭಾರತದ ಉತ್ಕರ್ಷಕ್ಕಾಗಿ ಪ್ರಯತ್ನಿಸಬೇಕಾದ ಈ ಸಮಯದಲ್ಲಿ ಲೀಗಿನವರೆತ್ತಿದ ಈ ಆಕ್ಷೇಪವನ್ನು ಸರದಾರರು ಕಡೆಗಣಿಸಿದ್ದು ತುಂಬಾ ಧೈರ್ಯದ ಸಂಗತಿ. ಮತೆಬಿಟ್ಟು "ಹೊರಬಿದ್ದು ಹೋಗದಂತೆ ಪ್ರಯತ್ನಿಸುವದಕ್ಕಾಗಿ ಇವರಿಗೆ ಸೌಕರ್ಯಗಳನ್ನು ಕೊಟ್ಟು ಕೊಟ್ಟು ದೇಶಕ್ಕೆ ಹಿರಿಯಣ್ಣನ ಪ್ರಾಣಕ್ಕೆ ಹೊರಗೆ ಹಾಕಿಸಿಕೊಂಡತೆರಿ. ತಮ್ಮ ತಪ್ಪು ಅಪಾಯವನ್ನು ಕಂಡೊಡ್ಡಿದರೆ ಅವನನ್ನು ನಿಗ್ರಹಿಸಬೇಕಾಗುವದು ಎಂದು ಅವರಾಡಿದ್ದುದು ಮುಕ್ತಸಂಥವಾತು. ಅಗಾಖಾನರ ಪ್ರಯತ್ನದಿಂದ ಅಸ್ತಿತ್ವದಲ್ಲಿ ಬಂದ ಪ್ರತ್ಯೇಕ ಮತದಾರ ಸಂಘಗಳನ್ನು ಸರದಾರ ಪಟೇಲರು ಕಿತ್ತು ಹಾಕಿ ಹಿಂದುಸ್ತಾನಕ್ಕೆ ಅತ್ಯಂತ ಉಪಕಾರ ಮಾಡಿದ್ದಾರೆ. ಸಮಾನ ಸ್ವಾತಂತ್ರ್ಯ ಸ್ವಾತಂತ್ರ್ಯಗಳನ್ನು ಪಡೆದ ನಾಗರಿಕರು ಭಾರತದ ಉನ್ನತಿಗಾಗಿ ದುಡಿಗಲು ಅವಕಾಶ ಮಾಡಿಕೊಟ್ಟ ಸರದಾರ ಪಟೇಲರು ತುಂಬಾ ಅಭಿನಂದನೀಯರು.

## ಆರ್ಥಿಕ ಬಿಕ್ಕಟ್ಟು

ಯುದ್ಧ ಕಾಲದಲ್ಲಿ ಸಾಲಿಗ ರಾಷ್ಟ್ರವಾಗಿ ಪರಿಣಮಿಸಿದ ಭಾರತವು ಆರ್ಥಿಕ ಬಿಕ್ಕಟ್ಟನ್ನು ಎದುರಿಸಬೇಕಾಗುವದು ಎಂದು ಹೇಳಿದರೆ ಆಶ್ಚರ್ಯವಾಗಬಹುದು. ಯುದ್ಧಕಾಲದಲ್ಲಿ ಅನುಭವಿಸಬೇಕಾದ ತೊಂದರೆಗಳು ಯುದ್ಧದೊಡನೆ ನಿರ್ನಾಮವಾಗಬಹುದೆಂದು ಆಶಿಸಲಾಗಿತ್ತು. ಆದರೆ ಹಾಗಾಗದೆ ಆ ತೊಂದರೆಗಳನ್ನೂ ಉಳಿದುಕೊಂಡಿವೆ. ದೇಶದಲ್ಲಿ ಅನ್ನವಸ್ತ್ರ, ಕಬ್ಬಿಣ ಉಕ್ಕು, ಕಲ್ಲಿದ್ದಲಿ, ಸಿಮೆಂಟು, ಮುಂತಾದವುಗಳ ಉತ್ಪಾದನೆ ಬಹಳ ಕಡಿಮೆಯಾಗುತ್ತ ನಡೆದಂತೆ ಬೆಲೆಗಳು ವಿಪರೀತವಾಗಿ ಏರಹತ್ತಿವೆ. ಇದರಿಂದಾಗಿ ಕೂಲಿಕಾರರಲ್ಲಿ ಅಸಂತೋಷವು ಹೆಚ್ಚುತ್ತಿದೆ. ಈ ಅಸಂತೋಷದ ಪರಿಣಾಮವಾಗಿ ಪುನಃ ಉತ್ಪಾದನೆ ಕಡಿಮೆಯಾಗುವದು.

ಈ ಕೆಟ್ಟ ಸುಳಿಯುಹೀಗೆ ಸಾಗಿದರೆ ಭಾರತವು ಆರ್ಥಿಕ ಬಿಕ್ಕಟ್ಟನ್ನು ಎದುರಿಸಬೇಕಾಗುವದು. ಅತಿ ಪ್ರಸರಣವೂ ಕಳ್ಳಪೇಟೆಯೂ ಈ ಬಿಕ್ಕಟ್ಟನ್ನು ಬೆಳೆಸಲು ಕಾರಣವಾಗುತ್ತವೆ. ಇವನ್ನು ತಡೆಯಬೇಕು ಅಂದರೆ ಉತ್ಪಾದನೆಯನ್ನು ಹೆಚ್ಚಿಸಬೇಕು. ಇಲ್ಲದಿದ್ದರೆ ಉಳಿಗಾಲವಿಲ್ಲ. ಈಗ ಎಲ್ಲರ ಲಕ್ಷ್ಯವು ಜಾತೀಯ ಗಲಭೆಗಳ ಕಡೆಗೆ ಹೊರಳಿದುದರಿಂದ ಈ ವಿಷಯವನ್ನು ಕಡೆಗಣಿಸುವ ಸಂಭವ ಹೆಚ್ಚಾಗಿದೆ. ಅದ್ದರಿಂದ ಭಾರತವು ಆರ್ಥಿಕ ಬಿಕ್ಕಟ್ಟನ್ನು ಎದುರಿಸುವ ಪ್ರಸಂಗ ಬರಬಾರದೆಂದಿದ್ದರೆ "ಉತ್ಪಾದಿಸಿರಿ, ಉಳಿಯಿರಿ; ಬೆಳೆಯಿರಿ: ಬಾಳಿರಿ ಇಲ್ಲವಾದರೆ ನಾಶಹೊಂದುವಿರಿ" ಎಂಬ ಮಾತನ್ನು ಪ್ರತಿಯೊಬ್ಬ ನಾಗರಿಕನ ಗಮನಕ್ಕೆ ತಂದು ಕೊಡುವದು ಅನಿವಾರ್ಯವಾಗಿದೆ.

## ಕಳ್ಳಪೇಟೆಯ ನಿರ್ಮೂಲ

ಕಳ್ಳಪೇಟೆಯನ್ನು ನಿರ್ಮೂಲಗೊಳಿಸಲು ಮುಂಬಯಿ ಸರಕಾರವು ಒಂದು ಸುಗ್ರೀವಾಜ್ಞೆ ಹೊರಡಿಸಿ ಕಳ್ಳಪೇಟೆಯಲ್ಲಿ ತೊಡಗಿದವರಿಗೆ ಏಳು ವರ್ಷಗಳ ಶಿಕ್ಷೆ ವಿಧಿಸಿದೆ. ಈ ಮೊದಲು ಕಳ್ಳಪೇಟೆಗಾರರಿಗೆ ಮೂರು ವರ್ಷ ಶಿಕ್ಷೆ ಇತ್ತು. ಇಷ್ಟು ಸ್ವಲ್ಪ ಶಿಕ್ಷೆಯಿಂದ ಜನರು ಹೆದರುವದಿಲ್ಲೆಂದು ಕಂಡು ಬಂದದ್ದರಿಂದ ಈ ಶಿಕ್ಷೆಯನ್ನು ಏಳುವರ್ಷಕ್ಕೆ ಏರಿಸಲಾಗಿದೆ. ಆದರೆ ಕಳ್ಳಪೇಟೆಗಾರರು ಸರಕಾರದ ಕೈಗೆಸಿಕ್ಕರೆ ಅಲ್ಲವೆ ಅವರಿಗೆ ಶಿಕ್ಷೆವಿಧಿಸುವದು. ಇವರು ಅಧಿಕಾರಿಗಳನ್ನೇ ಒಳಗೆ ಹಾಕಿಕೊಂಡು ತಮ್ಮ ವ್ಯಾಪಾರವನ್ನು ನಿರಾತಂಕವಾಗಿ ಸಾಗಿಸುತ್ತಿದ್ದಾರೆ.

ಅಂಥ ಮೇಲೆ ಈ ಕಳ್ಳಪೇಟೆಯನ್ನು ನಿರ್ಮೂಲನಮಾಡಲು ಉಳಿಯುವದು ಒಂದೇ ದಾರಿ. ಕಾಳುಕಡಿ, ಸಕ್ಕರೆ, ಅರಿವೆ ಅಂಥವು, ಮುಂತಾದ ಜೀವನಾವಶ್ಯಕವಾದ ವಸ್ತುಗಳನ್ನೆಲ್ಲ ಸರಕಾರವು ತನ್ನ ವಶಕ್ಕೆ ತೆಗೆದುಕೊಂಡು ಎಲ್ಲರಿಗೂ ಸರಿಯಾಗಿ ಹಂಚಿಕೊಟ್ಟರೆ ಕಳ್ಳಪೇಟೆಗೆ ಅವಕಾಶ ದೊರೆಕ ಬೀಳುವದೆಂಬಲ್ಲಿ ಸಂದೇಹವಿಲ್ಲ. ಈ ದಾರಿಯಿಂದ ಮುಂದೆ ಸಾಗಲು ಸರಕಾರವು ಸಾರ್ವಜನಿಕರ ಸಹಕಾರದಿಂದ ಮುನ್ನಡೆಯಬೇಕು. ಮುಂಬಯಿ ನಾಗರಿಕರು ಕಳ್ಳಪೇಟೆ ನಿರ್ಮೂಲನಕ್ಕಾಗಿ ಸರಕಾರಕ್ಕೆ ಸಹಾಯ ಮಾಡಲು "ಜನತಾ ಲಂಚ ಪ್ರತಿರೋಧಕ ಸಮಿತಿ" ಯನ್ನು ರಚಿಸಿಕೊಂಡಿದ್ದಾರೆ. ಅಂಥ ಪ್ರಯತ್ನಗಳು ಪ್ರಾಂತದಲ್ಲಿ ಎಲ್ಲೆಡೆಗೂ ನಡೆದರೆ ಕಳ್ಳಪೇಟೆಯ ನಿರ್ಮೂಲನವಾಗಿ ಸಾರ್ವಜನಿಕರ ಕಲ್ಯಾಣವಾದೀತೆಂದು ಹಾರೈಕೆ.

# ಸ್ವತಂತ್ರ ಹಿಂದುಸ್ತಾನದಲ್ಲಿ ಸರ್ವರೂ ಸಮಾನರು

## ಸಮಿತಿಗಳ ವರದಿ- ಅಲ್ಪಸಂಖ್ಯಾಕರ ಸ್ಥಾನ- ಆಡಳಿತದ ಮೂಲಭೂತ ತತ್ವಗಳು— ಕೂಲಿಕಾರರ ಹಿತಚಿಂತನ— ಹಿಂದುಳಿದವರಿಗೆ ನೆರವು—

### ಅಲ್ಪಸಂಖ್ಯಾಕ ಸಮಿತಿಯ ವರದಿ

ಹಿಂದುಸ್ತಾನದ ಒಕ್ಕೂಟದಲ್ಲಿ ಅಂಗ್ಲೊ—ಇಂಡಿಯನರ ಜನಸಂಖ್ಯೆ ಸುಮಾರು ೨೦೦ ಕ್ಕೆ ಒಬ್ಬನಂತಿರುವದರಿಂದ ಸಾಮಾನ್ಯ ಮತದಾರ ಪದ್ಧತಿಯಿಂದ ತಮಗೆ ಯೋಗ್ಯ ಪ್ರಾತಿನಿಧ್ಯ ದೊರೆಯುವದಿಲ್ಲವಾದ್ದರಿಂದ ತಮಗೆ ಲೋಕ ಸಭೆಯಲ್ಲಿ ಮೂರು, ಪಶ್ಚಿಮ ಬಂಗಾಲದಲ್ಲಿ ಮೂರು, ಮುಂಬಯಿ ಮತ್ತು ಮದ್ರಾಸಗಳಲ್ಲಿ ಎರಡೆರಡು, ಮಧ್ಯಪ್ರಾಂತ ಬಿಹಾರ ಮತ್ತು ಯುಕ್ತಪ್ರಾಂತಗಳಲ್ಲಿ ಒಂದೊಂದು ಸ್ಥಳಗಳು ದೊರೆಯಬೇಕು ಎಂದು ಮೊದಲು ಕೇಳಿದ್ದರು. ಆದರೆ ನಂತರ ಲೋಕ ಸಭೆಯಲ್ಲಿ ಎರಡು ಮತ್ತು ಈಗ ತಮಗೆ ಪ್ರಾತಿನಿಧ್ಯವಿದ್ದ ಪ್ರಾಂತಗಳಲ್ಲಿ ಒಂದೊಂದು ಹೀಗೆ ಒಟ್ಟು ಎಂಟು ಸ್ಥಳಗಳನ್ನು ಕೊಡಬೇಕೆಂದು ಕೇಳಿದರು ಎಂದು ಸರದಾರ ಪಟೇಲರು ಘಟನಾ ಸಮಿತಿಯಲ್ಲಿ ಅಲ್ಪಸಂಖ್ಯಾಕರ ಸಮಿತಿಯ ವರದಿಯನ್ನು ಮುಂದಿಸುತ್ತ ಹೇಳಿದರು.

### ವರದಿಯ ಚರ್ಚೆ

ಬಳಿಕ ಘಟನಾ ಸಮಿತಿಯಲ್ಲಿ ಈ ವರದಿಯ ಚರ್ಚೆ ಪ್ರಾರಂಭವಾಯಿತು.

ಈಗ ಪಾಕಿಸ್ತಾನದಲ್ಲಿಯ ಅಲ್ಪ ಸಂಖ್ಯಾಕರು, ಹಿಂದುಸ್ತಾನದಲ್ಲಿಯ ಅಲ್ಪ ಸಂಖ್ಯಾಕರು ಎಂದು ದ್ವಿವಿಧ ಅಲ್ಪ ಸಂಖ್ಯಾಕರಿದ್ದಾರೆ. ಎರಡನೇ ಅಲ್ಪ ಸಂಖ್ಯಾಕರ ಬಗ್ಗೆ ನಾವೀಗ ವಿಚಾರ ಮಾಡಬೇಕಾಗಿದೆ. ಇದು ವರೆಗೆ ಸಲ್ಲದ ಗುಲ್ಲೆಬ್ಬಿಸಿ ಸ್ವಾರ್ಥ ಸಾಧಿಸಿಕೊಂಡಂತೆ ಇನ್ನು ಮುಂದೆ ಅಲ್ಪ ಸಂಖ್ಯಾಕರು ಸುಮ್ಮ ಸುಮ್ಮನೆ ಗೊಂದಲವೆಬ್ಬಿಸಿ ರಾಷ್ಟ್ರದ ಪ್ರಗತಿಗೆ ಕಾಲ್ತೊಡಕಾಗದಿರಲಿ ಎಂದು ರೋಹಿಣಿ ಕುಮಾರ ಚೌಧರಿ ಮತ್ತು ಪಂಜಾಬರಾವ ದೇಶಮುಖರು ಹೇಳಿದರು.

ಫ್ರಾಂಕ ಅ್ಯಂಥನಿಯವರು ಈ ವರದಿಯ ಬಗ್ಗೆ ತಮ್ಮ ಸಮಾಧಾನವನ್ನು ವ್ಯಕ್ತಪಡಿಸಿ ಸರದಾರ ಪಟೇಲರ ಮುತ್ಸದ್ದಿತನವನ್ನು ಕೊಂಡಾಡಿದರು. ಸರ್ ಹೋಮಿ ಮೋಡಿಯವರು ತಮ್ಮ ಭಾಷಣದಿಂದ ಸೂಚನೆಯನ್ನು ಗ್ರಹಿಸಿ ಪಾರ್ಸಿಗಳಿಗೆ ಪ್ರತ್ಯೇಕ ಪ್ರಾತಿನಿಧ್ಯಬೇಡವೆಂದು ಹೇಳಿದ್ದು ಅತ್ಯಂತ ಉಚಿತವಾದುದೆಂದು ಆರ್. ಕೆ. ಸಿಧ್ವಾರು ಹೇಳಿದರು.

ಭಾರತದ ೧೫೮೫ ಶಾಸನ ಸಭಾ ಸದಸ್ಯರಲ್ಲಿ ೨೪ ಆದಿವಾಸಿಗಳು ಸದಸ್ಯರಿದ್ದಾರೆ. ಕೇಂದ್ರದಲ್ಲಿ ಅವರಿಗೆ ಪ್ರಾತಿನಿಧ್ಯವಿಲ್ಲ. ಈ ತೊಂದರೆ ನಿವಾರಿಸಬೇಕು ಎಂದು ಜಯಪಾಲಸಿಂಗರು ಹೇಳಿದರು.

ಬಳಿಕ ಪೋಕರಸಾಹೇಬ ಮತ್ತು ಚೌಧರಿ ಖಲಿಕುಜಮಾನರು ಪ್ರತ್ಯೇಕ ಮತದಾರ ಸಂಘಗಳನ್ನು ಕಟುವಾಗಿ ಟೀಕಿಸಿದರು. ಆದರೆ ಚೌಧರಿ ಖಲಿಕುಜಮಾನರು ಮುಸ್ಲಿಂರಿಗಾಗಿ ಪ್ರತ್ಯೇಕ ಮತದಾರ ಸಂಘಗಳನ್ನು ಕೇಳಿದರು.

### ಸರದಾರ ಪಟೇಲರ ಉತ್ತರ

ಅಧ್ಯಕ್ಷರು ಚರ್ಚೆಯನ್ನು ಇಲ್ಲಿಗೆ ನಿಲ್ಲಿಸಿದ ರಿಂದ ಸರದಾರ ಪಟೇಲರು ಚರ್ಚೆಗೆ ಈ ರೀತಿ ಉತ್ತರಿಸಿದರು.

‘ಈ ವರದಿಯ ಬಗ್ಗೆ ಇಷ್ಟೊಂದು ಚರ್ಚೆ ನಡೆದದ್ದು ಕೇಳಿ ನನಗೆ ಆಶ್ಚರ್ಯವಾಗಿದೆ. ಪಾಕಿಸ್ತಾನ ಸ್ಥಾಪಿತವಾದನಂತರ ಉಳಿದ ಭಾರತದಲ್ಲಿ ದ್ವಿಜನಾಂಗರಾಷ್ಟ್ರದ ಗುಲ್ಲು ಏಳಲಾರದೆಂದು ಪಾಕಿಸ್ತಾನವನ್ನು ಕೊಡುವಾಗ ನಾವು ಭಾವಿಸಿದ್ದೆವು. ಪ್ರತ್ಯೇಕ ಮತದಾರ ಸಂಘ ಮುಂತಾದ ಅನೇಕ ಸೌಕರ್ಯಗಳನ್ನು ಕೇಳಿದವರಿಗೆ ಪಾಕಿಸ್ತಾನವನ್ನು ಕೊಟ್ಟಿದ್ದಾಯಿತು. ಇನ್ನಾದರೂ ಇದು ಒಂದು ರಾಷ್ಟ್ರವಾಗಿ ಉಳಿಯದೆ ಎರಡು ರಾಷ್ಟ್ರಗಳಾಗಬೇಕೆಂದು ನಿಮ್ಮ ಇಚ್ಛೆಯೆ? ಧಾರ್ಮಿಕ ತಳಹದಿಯ ಮೇಲೆ ಯಾವ ರಾಷ್ಟ್ರವಿದೆ? ದೇಶದ ವಿಭಜನೆಯಾದ ನಂತರವೂ ಈ ತೆರದ ವಿರೋಧವನ್ನು ಸಹಿಸಲಾರೆ.’

ಬಳಿಕ ಶ್ರೀ ಕೆ. ಎಂ. ಮುನಶಿಯವರು ಮಂಡಿಸಿದ “ಹರಿಜನರು ಹಿಂದೂ ಧರ್ಮದವರಾದ್ದರಿಂದ ಅವರು ಅಲ್ಪಸಂಖ್ಯಾಕರಲ್ಲ. ಆರ್ಥಿಕ ಹಿತದ ದೃಷ್ಟಿಯಿಂದ ನೋಡಿ ಅವರನ್ನು ಸಂರಕ್ಷಿಸಬೇಕಾಗಿದೆ” ಎಂಬ ತಿದ್ದುಪಡಿಯನ್ನು ಸ್ವೀಕರಿಸಲಾಯಿತು. ಅಲ್ಪಸಂಖ್ಯಾಕರೆಂದರೆ ಜನಾಂಗಿಕ, ಧಾರ್ಮಿಕ, ಇಲ್ಲವೆ ಭಾಷಾವಾರ ಜನರ ಗುಂಪು ಎಂದು ಅಂತರ್ರಾಷ್ಟ್ರೀಯ ವ್ಯಾಖ್ಯೆಯಿದೆ.

ಅಲ್ಪ ಸಂಖ್ಯಾಕರು ಜನಸಂಖ್ಯೆಯ ಪ್ರಮಾಣದಲ್ಲಿ ತಮಗಾಗಿ ಕಾದಿಟ್ಟ ಸ್ಥಳಗಳನ್ನಲ್ಲದೆ ಇತರ ಸ್ಥಾನಗಳನ್ನು ಸ್ಪರ್ಧಿಸಬಹುದೆಂದು ಸರದಾರ ಪಟೇಲರು ಒಂದು ಕಲಮನ್ನು ಮಂಡಿಸಲು ಇದುವಿವಾದಾಸ್ಪದವಾದ ಕಲಮವಾಗಿರುವದರಿಂದ ಇದರ ಚರ್ಚೆಯನ್ನು ನಾಳಿಗೆ ಮುಂಬರಿಸಬೇಕೆಂದು ಸೇಠ ಗೋವಿಂದದಾಸರು ಕೇಳಿಕೊಂಡರು. ಆದರೆ ಸರದಾರ ಪಟೇಲರು ಸಮ್ಮತಿಸಲಿಲ್ಲ, ಅಷ್ಟರಲ್ಲಿಯೆ ಅಂದಿನ ಸಮಯ ಮುಗಿದದ್ದರಿಂದ ಸಭೆಯು ಮುಂದರಿಯಿತು.

### ರಾಜ್ಯದಾಡಳಿತದ ಮೂಲಭೂತ ತತ್ವಗಳು

ನಾಗರಿಕರ ಮೂಲಭೂತ ಹಕ್ಕುಗಳ ಬಗ್ಗೆ ಘಟನಾ ಸಮಿತಿಯು ನೇಮಿಸಿದ ಸಲಹೆ ಸಮಿತಿಯ ಅಧ್ಯಕ್ಷರಾದ ಸರದಾರ ವಲ್ಲಭಭಾಯಿ ಪಟೇಲರು ಘಟನಾ ಸಮಿತಿಗೆ ಪೂರಕ ವರದಿಯೊಂದನ್ನು ಒಪ್ಪಿಸಿದರು. ಪೂರಕ ವರದಿಯಲ್ಲಿ ಹೀಗೆ ಹೇಳಲಾಗಿದೆ:

೧) ನ್ಯಾಯವಾಗಿ ಸಲ್ಲತಕ್ಕ ಕೆಲವೊಂದು ಮೂಲಭೂತ ನಾಗರಿಕ ಹಕ್ಕುಗಳಲ್ಲದೆ ಘಟನೆಯಲ್ಲಿ ಕೆಲವೊಂದು ಮೂಲಭೂತರಾಜ್ಯದಾಡಳಿತದ ಧೋರಣದ ಬಗ್ಗೆ ಸೂಚನೆಗಳನ್ನು ನಿರ್ದೇಶ ಮಾಡುವದು ಅಗತ್ಯವೆಂದೆನಿಸಿದ್ದರಿಂದ ಇದರೊಂದಿಗೆ ಇರುವ ಪರಿಶಿಷ್ಟದಲ್ಲಿ ಅವುಗಳ ನಿರ್ದೇಶವಾಡಲಾಗಿದೆ.

ಈ ಸೂಚನೆಗಳನ್ನು ಯಾವದೇ ನ್ಯಾಯಾಲಯವು ನ್ಯಾಯಮತದಲ್ಲಿ ಅನುಸರಿಸಬೇಕೆಂಬುದು ಇಲ್ಲ ಆದರೆ ರಾಜ್ಯದಾಡಳಿತದ ಧೋರಣ ನಿರ್ಧರಿಸುವಾಗ ಈ ಮೂಲಭೂತ ಸೂಚನೆಗಳನ್ನು ಲಕ್ಷ್ಯದಲ್ಲಿಡುವದು ಅಗತ್ಯವಾಗಿರುವದು.

೨) ನಮ್ಮ ಮೊದಲಿನ ವರದಿಯ ಅರನೇ ಪ್ಯಾರಾದಲ್ಲಿ “ನಾಗರಿಕನ ಮೂಲಭೂತ ಹಕ್ಕಿಗೆ ಭಂಗ ಬಂದಲ್ಲಿ ನಾಗರಿಕನು ಸರಕಾರದವಿರುದ್ಧ ಯಾವದೇ ನ್ಯಾಯಾಲಯದಲ್ಲಿ ಆ ಬಗ್ಗೆ ಪರಿಹಾರ ಕೇಳಲು ಹಕ್ಕು ಇದೆ” ಎಂದು ಹೇಳಲಾಗಿತ್ತು. ಆದರೆ ಈ ಬಗ್ಗೆ ದೀರ್ಘ ವಿಚಾರವಾದ ನಂತರ ಮೂಲಭೂತ ಹಕ್ಕುಗಳ ಕಲಮು ೨೨ ರಲ್ಲಿ ಹೇಳಲಾದ ಹಕ್ಕುಗಳಿಗಿಂತ ಹೆಚ್ಚಿನ ಅಧಿಕಾರ ಕೊಡುವದು ಅನವಶ್ಯವೆಂದು ನಮ್ಮ ಅಭಿಪ್ರಾಯವಾಗಿದೆ. ಈ ೨೨ ನೇ ಕಲಮು ಘಟನಾ ಸಮಿತಿಯ ಎಪ್ರಿಲ—ಮೇ ಅಧಿವೇಶನದಲ್ಲಿ ಸ್ವೀಕೃತವಾಗಿದೆ.

ಘಟನಾ ಸಮಿತಿಯವರು ನಮ್ಮ ವರದಿಯ ಕಲಮು ೧೬, ೧೭, ೧೮, (೨) ಇವುಗಳ ಪುನರ್ವಿಚಾರಣೆಗಾಗಿ ಆದೇಶ ಕೊಟ್ಟಿದ್ದರು. ನಾವು ಇವುಗಳ ಪುನರ್ವಿಚಾರ ಮಾಡಿ ಕೆಳಗಿನಂತೆ ನಮ್ಮ ಅಭಿಪ್ರಾಯ ಕೊಡಬಯಸುತ್ತೇವೆ:

ಕಲಮು ೧೬— ಸರಕಾರೀ ಹಣದಿಂದ ನಡೆಯುವ ಯಾವದೇ ಶಾಲೆಗೆಹೋಗುವ ಯಾವದೇ ವ್ಯಕ್ತಿಯು ಶಾಲೆಯಲ್ಲಿ ಕೊಡುವ ಧಾರ್ಮಿಕ ಶಿಕ್ಷಣ ಇಲ್ಲವೆ ಧಾರ್ಮಿಕ ಪೂಜೆಗೆ, ಹಾಜರ ಇರುವಂತೆ ಒತ್ತಾಯ ಪಡಿಸಲ್ಪಡಕೂಡದು. ಎಂದು ಇದೆ. ಈ ಕಲಮು ಇದ್ದಂತೆಯೇ ಸ್ವೀಕರಿಸಲು ನಾವು ಸಿಫಾರಸು ಮಾಡುವೆವು.

ಕಲಮು ೧೭—“ ಒಂದು ಧರ್ಮದವನನ್ನು ಒತ್ತಾಯದಿಂದ ಇಲ್ಲವೆ ಅನುಚಿತ ವರ್ಚಸ್ಸು ಉಪಯೋಗಿಸಿ ಬೇರೆ ಧರ್ಮಕ್ಕೆ ಧರ್ಮಾಂತರಗೊಳಿಸಿದರೆ ಅಂಥ ಧರ್ಮಾಂತರವನ್ನು ಕಾನೂನು ಒಪ್ಪಕೂಡದು” ಎಂದು ಇದೆ. ಈ ಬಗ್ಗೆ ಪುನರ್ವಿಚಾರ ಮಾಡಲು ಇದರಲ್ಲಿ ಹೇಳಲಾದ ತತ್ವವು ಸುಸ್ಪಷ್ಟವಿದ್ದು ಇದನ್ನು ಘಟನೆಯಲ್ಲಿ ಸೇರಿಸುವದು ಅಷ್ಟೊಂದು ಅವಶ್ಯವಿಲ್ಲ. ಕಲಮು ಬಿಟ್ಟುಕೊಟ್ಟರೂ ಅಡ್ಡಿಯಿಲ್ಲವೆಂದು ಈಗ ನಾವು ಅಭಿಪ್ರಾಯಕ್ಕೆ ಬಂದಿರುವೆವು.

ಕಲಮು ೧೮— (೨) ಜಾತಿ, ಧರ್ಮ, ಭಾಷೆ ಇವುಗಳ ದೃಷ್ಟಿಯಿಂದ ಅಲ್ಪ ಸಂಖ್ಯಾಕರಿಗೆ ರಾಷ್ಟ್ರದ ವಿದ್ಯಾ ಸಂಸ್ಥೆಗಳಲ್ಲಿ ಪ್ರವೇಶ ಕೊಡುವಾಗ ಅಲ್ಪ ಸಂಖ್ಯಾಕರೆಂದು ಬೇರೆ ವಿಧವಾದ ರೀತಿಯನ್ನು ಅನುಸರಿಸಕೂಡದು ಮತ್ತು ಯಾವದೇ ವಿದ್ಯಾ ಸಂಸ್ಥೆಯು ಒತ್ತಾಯದಿಂದ ಧಾರ್ಮಿಕ ಶಿಕ್ಷಣವನ್ನು ಇವರ ಮೇಲೆಯೂ ಹೇರಕೂಡದು” ಎಂಬುದಾಗಿ ಇದ್ದು ಇದರಲ್ಲಿ ಎರಡನೇ ಭಾಗದಲ್ಲಿ ಹೇಳಲಾದ ಒತ್ತಾಯದ ಧಾರ್ಮಿಕ ಶಿಕ್ಷಣ ಕೊಡಕೂಡದೆಂಬ ಬಗ್ಗೆ ೧೬ ನೇ ಕಲಮು ಇದ್ದಂತೆಯೇ ಸ್ವೀಕರಿಸಲು ಸಿಫಾರಸು ಮಾಡಿರುವದರಿಂದ ಈ ಭಾಗದ ಅವಶ್ಯಕತೆ ಇಲ್ಲದಂತಾಗುವದರಿಂದ ತೆಗೆದು ಹಾಕಲು ಅಡ್ಡಿ ಇಲ್ಲ, ಮೊದಲನೇ ಭಾಗವನ್ನು ಘಟನಾ ಸಮಿತಿಯು ಸ್ವೀಕರಿಸಲು ಸಿಫಾರಸು ಮಾಡುವೆವು.

### ಸರಕಾರದ ಆಡಳಿತದ ಮೂಲಭೂತ ತತ್ವಗಳು

(೧) ಇದರಡಿಯಲ್ಲಿ ಆಡಳಿತದ ಮೂಲಭೂತ ಧೋರಣೆಯ ಬಗ್ಗೆ ಕಾನೂನುಗಳನ್ನು ರಚಿಸುವಾಗ ಈ ಮೂಲಭೂತ ಧೋರಣವನ್ನು ಮನ್ನಿಸಿ ಕಾನೂನು ಮಾಡತಕ್ಕದ್ದು. ಈ ಸೂಚನೆಗಳು ಧೋರಣ ನಿರ್ದೇಶ ಮಾತ್ರ ಮಾಡುತ್ತಿರುವದರಿಂದ ಇವುಗಳನ್ನು ಯಾವದೇ ನ್ಯಾಯಾಲಯವು ಕಾನೂನು ಎಂದು ಗ್ರಹಿಸತಕ್ಕದ್ದಲ್ಲ.

(೨) ಸರಕಾರವು ರಾಜಕೀಯ ಆರ್ಥಿಕ ಸಾಮಾಜಿಕ ಸಂರಕ್ಷಣೆಯನ್ನು ಕೊಟ್ಟು ಎಲ್ಲ ಪ್ರಜೆಗಳ ಏಳ್ಗೆಗಾಗಿ ಪ್ರಯತ್ನಿಸಬೇಕು. ಮತ್ತು ರಾಷ್ಟ್ರೀಯ ಜೀವನಾವಶ್ಯಕವಾದ ಎಲ್ಲ ಸಂಸ್ಥೆಗಳ ಅಭಿವೃದ್ಧಿಗೂ ನೆರವಾಗಬೇಕು.

(೩) ಸರಕಾರವು ಕೆಳಗಿನ ಕಾರ್ಯ ಸಾಧಿಸುವಂತೆ ಧೋರಣವನ್ನಿಟ್ಟುಕೊಳ್ಳಬೇಕು.

(೪) ಸ್ತ್ರೀ, ಪುರುಷ, ಭೇದವಿಲ್ಲದೆ ಎಲ್ಲ ನಾಗರಿಕರಿಗೂ ಜೀವನಾಧಾರಕ್ಕೆ ಸಾಕಷ್ಟು ಗಳಿಸಲು ಅವಕಾಶವಿರಬೇಕು.

(೫) ಸಮಾಜದ ಭೌತಿಕ ಸಂಪತ್ತಿನ ಒಡೆತನ ಇಲ್ಲವೆ ಅವುಗಳ ನಿಯಂತ್ರಣವು ಜನಸಾಮಾನ್ಯರ ಹಿತಕ್ಕೆ ಧಕ್ಕೆ ತಗಲದ ರೀತಿಯಲ್ಲಿ ಇರುವಂತೆ ನೋಡಿಕೊಳ್ಳತಕ್ಕದ್ದು.

(೬) ವ್ಯಾಪಾರ ಸ್ವಾತಂತ್ರ್ಯದಿಂದ ಅವಶ್ಯಕ ಪದಾರ್ಥಗಳು ಕೆಲವೊಂದು ವ್ಯಕ್ತಿಗಳ ಅಧೀನದಲ್ಲಿ ಇಲ್ಲವೆ ನಿಯಂತ್ರಣದಲ್ಲಿ ಬಂದು ಜನಸಾಮಾನ್ಯರ ಹಿತಕ್ಕೆ ಗಂಡಾಂತರ ಬಾರದಂತೆ ನೋಡಿಕೊಳ್ಳತಕ್ಕದ್ದು.

(೭) ಸರಿಯಾದ ಕೆಲಸಕ್ಕೆ ಸರಿಯಾದ ಕೂಲಿ ಸ್ತ್ರೀ ಪುರುಷ ಭೇದವಿಲ್ಲದೆ ದೊರೆಯಬೇಕು.

(೮) ಸ್ತ್ರೀ ಪುರುಷರು, ಎಳೆ ಮಕ್ಕಳು, ಕೆಲಸದಿಂದ ಆರೋಗ್ಯ ನಷ್ಟ ಮಾಡಿಕೊಳ್ಳದಂತೆ ನೋಡಿಕೊಳ್ಳತಕ್ಕದ್ದು. ಆರ್ಥಿಕ ಅಡಚಣೆಗಳಿಂದ ನಾಗರಿಕರು ತಮ್ಮ ವಯಸ್ಸು ಮತ್ತು ಶಕ್ತಿಗೆ ಮೀರಿದ ಕೆಲಸ ಮಾಡಲು ಅವರ ಮೇಲೆ ಒತ್ತಾಯ ಬರದಂತೆ ನೋಡಿಕೊಳ್ಳತಕ್ಕದ್ದು.

(೯) ಚಿಕ್ಕಮಕ್ಕಳು ಹಾಗೂ ಪ್ರೌಢರು ಆರ್ಥಿಕ ಸುಲಿಗೆಯಿಂದ ರಕ್ಷಿಸಲ್ಪಡಬೇಕು ಅಲ್ಲದೆ ನೈತಿಕ, ಮತ್ತು ವ್ಯಾವಹಾರಿಕ ನೀತಿಯಿಂದ ಇವರು ಪರಾವೃತ್ತಗೊಳ್ಳದಂತೆ ನೋಡಿಕೊಳ್ಳಬೇಕು.

(೪) ಸರಕಾರವು ತನ್ನ ಆರ್ಥಿಕ ಯೋಗ್ಯತೆ ಮತ್ತು ಪ್ರಗತಿಯನ್ನು ಅನುಲಕ್ಷಿಸಿ ನಿರುದ್ಯೋಗಿತನ, ಮುಪ್ಪು, ರೋಗ ರುಜೆ, ಅಂಗಹೀನತೆ ಮೊದಲಾದವುಗಳ ಬಗ್ಗೆ ಯೋಗ್ಯ ಪರಿಹಾರ ದೊರೆಯುವ ವ್ಯವಸ್ಥೆ ಮಾಡಬೇಕು.

(೫) ಕೂಲಿಕಾರರಿಗೆ ದುಡಿಮೆಯ ಬಗ್ಗೆ ಯೋಗ್ಯವಾದ ತಾಸುಗಳ ಮತ್ತು ಇತರ ಸೌಕರ್ಯಗಳು ದೊರೆಯುವಂತೆ, ಬಾಣಂತಿ ದೆಸೆಯಲ್ಲಿ ಕೆಲಸಗಾರರಿಗೆ ಯೋಗ್ಯ ಉಪಚಾರ ಹಾಗೂ ಪರಿಹಾರ ದೊರೆಯುವಂತೆ ನೋಡಿಕೊಳ್ಳತಕ್ಕದ್ದು.

(೬) ಎಲ್ಲ ಕೆಲಸಗಾರರಿಗೆ ಅವರು ಕಾರಖಾನೆಗಳಲ್ಲಿ ದುಡಿಯಲಿ ಇಲ್ಲವೆ ಬೇರೆ ಸ್ಥಳದಲ್ಲಿ ಕೆಲಸ ಮಾಡುತ್ತಿರಲಿ, ಅವರಿಗೆಲ್ಲ ಕೆಲಸ, ಜೀವನ ನಿರ್ವಾಹವೇತನ, ಕೆಲಸದಲ್ಲಿ ಯೋಗ್ಯ ಜೀವನ ಸಾಗಿಸುವಂತೆ ಮತ್ತು ಸಾಕಷ್ಟು ವಿಶ್ರಾಂತಿ ಅವಧಿಯಿದ್ದು ಸಾಂಸ್ಕೃತಿಕ ಏಳಿಗೆಯಾಗುವಂತೆ ಸೌಕರ್ಯಗಳು ದೊರೆಯುವಂತೆ ನೋಡಿಕೊಳ್ಳಲು ಕಾನೂನು ಪಾಸು ಮಾಡಿ, ಇಲ್ಲವೆ ಆರ್ಥಿಕ ಸಂಘಟನೆಯನ್ನು ಕೈಕೊಂಡು ಇಲ್ಲವೆ ಇತರ ಯಾವದೇ ರೀತಿಯಲ್ಲಿ ನೆರವಾಗತಕ್ಕದ್ದು.

(೭) ಎಲ್ಲ ನಾಗರಿಕರಿಗೂ ಒಂದೇ ನಾಗರಿಕ ಕಾನೂನು ಜಾರಿಯಾಗುವಂತೆ ನೋಡಿಕೊಳ್ಳಬೇಕು.

(೮) ಪ್ರತಿಯೊಬ್ಬ ನಾಗರಿಕನಿಗೂ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣ ದೊರೆಯತಕ್ಕದ್ದು. ಹೊಸ ಘಟನೆಯು ಜಾರಿಯಲ್ಲಿ ಬಂದನಂತರ ಹತ್ತು ವರ್ಷಗಳಲ್ಲಿ ಎಲ್ಲ ನಾಗರಿಕರೂ ಸಾಕ್ಷರರಾಗುವಂತೆ ನೋಡಿಕೊಳ್ಳಬೇಕು. ಮಕ್ಕಳು ೧೪ ವರ್ಷದವರಾಗುವ ವರೆಗೆ ಪುಕ್ಕಟೆ ಪ್ರಾಥಮಿಕ ಶಿಕ್ಷಣ ಒತ್ತಾಯದಿಂದಲಾದರೂ ಕೊಡಲೇಬೇಕು.

(೯) ಸರಕಾರವು ಹಿಂದುಳಿದ ವರ್ಗದವರ ಮತ್ತು ಗುಡ್ಡಗಾಡು ಜನರ ಏಳಿಗೆಯ ಬಗ್ಗೆ ವಿಶೇಷ ಲಕ್ಷ್ಯಕೊಟ್ಟು ಅವರ ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪ್ರಯತ್ನಿಸಬೇಕು. ಅವರನ್ನು ಸಾಮಾಜಿಕ ದಬ್ಬಾಳಿಕೆ ಮತ್ತು ಆರ್ಥಿಕ ಶೋಷಣೆಯಿಂದ ರಕ್ಷಿಸತಕ್ಕದ್ದು.

(೧೦) ಎಲ್ಲ ಪ್ರಜೆಗಳಿಗೆ ಪೌಷ್ಟಿಕ ಆಹಾರ ಹೆಚ್ಚಿಗೆ ದೊರೆತು ಅವರ ಆರೋಗ್ಯ ಅಭಿವೃದ್ಧಿಯಾಗುವಂತೆ ನೋಡಿಕೊಳ್ಳುವುದು ಸರಕಾರದ ಪ್ರಥಮ ಕರ್ತವ್ಯವಾಗಿರತಕ್ಕದ್ದು.

(೧೧) ಐತಿಹಾಸಿಕ ಹಾಗೂ ಕಲಾಕೌಶಲ್ಯದ ದೃಷ್ಟಿಯಿಂದ ಮಹತ್ವವಾದವುಗಳೆಂದು ಸಾರಲಾದ ವಸ್ತು, ಸ್ಥಳ, ಸ್ಮಾರಕ, ಇವುಗಳ ಸಂರಕ್ಷಣೆ ಮಾಡತಕ್ಕದ್ದು.

(೧೨) ಅಂತರ್ ರಾಷ್ಟ್ರೀಯ ಕಾನೂನುಗಳನ್ನೂ ಒಡಂಬಡಿಕೆಗಳನ್ನೂ ಮನ್ನಿಸಿ, ಮಿತ್ರತ್ವ ಸಂಬಂಧ ಬೆಳೆಸಿಕೊಂಡು ಅಂತರ್‌ರಾಷ್ಟ್ರೀಯ ಶಾಂತಿ ಹಾಗೂ ಸೌಹಾರ್ದಗಳನ್ನು ಬೆಳೆಸಲು ನೆರವಾಗತಕ್ಕದ್ದು.

### ಮಾಳವಣಕರ ಸಮಿತಿಯ ವರದಿ

ಘಟನಾ ಸಮಿತಿಯು ಘಟನಾರಚನೆ ಹಾಗು ವೈಧಿಕ ಕಾರ್ಯಗಳನ್ನೆರಡನ್ನೂ ಮಾಡುವಬಗ್ಗೆ ಶ್ರೀ ಮಾವಳಣಕರ ಸಮಿತಿಯವರು ತಯಾರಿಸಿದ ವರದಿಯ ಮುಖ್ಯಾಂಶಗಳನ್ನು ಒಳಗೊಂಡ ಶ್ರೀ ಮುನಶಿಯವರ ಗೊತ್ತುವಳಿಯ ಬಗ್ಗೆ ಚರ್ಚೆ ನಡೆದು ಕೊನೆಗದು ಅಂಗೀಕೃತವಾಯಿತು.

ಈ ಸಮಿತಿಯ ವರದಿಯನ್ನು ಡಾ. ಅಂಬೇಡಕರರು ಸಭೆಯ ಮುಂದಿಟ್ಟರು. ಅದರ ಮುಖ್ಯ ಸೂಚನೆಗಳು ಇಂತಿವೆ:

(೧) ಶಾಸನ ಸಭೆಗಾಗಿ ಕೆಲಸ ನಡೆಸುವದು ಬಿಡುವದು ಘಟನಾ ಸಮಿತಿಗೆ ಹೊಂದಿಕೊಂಡಿರುತ್ತದೆ.

(೨) ಶಾಸನ ಸಭೆಯಾಗಿ ಕೆಲಸ ಮಾಡುವಾಗ ಅದು ಶಾಸನ ಸಭೆಯ ರೀತಿ ನಿಯಮಗಳಲ್ಲಿ ಅವಶ್ಯ ತಿದ್ದುಪಡೆಗಳನ್ನು ಮಾಡಿಕೊಂಡು ಅವುಗಳನ್ನು ಪಾಲಿಸಬೇಕು.

(೩) ಘಟನಾ ಸಮಿತಿಯ ಅಧ್ಯಕ್ಷರ ಆದೇಶದ ಮೇರೆಗೆ ಈ ತಿದ್ದುಪಡಿಗಳನ್ನು ಮಾಡಿಕೊಳ್ಳತಕ್ಕದ್ದು.

(೪) ಘಟನಾ ರಚನೆ ಹಾಗು ವೈಧಿಕ ಕಾರ್ಯಗಳಿಗಾಗಿ ಘಟನಾಸಮಿತಿಯು ಬೇರೆ ಬೇರೆ ದಿನಗಳಲ್ಲಿ ಬೇರೆ ಬೇರೆ ಅಧಿವೇಶನದಲ್ಲಿ ಕೂಡತಕ್ಕದ್ದು.

(೫) ಅಧಿವೇಶನಗಳನ್ನು ಮುಕ್ತಾಯಗೊಳಿಸುವ ಅಧಿಕಾರವು ಗವರ್ನರ ಜನರಲ್ಲರ ಬದಲು ಘಟನಾ ಸಮಿತಿಯ ಅಧ್ಯಕ್ಷರಿಗಿರಬೇಕು.

ಡಾ. ಅಂಬೇಡಕರರು ಮಾತಾಡುತ್ತ ಇಂತೆಂದರು.—

ಈ ಸೂಚನೆಗಳನ್ನು ಕಾರ್ಯರಂಗಕ್ಕಿಳಿಸಲು ಮೂರು ಅಡಚಣೆಗಳಿದ್ದು ಅವುಗಳನ್ನೆಲ್ಲ ಸಮಿತಿಯು ಸೂಕ್ಷ್ಮವಾಗಿ ಪರಿಶೀಲಿಸಿ ಈ ಕೆಳಗಿನ ನಿರ್ಣಯಕ್ಕೆ ಬಂದಿದೆ:—

(೧) ಸಭಾಪತಿಯು (ಸ್ಪೀಕರ) ಪ್ರಸ್ತುತ ಮಂತ್ರಿಯಾದವರು ಘಟನಾ ಸಮಿತಿಯ ಅಧ್ಯಕ್ಷನಿರಬಹುದು. ಆದರೆ ಶಾಸನ ಸಭೆಯ ಸಭಾಧಿಪತಿಯಾಗಲಾರನು. ಶಾಸನ ಸಭೆಯ ಅಧ್ಯಕ್ಷನಾದವನು ಮಂತ್ರಿಯಾಗಿದ್ದರೆ ಮಂತ್ರಿಪದಕ್ಕೆ ರಾಜೀನಾಮೆ ಕೊಡುವದು ಇಲ್ಲವೆ ಘಟನಾ ಸಮಿತಿಯು ಶಾಸನ ಸಭೆಯ ಕಾರ್ಯಕಲಾಪಗಳನ್ನು ನಡೆಸಲು ಕೂಡಿದಾಗ ಬೇರೊಬ್ಬ ಅಧ್ಯಕ್ಷನನ್ನು (ಸಭಾಪತಿಯನ್ನು) ಆರಿಸುವದು ಇವೆರಡರಲ್ಲಿ ಒಂದು ಮಾರ್ಗವನ್ನನುಸರಿಸಬಹುದು. (೨) ಸಂಸ್ಥಾನಿಕ ಪ್ರತಿನಿಧಿಗಳ ಪ್ರಶ್ನೆ:— ಶಾಸನ ಸಭೆಯು ಕೇಂದ್ರದ ಚರ್ಚಿಸುತ್ತಿರುವ ಪತ್ರದಲ್ಲಿರದಂಥ ವಿಷಯಗಳನ್ನು ಚರ್ಚಿಸುತ್ತಿರುವಾಗಲೂ ಸಂಸ್ಥಾನದ ಪ್ರತಿನಿಧಿಗಳು ಕಾರ್ಯಕಲಾಪಗಳಲ್ಲಿ ಭಾಗ ತೆಗೆದುಕೊಳ್ಳಬಹುದು. (೩) ಘಟನಾ ಸಮಿತಿ ಸದಸ್ಯರಲ್ಲದಿರುವ ಮಂತ್ರಿಗಳು:—ಇವರು ಶಾಸನ ಸಭೆಯ ಕಾರ್ಯಕಲಾಪಗಳಲ್ಲಿ ಭಾಗ ವಹಿಸಬಹುದೆಂದು ಭಾರತ ಸರಕಾರ ಕಾಯದೆಯಲ್ಲಿ ಹೇಳಲಾಗಿದೆ.




## ಇಜಿಪ್ತದ ಪರಿಸ್ಥಿತಿ

ಇಜಿಪ್ತ ಮತ್ತು ಬ್ರಿಟನ್ನುಗಳು ಪುನಃ ಸಂಧಾನ ಪ್ರಾರಂಭಿಸಬೇಕೆಂಬ ಬ್ರೆಜಿಲ್ಲಿನ ಠರಾವು ಬಿದ್ದು ಹೋದುದರಿಂದ ಜಾಗತಿಕ ಭದ್ರತಾ ಮಂಡಲದಲ್ಲಿ ಬಹಳ ಬಿಕ್ಕಟ್ಟಿನ ಪರಿಸ್ಥಿತಿಯುಂಟಾಗಿದೆ. ಕೊನೆಯ ಗಳಿಗೆಯಲ್ಲಿ ಕೊಲಂಬಿಯವು ಠರಾವು ಉಳಿದದ್ದು ಪ್ರತಿಬಂಧಾಧಿಕಾರ ಪ್ರಯೋಗದಷ್ಟು ಪರಿಣಾಮಕಾರಿಯಾದದ್ದಲ್ಲದೆ ಬ್ರಿಟನ್ನು ಇಜಿಪ್ತದಿಂದ ಹೊರಬಿದ್ದು ಸುಯೆಜದ ಸಂಯುಕ್ತ ಸಂರಕ್ಷಣೆಯ ಬಗ್ಗೆ ಒಪ್ಪಂದ ಮಾಡಿಕೊಳ್ಳಬೇಕೆಂಬ ಅದರ ಠರಾವು ಚರ್ಚೆಯ ಸಂಗತಿಗಳಿಗೆ ಒಂದು ಹೊಸರೂಪವನ್ನೇ ಕೊಟ್ಟಿದೆ.

ಬ್ರೆಜಿಲ್ಲಿನ ಠರಾವು ಮಾನ್ಯಮಾಡಲ್ಪಟ್ಟಿದ್ದರೆ ಭದ್ರತಾಮಂಡಲಕ್ಕೆ ಪುನಃ ತಾನು ಅರಿಕೆಮಾಡಿಕೊಳ್ಳುತ್ತಿದ್ದುದಾಗಿ ಇಜಿಪ್ತು ಸ್ಪಷ್ಟಪಡಿಸಿತ್ತು. ದ್ವಿಮುಖವಾದ ಸಂಧಾನ ನಡೆಸಿದ್ದರೆ ಶೀಘ್ರ ಪರಿಣಾಮವೇನೂ ಆಗುವಂತಿದ್ದಿಲ್ಲವಾದರೂ ಅಂತಹ ಸಂಧಾನಗಳನ್ನು ಪ್ರಾಮಾಣಿಕವಾಗಿ ನಡೆಸಿದ್ದರೆ ಸಮಸ್ಯೆ ಪರಿಹಾರವಾಗುತ್ತಿತ್ತೆಂಬ ಬಹುಮತವನ್ನು ಆ ಠರಾವು ಸೂಚಿಸುತ್ತದೆ. ಸರ್ ಅಲೆಗ್ಸಾಂಡರ್ ಕಾಡೋಗನರು ಬ್ರಿಟನ್ನು ಯಾವಾಗಲೂ ಮಾತುಕತೆ ಪ್ರಾರಂಭಿಸಲು ತಯಾರಿದೆಯೆಂದು ಒತ್ತಿ ಹೇಳಿದ್ದಾರೆ.

ಇಜಿಪ್ತದಲ್ಲಿ ಬ್ರಿಟಿಶ ಸೈನ್ಯವಿರುವುದು ಜಗತ್ತಿನ ಶಾಂತಿಗೆ ಭಂಗತರುವಂಥದೋ ಅಲ್ಲವೋ ಎಂಬುದನ್ನು ಇನ್ನೂ ನಿರ್ಣಯಿಸಿಲ್ಲವಾಗಿ ರಾಷ್ಟ್ರಸಂಘಕ್ಕೆ ಬ್ರಿಟನ್ನು ಇಜಿಪ್ತವನ್ನು ಖಾಲಿಮಾಡ ಹೇಳುವ ಅಧಿಕಾರ ಕೊಡಲಾಗುವುದೋ ಇಲ್ಲವೋ ಎಂಬುದು ಇನ್ನೂ ಸಂದೇಹಾಸ್ಪದವಾಗಿದೆ; ಇದರ ಮೇಲೆ, ಬ್ರಿಟನ್ನು ಪುನಃ ಚರ್ಚೆಗೆ ತೆಗೆದುಕೊಳ್ಳಲೊಪ್ಪಿದ ಹಿಂದಿನ ಒಪ್ಪಂದದ ಮೇರೆಗೇ ಅದರ ಸೈನ್ಯ ಈಗ ಇಜಿಪ್ತದಲ್ಲಿದೆ.

## ಹಂಗೇರಿಯಲ್ಲಿ ತಾತ್ಕಾಲಿಕ ಒಪ್ಪಂದ

೩೮೦ ಪ್ರತಿನಿಧಿಗಳನ್ನು ನಾಳಿನ ಚುನಾವಣೆಯಲ್ಲಿ ಆರಿಸಬಹುದೆಂಬ ಮೂರು ದಿನದ ರಾಜಕೀಯ ಒಪ್ಪಂದವನ್ನು ಹಂಗೇರಿಯನ್ನರು ಪ್ರಾರಂಭಿಸಿದರೆಂದು ತಿಳಿಯುತ್ತದೆ.

ಒಪ್ಪಂದ ಪ್ರಾರಂಭಿಸುವ ಮುನ್ನ ಹಂಗೇರಿಯ ಮುಖ್ಯಮಂತ್ರಿಗಳಾದ ಎಂ. ಲಾಜೋಸ್ ದಿನ್ಯೇಸರು ಹಂಗೇರಿಯ ಆಂತರಿಕ ವಿಷಯಗಳಲ್ಲಿ ಯಾರನ್ನೂ ಕೈಹಾಕಗೊಡುವುದಿಲ್ಲೆಂದು ಆಕಾಶವಾಣಿಯಲ್ಲಿ ಹೇಳಿದರು.

ಇಷ್ಟರವರೆಗೆ ಚುನಾವಣೆಯಲ್ಲಿ ಯಾವ ದುರ್ಘಟನೆಗಳೂ ಸಂಭವಿಸಿಲ್ಲವೆಂದು ಹಂಗೇರಿಯ ಸುದ್ದಿ ಶಾಲೆಯಿಂದ ತಿಳಿದುಬರುತ್ತದೆ.

## ಗ್ರೀಸಿಗೆ ಹೊಸ ಸರಕಾರ

ಒಂದು ರಾತ್ರಿಯ ರಾಜಕೀಯ ನಾಟಕದಿಂದ ಇಂದು ಗ್ರೀಸಿಗೆ ಒಂದು ಹೊಸ ಸರಕಾರ ತಯಾರಾಗಿದೆ. ಒಂದು ವಾರದಿಂದ ನಡೆಯುತ್ತಿದ್ದ ಬಿಕ್ಕಟ್ಟಿನ ಪ್ರಸಂಗ ಬಗೆಹರಿದಂತಾಯಿತು. ಈ ಮೊದಲು ರಾಜೀನಾಮೆಯಿತ್ತ ಸಂಯುಕ್ತ ಸರಕಾರದ ವಿದೇಶ ಮಂತ್ರಿಯಾದ ಎಂ. ಕಾನ್ಸಾಂಟೀನ ಸಲ್ಡಾರೀಸನ ನೇತೃತ್ವವಿರುವ 'ಪಾಪ್ಯುಲಿಸ್ಟ್' ಪಕ್ಷದವರ ಮಂತ್ರಿಮಂಡಲವನ್ನು ರಾಜನಾದ ಪಾಲನು ಅಧಿಕೃತವಾಗಿ ಸ್ವೀಕರಿಸಿದನು. ಏಕಪಕ್ಷೀಯ ಸರಕಾರದಿಂದ ಗ್ರೀಸಿಗೆ ಹಿತವಾಗದೆಂದೂ 'ರಾಜ ಸಭೆ'ಯೊಂದನ್ನು ಕರೆದು ರಾಜಕೀಯ ಬಿಕ್ಕಟ್ಟನ್ನು ಪರಿಹರಿಸಬೇಕೆಂದೂ ಪಕ್ಷ ಪ್ರಮುಖರು ಕೇಳಿಕೊಂಡದ್ದನ್ನು ಗಣಿಸದೆ ಮೇಲೆ ಹೇಳಿದಂತೆ ಸಲ್ಡಾರೀಸ ಮಂತ್ರಿಮಂಡಲವನ್ನು ಸ್ಥಾಪಿಸಲಾಯಿತು.

ಹೊಸ ಮಂತ್ರಿಮಂಡಲವು ತಾತ್ಕಾಲಿಕವೆಂದೂ ಸಲ್ಡಾರೀಸನು ಮಂತ್ರಿಮಂಡಲದಲ್ಲಿ ಬೇರೆ ಪಕ್ಷದವರ ಪ್ರವೇಶಕ್ಕೆ ಮುಕ್ತದ್ವಾರವಿಟ್ಟಿರುವನೆಂದೂ ನಂಬಲಾಗಿದೆ.

## ಫ್ರಾನ್ಸಿನಲ್ಲಿ ಹೊಸ ರಾಜಕೀಯ ಪಕ್ಷ

ಜನರಲ್ ಡಿಗಾಲೆಯವರ ಕೂಟದ ಫಲವಾಗಿ ಫ್ರಾನ್ಸಿನಲ್ಲಿ ಹೊಸದೊಂದು ರಾಜಕೀಯ ಪಕ್ಷ ಜನ್ಮವೆತ್ತಿದೆ.

ಆ ಗುಂಪಿನಲ್ಲಿ ಫ್ರೆಂಚ್ ಚೇಂಬರಿನ ೫೦ಕ್ಕಿಂತ ಹೆಚ್ಚು ಡೆಪ್ಯುಟಿಗಳಿದ್ದಾರೆ. ಸಾಮ್ಯವಾದಿಗಳನ್ನು ಹಾಗೂ ಎಂ. ಆರ್. ಪಿ. ಯನ್ನೊಳಗೊಂಡು ೫ ಪಕ್ಷಗಳ ಜನರು ಅದರಲ್ಲಿದ್ದಾರೆಂದು ಹೇಳಲಾಗಿದೆ.

ಡಿಗಾಲೆಯವರ ಕೂಟವು ಆ ಗುಂಪಿನ ಧೋರಣೆಕ್ಕೆ ಸಮ್ಮತಿಯಿತ್ತಿದ್ದರೂ ಇನ್ನೂ ಅದಕ್ಕೆ ಅಧಿಕೃತ ಮನ್ನಣೆ ಕೊಟ್ಟಿಲ್ಲ. ಅಧಿಕಾರವಿಭಜನೆ ಹಾಗೂ ಸರಕಾರವನ್ನು ಬಲಿಷ್ಠ ಗೊಳಿಸುವುದು ಇವುಗಳ ದೃಷ್ಟಿಯಿಂದ ಆ ಗುಂಪು ರಾಜ್ಯಘಟನೆಯನ್ನು ಪುನರ್‍ರಚಿಸುವ ಗುರಿಯುಳ್ಳದ್ದಾಗಿದೆ.

## ಪರಮಾಣುಬಾಂಬಿನ ನಿಯಂತ್ರಣ

ಪರಮಾಣುಬಾಂಬಿನ ಮೇಲೆ - ಜಾಗತಿಕ ನಿಯಂತ್ರಣ ಪದ್ಧತಿಯೊಂದನ್ನು ಜಾರಿಗೆ ತರಬೇಕೆಂಬ ಸಲಹೆಯನ್ನು ತಡೆಹಿಡಿದ ಬಿಕ್ಕಟ್ಟನ್ನು ಸಂಯುಕ್ತ ರಾಷ್ಟ್ರಸಂಘದವರ ಯೋಜನೆಯನ್ನು ಅಮೇರಿಕವು ಸ್ವೀಕರಿಸುವುದರಿಂದ ಬಿಡಿಸಲಾಗುವುದೆಂಬ ನಂಬಿಗೆಯಿಲ್ಲ. ತತ್ವತಃ ಆ ಯೋಜನೆಯು ಅಮೇರಿಕದ ಪ್ರತಿನಿಧಿ ಸೂಚಿಸಿದ ಯೋಜನೆಯಂತೆಯೇ ಇದೆ ಮತ್ತು ಅದು ಜಾಗತಿಕ ಅಣುಶಕ್ತಿ ಸಂಸ್ಥೆಗೆ ಅಣುಶಕ್ತಿಯ ಮತ್ತು ಅದನ್ನೊದಗಿಸುವ ವಸ್ತುಗಳ ಆಕರಗಳ ಮೇಲಿನ ಪರಿಶೀಲನ, ವ್ಯವಸ್ಥಾಪನ ಮುಂತಾದ್ದನ್ನು ಮಾಡುವ ಅಧಿಕಾರಕೊಡುತ್ತದೆ.

ಇಬ್ಬಣಕ್ಕೆ ಸಮಂಜಸವಾಗುವ ಯಾವ ಯೋಜನೆಯನ್ನು ಸ್ವೀಕರಿಸಿದರೂ ನಿಯಂತ್ರಣವು ದಕ್ಷತೆಯಿಂದ ನಡೆಯಲಾರದೆಂದು ಹೇಳಲಾಗುತ್ತದೆ. ಜಾಗತಿಕ ಸಂಸ್ಥೆಗೆ ಸಂಪೂರ್ಣ ಸಾರ್ವಭೌಮ ಅಧಿಕಾರವಿದ್ದು ನಿಯಂತ್ರಣದಲ್ಲಿ ಅದಕ್ಕೆ ಯಾವ ರಾಷ್ಟ್ರದ ಪ್ರತಿಬಂಧಾಧಿಕಾರವೂ ಅಡ್ಡಬರುವಂತಿರಬಾರದು. ಇದನ್ನು ರಶಿಯವು ಒಪ್ಪುವುದಿಲ್ಲ.

ರಶಿಯದ ಪ್ರಕಾರ ಅದು ಸಂಯುಕ್ತ ರಾಷ್ಟ್ರಸಂಘದ ಅಧಿಕಾರದೊಳಗಿರಬೇಕೆಂದೂ ಅದುದರಿಂದ ಅದು ಪ್ರತಿಬಂಧಾಧಿಕಾರಕ್ಕೆ ವಶ್ಯವಾಗಿರಬೇಕೆಂದೂ ಒಂದು ದೇಶದ ಒಳ ಆಡಳಿತದಲ್ಲಿ ನಿಯಂತ್ರಣ ಸಂಸ್ಥೆ ಕೈಹಾಕುವುದು ಅನ್ಯಾಯವೆಂದೂ ಅಂತಹ ಮಾತಾಡುವ ಮುನ್ನ ಅಮೇರಿಕ ತನ್ನಲ್ಲಿರುವ ಅಣುಬಾಂಬುಗಳನ್ನು ಬಿಟ್ಟುಕೊಡಲೆಂದೂ ಗ್ರ್ಯಾಮಿಕೋರವರೆನ್ನುತ್ತಾರೆ.

ಪ್ರತಿಯೊಂದು ರಾಷ್ಟ್ರಕ್ಕೂ ಯುಕ್ತಪ್ರಮಾಣದ ಅಣುಶಕ್ತಿಯನ್ನು ಹಂಚಿಕೊಡಬೇಕೆಂಬ ವಿಧಿಯಿರುವ ರಾಷ್ಟ್ರಸಂಘದ ಹೊಸಯೋಜನೆಗೆ ಬಹಳ ಜನರ ಬೆಂಬಲಸಿಗಲಿಕ್ಕಿಲ್ಲವೆಂದು ಊಹೆಯದೆ.

## ಪಾಲಿಸ್ತಾನ ವಿಭಜಿಸಲು ರಾಷ್ಟ್ರಸಂಘ ಸಮಿತಿಯ ಸೂಚನೆ

ಪಾಲಿಸ್ತಾನ ಸಂಬಂಧದಲ್ಲಿ ಸಂಯುಕ್ತ ರಾಷ್ಟ್ರಗಳಿಂದ ನೇಮಿಸಲ್ಪಟ್ಟ ವಿಶೇಷ ಸಮಿತಿಯವರು ಬಹುಮತದಿಂದ ರಾಷ್ಟ್ರ ಸಂಘದ ಸಭೆಗೆ ಒಪ್ಪಿಸಿದ ವರದಿಯಲ್ಲಿ ಪಾಲಿಸ್ತಾನವನ್ನು ಎರಡು ಸ್ವತಂತ್ರ ಯಹೂದಿ ಹಾಗೂ ಅರಬ ಸರಕಾರಗಳಲ್ಲಿ ಮತ್ತು ಜೆರೂಸಲೇಮ ನಗರದಲ್ಲಿ ವಿಭಾಗಿಸಬೇಕೆಂದೂ ಈ ಸಪ್ಟಂಬರ ೧ ರಿಂದ ೨ ವರ್ಷಗಳ ಅವಧಿ ನಂತರ ಈ ವಿಭಜನೆ ಜಾರಿಯಲ್ಲಿ ಬರಬೇಕೆಂದೂ ಮಧ್ಯಂತರ ಅವಧಿಯಲ್ಲಿ ಬ್ರಿಟನವು ಸಂಯುಕ್ತರಾಷ್ಟ್ರ ಸಂಘದ ಪರವಾಗಿ ಪಾಲಿಸ್ತಾನದ ಆಡಳಿತ ಸಾಗಿಸಿಕೊಂಡು ಹೋಗಬೇಕೆಂದೂ ಸೂಚಿಸಿದ್ದಾರೆ. ಸಮಿತಿಯ ವರದಿಯು ೫೦ ಸಾವಿರ ಶಬ್ದಗಳದಿರುವದು. ವರದಿ ಕುರಿತು ಅರಬ ವರಿಷ್ಠ ಕಮಿಟಿಯ ವ್ಹಾಯಿಸ ಚೇರಮನರಾದ ಜಮಾಲಹುಸೇನಿಯವರ ಸಂದರ್ಶನ ತೆಗೆದುಕೊಳ್ಳಲಾಗಿ ಪಾಲಿಸ್ತಾನವನ್ನು ವಿಭಜಿಸುವದಕ್ಕೆ ಅರಬರು ಎಂದೂ ಒಪ್ಪರೆಂದೂ ಎಲ್ಲ ವಿಧದಿಂದ ಪ್ರತಿಭಟಿಸುವರೆಂದೂ ಅವರು ಹೇಳಿದರು. ಅರಬ ಲೀಗಿನ ಜನರಲ್ ಸೆಕ್ರೆಟರಿಗಳು ಸಮಿತಿಯ ಸೂಚನೆಗಳು ಅವ್ಯವಹಾರ್ಯ ಹಾಗೂ ಅನ್ಯಾಯದ್ದಿರುವದೆಂದು ಟೀಕಿಸಿದರು. ಅರ್ಝುಮ ಪಾಶಾರವರು ಜ್ಯೆಫಾ ಹಾಗು ಜಾಫಾಗಳನ್ನು ಮತ್ತು ಇಡೀ ಕರಾವಳಿ ಪ್ರದೇಶವನ್ನು ಯಹೂದಿಗಳಿಗೆ ಕೊಡುವದು ಘಾತಕ ಹಾಗೂ ಅಪಹಾಸ್ಯಕರವಿರುವದರಿಂದ ವಿರೋಧವು ಕಟ್ಟಿಟ್ಟದ್ದೇ ಆಗಿದೆಯೆಂದೂ ಪಾಲಿಸ್ತಾನವಾಗಲಿ ಅರಬರಾಗಲಿ ಈ ಅನ್ಯಾಯವನ್ನು ಸಹಿಸರೆಂದೂ ಹೇಳಿದರು.

## ಯಾರ್ಕಶಾಯರ ಸಂಪು

ಬ್ರಿಟನ್ನಿನ ಸರಕಾರೀ ಕಲ್ಲಿದ್ದಲಿನ ಸಂಘ ಮತ್ತು ಗಣಿ ಕೆಲಸಗಾರರ ಕೂಟಗಳಿಗೆ ಪಾಕ್ಷಿಕ ವಿಜಯ ದೊರಕುವಾಗಿ ತಿಳಿಯುತ್ತದೆ. ಪಶ್ಚಿಮ ಯಾರ್ಕಶಾಯರಿನ ೧೬೦೦೦ ಗಣಿ ಕೆಲಸಗಾರರಲ್ಲಿ ಬಹಳ ಜನರು ಸಂಪನ್ನು ನಿಲ್ಲಿಸಿ ಕೆಲಸಕ್ಕೆ ಹೋಗುವ ನಿರ್ಧಾರ ಮಾಡಿದ್ದಾರೆ. ಈ ವರೆಗೆ ಗ್ರಿಂಥಾರ್ಪಿನಲ್ಲಿ ಮೂರು ವಾರಗಳಿಂದ ನಡೆದ ಸಂಪಿನ ಪರಿಣಾಮವಾಗಿ ಬ್ರಿಟನ್ನಿಗೆ ೬೦,೯೦೦ ಟನ್ ಕಲ್ಲಿದ್ದಲಿನ ನಷ್ಟವುಂಟಾಗಿದೆ. ಸಂಪು ಅಗಸ್ಟ ೧೧ ರಲ್ಲಿ ಪ್ರಾರಂಭವಾಗಿತ್ತು. ರಾಷ್ಟ್ರೀಯ ಕಲ್ಲಿದ್ದಲ ಸಂಘವು ಕೆಲಸಗಾರರು ದಿನಕ್ಕೆ ಒಂದು ಮೊಳ ಹೆಚ್ಚು ತಗ್ಗು ತೋಡಬೇಕೆಂದು ಕೇಳಿದ್ದರ ವಿರುದ್ಧ ಅದು ಪ್ರಾರಂಭಿಸಲ್ಪಟ್ಟಿತ್ತು.

## ಇಸ್ಲಾಂರಾಷ್ಟ್ರ ಸಂಘ ಕಟ್ಟುವ ವಿಚಾರ

ಅರಬ ಲೀಗದಲ್ಲಿ ಮುಸ್ಲಿಂ ರಾಷ್ಟ್ರಗಳಾದ ತುರ್ಕಸ್ತಾನ, ಇರಾಣ, ಅಫಗಾನಿಸ್ತಾನ, ಪಾಕಿಸ್ತಾನ, ಇಂಡೋನೇಶಿಯಾ, ಲಿಬಿಯಾ, ಟ್ಯುನಿಸಿಯಾ, ಅಲ್ಜೀರಿಯಾ, ಮೋರೋಕ್ಕೋ ಈ ಎಲ್ಲ ರಾಷ್ಟ್ರಗಳನ್ನು ಸೇರ್ಪಡೆ ಮಾಡಿಕೊಂಡು ಬೃಹತ್ ಇಸ್ಲಾಂ ರಾಷ್ಟ್ರಸಂಘ ನಿರ್ಮಾಣ ಮಾಡುವ ವಿಚಾರ ಮೂರ್ತ ಸ್ವರೂಪಕ್ಕೆ ಬಂದಿದೆ. ಇಂಥ ಇಸ್ಲಾಂ ರಾಷ್ಟ್ರ ಸಂಘವು ಜಾತೀಯ ತಳಹದಿಯಿಂದ ಮಾಡುವದು ಅರಬ ಲೀಗದ ಗುರಿಯ ವಿರುದ್ಧವೆಂದೂ ಇದರಿಂದ ಆಂಗ್ಲೋ ಅಮೇರಿಕನ್ನರಿಗೆ ಈ ರಾಷ್ಟ್ರಗಳನ್ನು ರಶಿಯದ ವಿರುದ್ಧ ಉಪಯೋಗಿಸಿ ಆರ್ಥಿಕ ಸುಲಿಗೆ ನಡೆಸಲು ಅನುಕೂಲವಾಗಬಹುದೆಂದೂ ಅರಬ ಲೀಗ ಎಡಪಕ್ಷದವರ ಅಭಿಪ್ರಾಯವಿದೆ. ಆದರೆ ಜಾಗತಿಕ ಪರಿಸ್ಥಿತಿ ಬದಲಾದುದರಿಂದ ಇಂಥ ಸಂಘದ ಆವಶ್ಯಕತೆ ಇದೆ ಎಂದು ಬಲಪಕ್ಷದ ವಾದವಿದೆ.

## ಇರಾಣದ ಮೇಲೆ ರಶಿಯದ ಕಣ್ಣು ?

ಸೋವಿಯೆಟ ಅಜರಬೈಜಾನದಲ್ಲಿ ೧೦ ಸಾವಿರ ಬಾರ್ಜಾನಿ ಗುಡ್ಡಗಾಡು ಜನರು ಕೂಡಿದ್ದಾರೆಂದೂ ಅವರು ರಸಿಯಾ ರಾಯಭಾರಿಯೊಡನೆ ಇರಾಣ ಮುಖ್ಯಮಂತ್ರಿಗಳು ೧೯೪೬ ರಲ್ಲಿ ಮಾಡಿಕೊಂಡ ಎಣ್ಣೆ ಒಡಂಬಡಿಕೆಯ ಪುನರ್ವಿಚಾರಣೆ ಮಾಡುವ ಕುರಿತು ಇರಾಣ ಮಜಲೀಸದ ಮೇಲೆ ಒತ್ತಾಯ ತರಲಿರುವರೆಂದೂ ದಟ್ಟವಾದ ಸುದ್ದಿ ಬಂದಿದೆ.

ಇರಾಕದ ಮುಸ್ತಾಫಾ ಇವರು ಇತ್ತೀಚಿಗೆ ರಸಿಯಾಕ್ಕೆ ಓಡಿಹೋಗಿ ಅಲ್ಲಿ ಆಶ್ರಯ ಪಡೆದಿದ್ದಾರೆ. ಇವರ ಇರಾಕದ ಖುರ್ದಿಶ ಜನರ ತಂಡವೇ ಇದೆ. ಇವರು ಇರಾಣದ ವಾಯುವ್ಯದ ಗಡಿಯಲ್ಲಿ ತೊಂದರೆ ಕೊಡಲು ಪ್ರಾರಂಭಿಸಲಿರುವರೆಂದೂ ೧೯೪೫ನೆಯ ಒಪ್ಪಂದದನ್ವಯ ಗಡಿಯಲ್ಲಿ ಸೋವಿಯೆಟ ಸರಕಾರವು ಇರಾಣದಲ್ಲಿ ನುಗ್ಗಬಹುದೆಂದೂ ಹೇಳಲಾಗುತ್ತಿದೆ. ಇರಾಣದ ಗಡಿಯಲ್ಲಿ ಸೋವಿಯೆಟ ಸರಕಾರವು ೩೦ ಡಿವಿಜನ್ನುಗಳನ್ನು ಕಾದಿರಿಸಿದೆ. ಇರಾಣಕ್ಕೆ ಗಂಡಾಂತರ ಸಮಯ ಬರಲಿದೆಯೆಂದು ಮುಖ್ಯ ಮಂತ್ರಿ ಪದಕ್ಕೆ ಘಾವನ ಎ ಸುಲ್ತಾನೆ ಇವರನ್ನು ಮಜಲೀಸ ಸಭೆಯು ಆರಿಸಿದೆ. ಅವರಿಗೆ ಹಿಂದಿನ ಸಾರೆ ೧೧೬ ಮತ ಬಿದ್ದಿದ್ದರೂ ಈ ಸಾರೆ ೭೭ ಮತಗಳಿಂದಲೇ ಆರಿಸಿ ಬರಬೇಕಾಯಿತು.

## ಜಪಾನಕ್ಕೆ ಸ್ವರಾಜ್ಯ

ಜಪಾನಿ ಶಾಂತಿ ಒಡಂಬಡಿಕೆಯ ಸಂಬಂಧದಲ್ಲಿ ಕೂಡಿದ ಬ್ರಿಟಿಶ ಕಾಮನವೆಲ್ತ ಪರಿಷತ್ತಿನಲ್ಲಿ ಇಂದು ಶಾಂತಿ ಒಡಂಬಡಿಕೆಯ ಕರಾರುಗಳನ್ನು ಕಾರ್ಯಾಚರಣೆಯಲ್ಲಿ ತರುವದನ್ನು ಮೇಲ್ವಿಚಾರಿಸುವ ಬಗ್ಗೆ ಇಷ್ಟು ದಿನ ನಡೆದ ಚರ್ಚೆ ಮುಗಿಯಿತು.

ಒಟ್ಟಿನ ಮೇಲೆ ಪರಿಷತ್ತು ಯಶಸ್ವಿಯಾಗಿದೆಂದೂ ನಾಳೆಯ ದಿನ ಕೊನೆಯ ಅಧಿವೇಶನ ಕೂಡುವದೆಂದೂ ಪ್ರಕಟನೆ ಹೊರಟಿದೆ.

ಜಪಾನದಲ್ಲಿ ಶಾಂತಿ ಒಡಂಬಡಿಕೆಯ ಕರಾರುಗಳು ಬಳಕೆಯಲ್ಲಿ ಬಂದ ನಂತರ ಅದಕ್ಕೆ ಸ್ವರಾಜ್ಯ ಕೊಡಬೇಕೆಂದು ನಿರ್ಣಯವಾಯಿತು. ಸುಪ್ರೀಂ ಕಮ್ಯಾಂಡದ ಬದಲು ನಿಯಂತ್ರಣ ಮಂಡಳ ನೇಮಿಸಬೇಕೆಂದೂ ಶಾಂತಿಸಾಗರ ಯುದ್ಧದಲ್ಲಿ ಸಹಾಯ ನೀಡಿದ ಎಲ್ಲ ರಾಷ್ಟ್ರಗಳು ಹಾಗು ಪಾಕಿಸ್ತಾನ ಇವುಗಳನ್ನು ಶಾಂತಿ ಪರಿಷತ್ತಿಗೆ ಕರೆಯತಕ್ಕದೆಂದೂ ಗೊತ್ತಾಯಿತು.

## ಮೌಂಟ ಬ್ಯಾಟನ್ನರಿಗೆ ಬ್ರಿಟನ್ನಿನ ಅಮಾತ್ಯ ಪದ?

ಸಂಡೇ ಡಿಸ್ಪ್ಯಾಚ್ ಪತ್ರಿಕೆಯು ಲಾರ್ಡ ಮೌಂಟ ಬ್ಯಾಟನ್ನರನ್ನು ಹಿಂದುಸ್ತಾನದಿಂದ ಹಿಂದಕ್ಕೆ ಕರೆಸಿಕೊಂಡು ಅವರಿಗೆ ಬ್ರಿಟನ್ನಿನ ಗಂಡಾಂತರ ಕಾಲದಲ್ಲಿ ಮುಖ್ಯ ಮಂತ್ರಿ ಪದ ಕೊಡಬೇಕೆಂದು ಸೂಚಿಸಿದೆ. ಆದರೆ ಇದು ವ್ಯವಹಾರ್ಯವಾಗಲಿಕ್ಕಿಲ್ಲವೆಂಬ ಅಭಿಪ್ರಾಯ ಅನೇಕರಿಗಿದೆ. ಟೋರಿ ಪತ್ರಿಕೆಗಳು ಪಕ್ಷರಹಿತ ಸರಕಾರ ಸ್ಥಾಪಿಸಲು ಪ್ರಚಾರ ನಡೆಸಿವೆ. ಅರ್ಥಖಾತೆಯ ಉಪಮಂತ್ರಿ ವಿಲಿಯಂಕೇಟಿವ್, ಹಾಗೂ ಮಾರ್ಶಲ್ ಯೋಜನೆಯ ತಜ್ಞರಾದ ಜಾರ್ಜ ಕೆನ್ಯಾನ್ ಈ ಅಮೇರಿಕೆಯ ರಾಜಕೀಯ ಮುಖಂಡರು ಈಗ ಲಂಡನ್ನಿನಲ್ಲಿದ್ದು ಅವರೂ ಸಹ ಕೂಲಿಕಾರ ಸರಕಾರ ಬದಲಿಸಿ ಪಕ್ಷರಹಿತ ಸರಕಾರ ಸ್ಥಾಪಿಸುವ ಬಗ್ಗೆ ಸಲಹೆ ಕೊಟ್ಟಿದ್ದಾರೆಂದು ತಿಳಿಯುತ್ತದೆ.

## ತುಣುಕುಗಳು

ಸರಕಾರೀ ಮುತ್ಸದ್ದಿಗಳ ಕೊಲೆಯಾದ ನಂತರ ಹಾಂಗ್‌ಕಾಂಗ್ ಪೋಲೀಸರು ಜುಲೈ ೧೯ ರಿಂದ ಜಾರಿ ಮಾಡಲಾದ ಕರ್ಫ್ಯೂ ಆಜ್ಞೆಯನ್ನು ಉಲ್ಲಂಘಿಸಿದ್ದಕ್ಕಾಗಿ ೭೦೦ ಕ್ಕಿಂತ ಹೆಚ್ಚು ಜನರನ್ನು ಹಿಡಿದಿದ್ದಾರೆ.

x x x

'ಪ್ರವ್ದಾ' ದ ತೆಹರಾನ ಸುದ್ದಿಗಾರನ ಹೇಳಿಕೆಯ ಪ್ರಕಾರ ತೆಹರಾನಿನ ಶಹನ ದರ್ಬಾರಿನ ಅಧಿಕಾರಿಗಳಿಂದ ಹೊರಟ ಆಜ್ಞೆಗಳಿಗನುಗುಣವಾಗಿ ಅಜರಬೈಜಾನಿನಲ್ಲಿ ಭಯೋತ್ಪಾದಕ ಆಳಿಕೆ ನಡೆದಿದೆಯೆಂದು ಸುದ್ದಿ. ತೆಹರಾನಿನ ಅನುಜ್ಞೆಯಂತೆ ಅಧಿಕಾರಿಗಳು ಮಸೀದೆಗಳಲ್ಲಿ ಹಾಗೂ ಸಂತೆಗಳಲ್ಲಿ ರಶಿಯನರ ವಿರುದ್ಧ ಧರ್ಮಯುದ್ಧ ಹೂಡಬೇಕೆಂದು ಪ್ರಚಾರ ನಡೆಸಿರುವರೆಂದೂ ವೃತ್ತಪತ್ರಗಳು ಪ್ರತಿದಿನ ಪ್ರಜಾಸತ್ತಾವಾದಿಗಳೊಡನೆ ಸಂಬಂಧವಿಟ್ಟುಕೊಂಡ ಆರೋಪದ ಮೇಲೆ ಅನೇಕರನ್ನು ಮರಣ ದಂಡನೆಗೆ ಗುರಿಪಡಿಸುತ್ತಿರುವ ಸುದ್ದಿಯನ್ನು ಪ್ರಕಟಿಸುತ್ತಿರುವವೆಂದೂ ಅವನ ಹೇಳಿಕೆಯಲ್ಲಿದೆ.

x x x

ಬ್ರಿಟಿಶ ಕೂಲಿಕಾರ ಪಕ್ಷದ ಹಿಂದಿನ ಅಧ್ಯಕ್ಷರಾದ ಪ್ರೊ. ಲಾಸ್ಕಿಯವರು ಪಾಲಿಸ್ತಾನ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಬ್ರಿಟಿಶ ಸರಕಾರವು ತನ್ನ ಪ್ರಾರಂಭದಶೆಯಲ್ಲೇ ಬಹು ದೊಡ್ಡ ಅಪರಾಧ ಮಾಡಿತೆಂದು ಹೇಳಿರುವುದಾಗಿ ಫ್ರಾನ್ಸಿನ ಸಾಮ್ಯವಾದೀ ಪಕ್ಷದ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.

x x x

ಅಲ್ಜೀರಿಯರ್ಸಿನಿಂದ ರಾಬತ್ತಿಗೆ ಹೋಗುವಾಗ ಉತ್ತರ ಆಫ್ರಿಕದ ಮಾರ್ಗದ ವಿಮಾನವು ಮೊರಾಕೊ ಹತ್ತಿರದ ಗುಡ್ಡದ ಮೇಲೆ ಮುರಿದು ಬಿದ್ದು ಒಬ್ಬನು ಸತ್ತನೆಂದೂ ಅನೇಕರಿಗೆ ಗಾಯವಾಗಿದೆಯೆಂದೂ ಸುದ್ದಿ.

# ಕಂನಾಡಿಗನ ಆತ್ಮನಿರೀಕ್ಷಣೆಯ ವಿಮರ್ಶೆ

ಲೇ:— ಶ್ರೀ ಡಿ. ಎಸ್. ಕರ್ಕಿ, ಎಂ. ಎ.

'ಕರ್ಮವೀರ' ಪತ್ರಿಕೆಯ ಸ್ವಾತಂತ್ರ್ಯ ಸಂಚಿಕೆಯಲ್ಲಿ ಶ್ರೀ ಶಂ. ಬಾ. ಜೋಶಿಯವರು ಬರೆದ "ಕಂನಾಡಿಗನ ಆತ್ಮನಿರೀಕ್ಷಣೆ" ಎಂಬ ಲೇಖದಲ್ಲಿ ಮಾಡಿದ ಆತ್ಮನಿರೀಕ್ಷಣೆ ಮನನೀಯವಾಗಿವೆ. ಅದರಲ್ಲಿಯೂ "ಕಂನಾಡು ಸ್ವತಂತ್ರ ಭಾರತದಲ್ಲಿ ಮಾನದಿಂದ ತಲೆಯೆತ್ತಿ ಮೆರೆಯಬೇಕಾದರೆ... ...ಗುಣಪಕ್ಷಪಾತಿಗಳಾಗಲು ಕಲಿಯಬೇಕೇ ಹೊರತು ಯಾವ ಜಾತಿ ಮತದ ಪಕ್ಷಪಾತವು ಕಲ್ಯಾಣಕರವಾಗಲಾರದು" ಎಂಬ ಅವರ ಆಶಯವು ತುಂಬ ಮನನೀಯವಾಗಿದೆ. ಆದರೆ ದುರ್ದೈವದಿಂದ ಜಾತಿ ಮತ ಪಕ್ಷಪಾತವನ್ನು ತೊಡೆದು ಹಾಕಬೇಕೆಂಬ ಸದಭಿಪ್ರಾಯದ ಭರದಲ್ಲಿ ಅವರು ಎತ್ತಿದ ಅಂಶಗಳು ಜಾತಿ ಮತ ಪಕ್ಷಪಾತವನ್ನೇ ಎತ್ತಿ ತೋರಿಸಿವೆ. ಶ್ರೀ ಶಂ. ಬಾ. ಅವರು ನಿಜವಾಗಿಯೂ ಜಾತಿಮತ ಪಕ್ಷಾತೀತರಾಗಿರಬಹುದು. ಆದರೆ ಅವರು ಉಪಯೋಗಿಸಿದ ಉದಾಹರಣೆಗಳೂ ದೃಷ್ಟಾಂತಗಳೂ ಅವರು ಪ್ರತಿಪಾದಿಸಿದ ಅಭಿಪ್ರಾಯದ ಬಗೆಗೆ ಸಂದೇಹವನ್ನುಂಟು ಮಾಡುತ್ತವೆ. ಆದುದರಿಂದ ಈ ಸಂದರ್ಭದಲ್ಲಿ ಸ್ಪಷ್ಟೀಕರಣ ಅವಶ್ಯಕವೆನಿಸಿ ಕೆಳಗಿನ ಮಾತುಗಳನ್ನು ಬರೆಯಲಾಗಿದೆ.

ಶ್ರೀ ಶಂ. ಬಾ. ಅವರು ಉದಾಹರಣೆಗಾಗಿ ಶ್ರೀ ಬಸವಣ್ಣನವರನ್ನು ಎತ್ತಿ ಅವರ ಹಾಗು ಮಹಾತ್ಮಾ ಗಾಂಧಿಯವರ ಮನೋಭೂಮಿಕೆಯಲ್ಲಿ ಸಾಮ್ಯವನ್ನು ತೋರಿಸುವುದರ ಬದಲಾಗಿ ಅಂತರವೇ ಎದ್ದು ತೋರುವಂತೆ ವಿಷಯವನ್ನು ಮಂಡಿಸಿದ್ದಾರೆ. ಈ ವೈಷಮ್ಯ ಪ್ರದರ್ಶನದಿಂದ ಯಾವ ಪ್ರಯೋಜನವೂ ಆಗುವಂತಿಲ್ಲ ಇಷ್ಟೇ ಅಲ್ಲ. ಅನಾವಶ್ಯಕವಾಗಿ ಅವರ ವಿಷಯದಲ್ಲಿ ತಪ್ಪು ಕಲ್ಪನೆಗೆ ಇಂಬುಕೊಟ್ಟಂತಾಗಿದೆ. ಮಹಾತ್ಮಾ ಗಾಂಧಿಯವರ ಮೂರ್ತಿ ಪ್ರಭೆಯ ಬಗೆಗೆ ಯಾರಿಗೂ ಸಂದೇಹವಿಲ್ಲ. ಅವರು ಭಾರತಕ್ಕೆ ಮಾತ್ರವಲ್ಲ, ಇಡಿಯ ಮಾನವ ಕುಟುಂಬಕ್ಕೆ ಪೂಜ್ಯರಾಗಿ ನಿಂತಿದ್ದಾರೆಂಬುದನ್ನು ಸಮರ್ಥಿಸುವ ಅವಶ್ಯಕತೆ ಈಗ ಉಳಿದಿಲ್ಲ. ಎಲ್ಲರೂ ಕಂಡುಕೊಂಡ ಅವರ ಮೂರ್ತಿಪ್ರಭೆಯನ್ನು ಎತ್ತಿ ತೋರಿಸುವ ನಿಮಿತ್ತದಿಂದ, ಬಸವಣ್ಣನವರ ವಿಷಯದಲ್ಲಿ ಕನ್ನಡ ನಾಡಿನ ಜನ ವ್ಯಕ್ತ ಮಾಡಿದ ಆದರವನ್ನು "ಪರಂಪರಾ ಪ್ರೀತಿಯಿಂದಲೂ ತಮ್ಮವರೆಂಬ ಅಭಿಮಾನದಿಂದಲೂ ಕೌತುಕದಿಂದಲೂ ಅಂದ ಮಾತೇ ಸರಿ" ಎಂದು ಶಂ. ಬಾ. ಅವರು ಏಕೆ ಕಡೆಗಣಿಸಿರುವರೋ! ಅವರ ಈ ಮಾತಿನ ಹಿಂದೆ ಇರುವ ಭಾವ ಅವರಿಗೇ ಗೊತ್ತು. ಆದರೆ ಇಷ್ಟು ಮಾತ್ರ ನಿಜ; ಜನ ಅವರ ವಿಷಯದಲ್ಲಿ ತಪ್ಪು ತಿಳುವಳಿಕೆ ಮಾಡಿಕೊಳ್ಳಲು ಅದರಲ್ಲಿ ಸಾಕಷ್ಟು ಆಸ್ಪದವಿದೆ. ಶ್ರೀ ಬಸವಣ್ಣನವರಿಗೂ ಮಹಾತ್ಮಾ ಗಾಂಧಿಯವರಿಗೂ [ಲೇಖಕರ ಅಭಿಪ್ರಾಯದಂತೆ!] ಇರುವ 'ಅಜಗಜಾಂತರ'ವನ್ನು ತೋರಿಸುವ ಭರದಲ್ಲಿ ಅವರು "ಶಿವಶರಣರು" ಎಂಬ ಪದಕ್ಕೆ ಅತಿ ಸಂಕುಚಿತವಾದ ಅರ್ಥವನ್ನು ಮಾಡಿದ್ದಾರೆ. ಇದು ನಿಜವಾಗಿಯೂ ವಿಷಾದವನ್ನುಂಟುಮಾಡುವ ವಿಷಯ. ಮಹಾತ್ಮಾ ಗಾಂಧಿಯವರ "ರಾಮ ನಾಮ"ಕ್ಕೆ ಈ ಬಗೆಯ ಸಂಕುಚಿತ ಅರ್ಥವನ್ನಿಟ್ಟುಕೊಂಡರೆ ಅನರ್ಥವುಂಟಾಗಲಾರದೇ? ಇಬ್ಬರು ಮಹಾತ್ಮರನ್ನು ತಮ್ಮ ತಕ್ಕಡಿಯ ಪರಡಿಗಳಲ್ಲಿಟ್ಟು ತೂಗುವ ಸಾಹಸ ಮಾಡಿದ್ದು ಧಾರ್ಷ್ಟ್ಯವೇ ಸರಿ. ಕಂನಾಡಿಗನ ಆತ್ಮನಿರೀಕ್ಷಣೆಯಲ್ಲಿ ಈ ತುಲನೆ ಇಷ್ಟೊಂದು ದೀರ್ಘವಾಗಿ ಮತ್ತು ತೀಕ್ಷ್ಣವಾಗಿ ಏಕೆ ಪ್ರಸ್ತಾಪಿಸಲ್ಪಟ್ಟದೆಯೋ ತಿಳಿಯದು.

ಅದೇ 'ನಿರೀಕ್ಷಣೆಯಲ್ಲಿ'ಯೆ ಇನ್ನೊಂದು ಅಷ್ಟೇ ದೀರ್ಘವಾದ ವಾಕ್ಯವೃಂದದಲ್ಲಿ ಕಿತ್ತೂರ ಚೆನ್ನಮ್ಮ, ಹೇಮರಡ್ಡಿ ಮಲ್ಲಮ್ಮ ಇವರಿಬ್ಬರನ್ನೂ ತಕ್ಕಡಿಯ ಒಂದು ಪರಡಿಯಲ್ಲಿಟ್ಟು ಪುಲಿಕೇಶಿಯ ಸೊಸೆ ವಿಜಯಾಂಕೆ, ವಿಕ್ರಮನ ತಂಗಿ ಅಕ್ಕಾದೇವಿ ಇವರನ್ನು ಇನ್ನೊಂದು ಪರಡಿಯಲ್ಲಿಟ್ಟು ತೂಗುವ ಸಾಹಸ ಮಾಡಲಾಗಿದೆ. ಈ ಮುಂಚಿನ ಮಹಿಳೆಯರ ಉಜ್ವಲ ಚರಿತ್ರೆ [illegible] ಕನ್ನಡಿಗರು ಸ್ಫೂರ್ತಿಯನ್ನು ಪಡೆಯುವುದು ಅವಶ್ಯಕ. ವಿಜಯಾಂಕೆ ಮತ್ತು ಅಕ್ಕಾದೇವಿ ಇವರ ವಿಷಯದಲ್ಲಿ ಕನ್ನಡ ಜನತೆಗೆ ಮುಸುಕಿದ ಮರವೆಯ ಪರೆಯನ್ನು ಹರಿದು ಅವರ ಬಗೆಗೆ ತಕ್ಕ ಅರುಹನ್ನುಂಟು ಮಾಡಲು ಲೇಖಕರು ಪ್ರಯತ್ನಿಸಿದುದು ತುಂಬಾ ಸ್ತುತ್ಯ. ಆದರೆ ಅದಕ್ಕಾಗಿ "ಕಿತ್ತೂರ ಚೆನ್ನಮ್ಮ, ಹೇಮರಡ್ಡಿ ಮಲ್ಲಮ್ಮ ಇವರಿಗಿಂತ ಅಕ್ಕಾದೇವಿ ಮತ್ತು ವಿಜಯಾಂಕೆಯರು ಹೆಚ್ಚಿನ ವೈಭವಶಾಲಿಗಳು" ಎಂದು ಈ ಸಂದರ್ಭದಲ್ಲಿ ಹೇಳುವ ಅವಶ್ಯಕತೆ ತಾನೆ ಏನು? ವಿಜಯಾಂಕೆ ಮತ್ತು ಅಕ್ಕಾದೇವಿಯರನ್ನು ಮರೆತುದು ಎಷ್ಟು ತಪ್ಪೋ, ಕಿತ್ತೂರ ಚನ್ನಮ್ಮ, ಹೇಮರಡ್ಡಿ ಮಲ್ಲಮ್ಮ ಇವರ ನೆನಪನ್ನು ಉಳಿಸಿಕೊಂಡುದು ಅಷ್ಟೇ ತಪ್ಪು ಎಂಬ ಸೂಚನೆ ಶಂ. ಬಾ. ಅವರ ಲೇಖನದಲ್ಲಿ ಅಡಕವಾಗಿದೆ. "ನಮ್ಮ ಇಳಿಗಾಲದೊಳಗಿನ ಇತಿಹಾಸದ ನೆನಪು ಮಾತ್ರ ನಮ್ಮ ನಾಡಿಗರಿಗೆ ತುಂಬಾ ಉಳಿದಿದೆ!" ಎಂಬ ಉದ್ಗಾರವು ಈ ಮೇಲಿನ ಸೂಚನೆಯನ್ನು ಇನ್ನೂ ದೃಢೀಕರಿಸುತ್ತದೆ.

ಪ್ರಸಿದ್ಧ ಸಂಶೋಧಕರೆಂದು ಹೆಸರು ಪಡೆದ ಶ್ರೀ ಶಂ. ಬಾ. ಅವರು ತಮ್ಮ ಕೀರ್ತಿಗೆ ತಕ್ಕ ಒಂದು ಚಮತ್ಕಾರಕವಾದ ಸಂಶೋಧನವನ್ನು ಆತ್ಮನಿರೀಕ್ಷಣೆಯ ಮೂಲಕ ನಾಡಿನ ಜನತೆಯ ಮುಂದಿಟ್ಟಿದ್ದಾರೆ. "೧೨ ನೆಯ ಶತಮಾನದಿಂದ ನಾಡಿನ ವೈಭವದ ಇಳಿಗಾಲಕ್ಕೆ ಆರಂಭವಾಯಿತಂತೆ!"

ಒಂದು ದೃಷ್ಟಿಯಿಂದ ನೋಡಿದರೆ ಈ ಮಾತಿನಲ್ಲಿ ಸತ್ಯಾಂಶವಿಲ್ಲದೆ ಇಲ್ಲ. ಆದರೆ ಅದು ಸತ್ಯದ ಒಂದು ಅಂಶ ಮಾತ್ರ. ವೈದಿಕ ಧರ್ಮದ ದೃಷ್ಟಿಯಿಂದ ೧೨ ನೆಯ ಶತಮಾನ ನಿಜವಾಗಿಯೂ ಇಳಿಗಾಲ! ಉಳಿದ ದೃಷ್ಟಿಯಿಂದ ಶಂ. ಬಾ. ಅವರು ಆ ಶತಮಾನದ ಘನತೆಯನ್ನು ಗಮನಿಸಿಲ್ಲವಾಗಿ ತೋರುತ್ತದೆ. ೧೨ ನೆಯ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ನಡೆದ ಧಾರ್ಮಿಕ ಹಾಗೂ ಸಾಮಾಜಿಕ ಕ್ರಾಂತಿಗಳು ಶಂ. ಬಾ. ಅವರ ದೃಷ್ಟಿಯಲ್ಲಿ 'ಸಣ್ಣಪುಟ್ಟ' ವಿವರಗಳಾಗಿವೆ!

ಆ ಕಾಲದ ರಾಜಕೀಯ ಘನತೆಯ ವಿಷಯದಲ್ಲಿ ಕನ್ನಡ ನಾಡಿನ ಚರಿತ್ರೆಯನ್ನು ಬರೆದ ಶ್ರೀ ಸಾಲೆತೊರ ಅವರ ಮಾತುಗಳು ಈ ಸಂದರ್ಭದಲ್ಲಿ ಗಮನಾರ್ಹವಾಗಿವೆ: "ವೀರ ವಿರುಪಾಕ್ಷ ಬಲ್ಲಾಳನು ಸತ್ತ ವರುಷವೆ ಉದಿಸಿದ ವೈಭವಪೂರ್ಣವಾದ ವಿಜಯನಗರ ಸಾಮ್ರಾಜ್ಯ ಸೂರ್ಯನ ಮುಂಬೆಳಗು ಹೊಯ್ಸಳ ಸಾಮ್ರಾಜ್ಯ!" (ಕನ್ನಡ ನಾಡಿನ ಚರಿತ್ರೆ ಭಾ. ೧. ಪುಟ ೫೩೨) ಕನ್ನಡ ನಾಡಿನ-ಅಷ್ಟೇ ಏಕೆ ಇಡೀ ಭಾರತದಲ್ಲಿಯೇ—ವೈಭವಯುಕ್ತವಾಗಿ ಮೆರೆದ ವಿಜಯನಗರ ಸಾಮ್ರಾಜ್ಯ ಕನ್ನಡಿಗರ ಹೆಮ್ಮೆಯ ಕುರುಹಾಗಿದೆ!

ಹೀಗಿದ್ದು "ವಿಜಯ ನಗರ ಸಾಮ್ರಾಜ್ಯವೆಂಬುದು" ದೀಪವು ಆರುವಾಗಿನ ಕೊನೆಯ ದೊಡ್ಡ ಬೆಳಕು" ಎಂದು ಶಂ. ಬಾ. ಅವರು ಸಂಶೋಧನೆ ಮಾಡಿದ್ದಾರೆ!

ಅಂತೂ ಕಂನಾಡಿಗನ ಆತ್ಮನಿರೀಕ್ಷಣೆಯ ಬೆಳಕಿನಲ್ಲಿ ಯಾವದನ್ನು ಗಿಟ್ಟಬೇಕೆಂದು ಅವರು ಹೊರಟಿದ್ದಾರೋ ಅದನ್ನೇ ಕುಟ್ಟಿ ಕೆಡಹಿದ್ದಾರೆ. 'ಕಂನಾಡಿಗನ ಆತ್ಮನಿರೀಕ್ಷಣೆ'ಯು ಕೇವಲ ಶಂ. ಬಾ. ಅವರ ಆತ್ಮನಿರೀಕ್ಷಣೆಯಾಗಿರಲಿಕ್ಕಿಲ್ಲವಷ್ಟೆ?

---

# ಆತ್ಮನಿರೀಕ್ಷಣೆಯ ಸ್ಪಷ್ಟೀಕರಣ

ಲೇ:— ಶ್ರೀ ಶಂ. ಬಾ. ಜೋಶಿಯವರು

ನನ್ನ ವಿಚಾರ ಸರಣಿಯ ಹಿನ್ನೆಲೆಯು ತಿಳಿದರೆ ಆಕ್ಷೇಪಕರೂ ಆ ದೃಷ್ಟಿಯಿಂದ ವಿಚಾರ ಮಾಡಲು ಸ್ವಲ್ಪವಾದರೂ ಸಮರ್ಥರಾಗಬಹುದೆಂದು ನಂಬಿದ್ದೇನೆ. 'ಕರ್ಣನ ಮೂರು ಚಿತ್ರಗಳು' ಎಂಬ ಪುಸ್ತಕದ ಅರಿಕೆಯಲ್ಲಿ ಆ ಮಾತು ಸ್ವಲ್ಪ ಬಂದಿದೆ. ಅದು ಹೀಗಿದೆ:—

'ಇಂದಿನ ಪರಿಣಾಮದ ಕಾರಣವು ನಿನ್ನೆಯಲ್ಲಿ ಇರುತ್ತದೆ ಈ ದೃಷ್ಟಿಯಿಂದ ನಮ್ಮ ಇಂದಿನ ರಾಷ್ಟ್ರೀಯ ಅವನತಿಯ ಬೇರುಗಳು ನಮ್ಮ ಜನಗಳಿಗೆ ಆದರ್ಶವಾಗಿ ದಿನದ ನಡೆವಳಿಗೆ ಸ್ಫೂರ್ತಿಯನ್ನೀವ ಹಿಂದಿನ ಸಾಹಿತ್ಯದಲ್ಲಿ ಎಲ್ಲಿಯಾದರೂ ಅಡಗಿಕೊಂಡಿರಲೇ ಬೇಕೆಂಬುದರಲ್ಲಿ ಸಂದೇಹವಿಲ್ಲ ...'ನಿನ್ನೆ' ಎಲ್ಲವೂ ದೋಷರಹಿತವೇ ಆಗಿದ್ದರೆ ಇಂದು ನರಳುವ, ಬಳಲುವ ಪಾಡು ಏಕೆ ಉಂಟಾಗುತ್ತಿತ್ತು?

ನಿನ್ನೆಯೊಳಗಿನ ಗುಣಗಳೊಡನೆ ಬೆರೆತುಕೊಂಡ ಕುಂದು ಕೊರತೆಗಳನ್ನೂ ಗುಣವೆಂದೇ ಎತ್ತಿ ಕೊಂಡಾಡುವುದು ನಮ್ಮ ನಾಳಿನ ನೆಮ್ಮದಿಗೆ ಸಾಧನವಾಗದು."

ಆದುದರಿಂದ ಹಿಂದಿನದು ಎಷ್ಟೇ ಹಿರಿದಾಗಿದ್ದರೂ ನಿಳ್ಗಿಯನ್ನು ಹಾರಯಿಸುವ ಜನಾಂಗದವರು ಅದರ ಗುಣದೋಷಗಳನ್ನು ಸರಿಯಾಗಿ ಅರಿತುಕೊಳ್ಳುವುದು ಕರ್ತವ್ಯವಾಗಿದೆ.

ಭಾರತಕ್ಕೆ ಸ್ವಾತಂತ್ರ್ಯವು ಸಿಕ್ಕದಿನ ಕಂನಾಡಿಗನು ತನ್ನ ನಿರೀಕ್ಷಣೆ ಮಾಡಿಕೊಂಡುದರಲ್ಲಿ, ತನ್ನ ಯಾವ ತಪ್ಪುಗಳಿಂದ ತನಗೆ ಈ ವರೆಗೆ ದಾಸ್ಯಪಂಕದಲ್ಲಿ ಹೊರಳಾಡಬೇಕಾಯಿತು? ಎಂಬುದನ್ನು ವಿಮರ್ಶಿಸಿ ಸ್ವಲ್ಪದರಲ್ಲಿ ನಾಲ್ಕು ಮಾತುಗಳನ್ನು ಹೇಳಿತ್ತು. ಅದರಲ್ಲಿ ಎರಡು ಪ್ರಕಟವಾಗಿ ಎರಡು ಉಳಿದುಬಿಟ್ಟವು.

ಸಂಪ್ರದಾಯ ಶರಣರಾಗಿ, ರೂಢಿಮೂಢರಾಗಿ ನಮ್ಮ ನಾಡಿಗರು ಕೀಳ್ಮೆಗೆ ಇಳಿದರು. ಯಾವ ವ್ಯಕ್ತಿಯೇ ಆಗಲಿ ಎಲ್ಲ ಕಾಲದಲ್ಲೂ ಸಾಕಾಗುವಂತಹ ಸಂದೇಶವನ್ನು ಕೊಡುವುದು ಸಾಧ್ಯವಿಲ್ಲ. ಒಬ್ಬೊಬ್ಬ ಮಹಾಪುರುಷರೂ ತಮ್ಮ ಕಾಲಕ್ಕೆ ಬೇಕಾಗುವ ಮಹಾಕೃತಿ ಎಸಗಿ, ದಿವ್ಯ ಸಂದೇಶ ಹೇಳಿ ನಾಡಿಗೆ ಉಪಕಾರ ಮಾಡಿರುತ್ತಾರೆ.

ಅವರಲ್ಲಿ ಆದರವಿಡುವುದೂ ಕರ್ತವ್ಯ. ಆದರೆ ಆದರವನ್ನಿಡುವ ಭರದಲ್ಲಿ, ಅವರ ತತ್ವಗಳು ತ್ರಿಕಾಲಾಬಾಧಿತವೆಂಬ ಭ್ರಮೆಯನ್ನುಂಟು ಮಾಡಿಕೊಳ್ಳಲಾಗಿದೆಂದು ನನ್ನ ಮತ. ಕಾಲ ಪರಿಸ್ಥಿತಿಯು ಬದಲಾದಂತೆ ಹೊಸ ತತ್ವಜ್ಞಾನವು ಮುಂದೆ ಬರಲೇಬೇಕು. ಆ ದೃಷ್ಟಿ

—೧೧ನೇ ಪುಟಕ್ಕೆ

---

# ಬೆಳೆ ಇಲ್ಲಪಿ ಅಳಿ

ದೇಶದಲ್ಲುಂಟಾದ ಆಹಾರ ಆರಿವೆಗಳ ಕೊರತೆ, ಏರುತ್ತಿರುವ ಬೆಲೆ, ಹೆಚ್ಚಾಗುತ್ತಿರುವ ಜೀವನದ ವೆಚ್ಚ, ಕೂಲಿಕಾರರಲ್ಲಿ ಅತೃಪ್ತಿಯಿಂದಾಗಿ ಉತ್ಪಾದನೆಯಲ್ಲುಂಟಾದ ಇಳಿತ, ಮತ್ತು ನಮ್ಮಲ್ಲಿ ಹೊಸ ಉದ್ಯೋಗಗಳನ್ನು ಸ್ಥಾಪಿಸುವದಕ್ಕಾಗಿ ನಾವು ಪರದೇಶಗಳಿಗೆ ವಿನಿಮಯವಾಗಿ ಕೊಡುತ್ತಿರುವ ಪದಾರ್ಥಗಳು ಇವುಗಳಿಂದಾಗಿ ಭಾರತದಲ್ಲಿ ಇಂಗ್ಲಂಡದಷ್ಟೇ! ಭೀಕರವಾದ ಆರ್ಥಿಕ ಬಿಕ್ಕಟ್ಟು ಉಂಟಾಗಬಹುದೆಂದು ಸರಕಾರದವರು ಊಹಿಸುತ್ತಿದ್ದಾರೆ.

ಈ ಎಲ್ಲ ಎಡರು ತೊಡರುಗಳನ್ನು ದಾಟುವದಕ್ಕಾಗಿಯೇ ದೇಶದ ಒಟ್ಟು ಉತ್ಪಾದನೆಯನ್ನು ಹೆಚ್ಚಿಸುವದರಲ್ಲಿ ಸರಕಾರದ ಎಲ್ಲ ಶಕ್ತಿಯನ್ನೂ ಕೇಂದ್ರೀಕರಿಸಲಾಗುವದೆಂದು ತಿಳಿದುಬರುತ್ತದೆ.

ಈ ಬಿಕ್ಕಟ್ಟನ್ನು ಬಿಡಿಸುವದಕ್ಕಾಗಿ ಭಾರತ ಸರಕಾರದ ಮಂತ್ರಿಮಂಡಳದವರು ಯೋಜಿತ ಉತ್ಪಾದನೆ, ಬೆಲೆಗಳನ್ನು ಹಿಡಿತದಲ್ಲಿಡುವದಕ್ಕಾಗಿ ನಿಷ್ಠುರ ನಿಯಂತ್ರಣ, ಗಿರಣಿಗಳಲ್ಲಿಯ ಕೆಲಸದ ತಾಸುಗಳನ್ನು ಹೆಚ್ಚಿಸುವದು, ವಿದೇಶೀ ವಿನಿಮಯವನ್ನು ಸಂಘಟಿಸಿ ರಫ್ತನ್ನು ಹೆಚ್ಚಿಸುವದು ಮುಂತಾದ ಯೋಜನೆಗಳನ್ನು ಕೈಕೊಳ್ಳಬಹುದು.

ಸರಕಾರದ ಬೇರೆ ಬೇರೆ ಖಾತೆಗಳಲ್ಲಿ ಮಾಡಿದ ವಿಚಾರಣೆಯಿಂದ ಕೆಲ ಸಂಗತಿಗಳು ತಿಳಿದು ಬರುತ್ತವೆ. ಯುದ್ಧ ಕಾಲದಲ್ಲಿ ಒಕ್ಕಲುತನಕ್ಕಾಗಿ ಹೆಚ್ಚು ಭೂಮಿಯನ್ನು ಉಪಯೋಗಿಸುತ್ತಿದ್ದರೂ ಇನ್ನೂ ಕೆಲ ವರುಷಗಳ ವರೆಗೆ ಅದನ್ನು ಇದ್ದುದಕ್ಕಿಂತ ಹೆಚ್ಚಿಸುವದು ಕಷ್ಟವೆಂದು ಕಂಡು ಬರುತ್ತದೆ.

ಔದ್ಯೋಗಿಕ ಉತ್ಪಾದನೆಗೆ ಮುಖ್ಯ ಜೀವಾಳದಂತಿದ್ದ ಉರುವಲದ ಪರಿಸ್ಥಿತಿಯು ಬಹಳ ಅತೃಪ್ತಿಕರವಾಗಿದೆ. ಕಲ್ಲಿದ್ದಲಿಯ ಹುಟ್ಟುವಳಿಗಿಂತಲೂ ವಾಹನ ಸೌಕರ್ಯದ ಅಭಾವವೇ ಇದಕ್ಕೆ ಹೆಚ್ಚು ಕಾರಣವಾಗಿದೆ. ಕಣಿಗಳಲ್ಲಿ ತಿಂಗಳುಗಟ್ಟಲೆ ಕಲ್ಲಿದ್ದಲಿಯು ವಾಹನ ದಾರಿ ಕಾಯುತ್ತ ಬಿದ್ದಿರುತ್ತದೆಯೆಂದು ತಿಳಿದು ಬರುತ್ತದೆ. ಬರುವ ಮೂರು ವರುಷಗಳಲ್ಲಿ ಪ್ರತಿ ವರುಷವೂ ಅರ್ಧ ಲಕ್ಷ ಟನ್ನಿನಷ್ಟು ಕೊರತೆಯು ಕಂಡು ಬರಬಹುದೆಂದು ಸಲಹೆಗಾರ ಯೋಜನಾ ಸಮಿತಿಯ ಅಭಿಪ್ರಾಯವಿರುತ್ತದೆ.

ಯುದ್ಧ ಮುಗಿದಂದಿನಿಂದಲೂ ಕೂಲಿಕಾರರ ಅಸಂತೃಪ್ತಿ ಹೆಚ್ಚಾಗಿದೆ. ಸಂಪುಗಳ ತೊಂದರೆಯಿಂದಾಗಿ ೧೯೪೫ ರಲ್ಲಿ ೩೩೬,೦೦೦ ಜನರ ಒಂದು ದಿನದ ಕೆಲಸದಷ್ಟು ಹಾನಿಯು ರಾಷ್ಟ್ರಕ್ಕಾಯಿತು. ೧೯೪೬ ರಲ್ಲಿ ಈ ಪ್ರಮಾಣವು ೧,೨೦೩೩,೦೦೦ ಕ್ಕೇರಿತು. ಈ ವರ್ಷದಲ್ಲಿ ಪರಿಸ್ಥಿತಿಯು ಇನ್ನೂ ಹದಗೆಟ್ಟಿದ್ದು ಮೊದಲ ನಾಲ್ಕು ತಿಂಗಳುಗಳಲ್ಲಿ ಈ ಪ್ರಮಾಣವು ೫ ಲಕ್ಷಕ್ಕೆ ಮುಟ್ಟಿದೆಯೆಂದು ಲೇಬರ ಗೆಜೆಟ್ಟಿನಲ್ಲಿ ಪ್ರಸಿದ್ಧವಾಗಿದೆ. ಇದರಿಂದಾಗಿ ಜೀವನದ ವೆಚ್ಚವು ಬೆಳೆದಿದ್ದು ಪದಾರ್ಥಗಳ ಬೆಲೆಯು ಹೆಚ್ಚಾಗಿದೆ.

ಈ ಕೂಲಿಕಾರ ವರ್ಗದ ಅಸಂತೋಷಕ್ಕೆ ಪೇತನ ಸಮಿತಿಯ ಅತೃಪ್ತಿಕರ ನಿರ್ಣಯವೂ ಕಲೆ ಮಟ್ಟಿಗೆ ಕಾರಣವಿದೆ. ಪೇತನ ಸಮಿತಿಯ ನಿರ್ಣಯವು ಸರಕಾರೀ ನೌಕರರಿಗಷ್ಟೇ ಎಂದಿದ್ದರೂ ಸರಕಾರೇತರ ನೌಕರರು ಕೂಡ ಅದೇ ಮಟ್ಟದ ಪಗಾರ ಕೇಳುತ್ತಿದ್ದಾರೆ.

ಕೆಲವು ಔದ್ಯೋಗಿಕ ಕೇಂದ್ರಗಳಲ್ಲಿ ಜೀವನದ ವೆಚ್ಚವು ಬೆಳೆದದ್ದನ್ನು ಕೆಳಗಿನ ಅಂಕೆ ಸಂಖ್ಯೆಗಳು ತೋರಿಸುತ್ತವೆ. ಈ ಏರಿಕೆಗೆ ಮುಖ್ಯವಾಗಿ ಆಹಾರದ ನಿಯಂತ್ರಿತ ಬೆಲೆಯು ಹೆಚ್ಚಾದದ್ದೇ ಕಾರಣವೆಂದು ಕಂಡುಬರುತ್ತದೆ. ಬೆಲೆಗಳ ಏರಿಕೆಗೆ ಉತ್ಪಾದನದ ಇಳಿಕೆಯು ಕೊರತೆಯನ್ನುಂಟುಮಾಡಿದೆ. ಸರಕಾರವು ಆಮದುಗಳ ಮೇಲೆ ಹಾಕಿದ ನಿಯಂತ್ರಣದಿಂದ ಈ ಪರಿಸ್ಥಿತಿಯು ಇನ್ನೂ ಹದಗೆಟ್ಟಿದೆ.

| | ಆಗಸ್ಟ ೧೯೩೯ | ಸರಾಸರಿ ೧೯೪೫ | ಮಾರ್ಚ ೧೯೪೭ |
|---|---|---|---|
| ಮುಂಬಯಿ ಕೇಂದ್ರ ಜೂನ ೧೯೩೪— ೧೦೦ | | | |
| ಆಹಾರ | ೧೧೨ | ೨೭೧ | ೩೨೮ |
| ಸಾಮಾನ್ಯ ಸೂಚಕ | ೧೦೫ | ೨೩೫ | ೨೬೯ |
| ಮದ್ರಾಸ ಕೇಂದ್ರ ಜೂನ ೧೯೩೬— ೧೦೦ | | | |
| ಆಹಾರ | ೯೫ | ೨೬೦ | ೩೦೯ |
| ಸಾಮಾನ್ಯ ಸೂಚಕ | ೯೮ | ೨೨೩ | ೨೬೭ |
| ಕಾನಪುರ ಕೇಂದ್ರ ಆಗಸ್ಟ ೧೯೩೯— ೧೦೦ | | | |
| ಆಹಾರ | ೧೦೦ | ೩೨೫ | ೩೭೮ |
| ಸಾಮಾನ್ಯ ಸೂಚಕ | ೧೦೦ | ೩೦೮ | ೩೪೧ |
| ಲಾಹೋರ ಕೇಂದ್ರ ೧೯೩೧-೩೫— ೧೦೦ | | | |
| ಆಹಾರ | ೧೨೫ | ೩೭೫ | ೪೩೨ |
| ಸಾಮಾನ್ಯ ಸೂಚಕ | ೧೨೦ | ೪೩೮ | ೩೮೭ |

ಇದೆಲ್ಲದರ ಒಟ್ಟು ಪರಿಣಾಮವು ಅತಿಪ್ರಸರಣದಲ್ಲಿ ಕೊನೆಗೊಳ್ಳುತ್ತದೆ. ಯುದ್ಧ ಕಾಲದಲ್ಲಿಯ ಅತಿಪ್ರಸರಣಕ್ಕೆ ಹೆಚ್ಚು ನೋಟುಗಳನ್ನು ಚಲಾವಣೆಯಲ್ಲಿಟ್ಟದ್ದೇ ಕಾರಣವೆಂದು ಹೇಳುತ್ತಾರೆ. ೧೯೩೯ರಲ್ಲಿ ಚಲಾವಣೆಯಲ್ಲಿದ್ದ ನೋಟುಗಳ ಸಂಖ್ಯೆಯು ೧೭೦.೩೯ ಕೋಟಿ ಇದ್ದುದು ೧೯೪೭ನೆಯ ಫೆಬ್ರುವರಿಯಲ್ಲಿ ಅದರ ಪ್ರಮಾಣವು ೧೨೩೪.೫೪ ಕೋಟಿಗೆ ಮುಟ್ಟಿರುತ್ತದೆ. ಆದರೆ ಯುದ್ಧ ಮುಗಿದಂದಿನಿಂದ ನೋಟುಗಳ ಚಲಾವಣೆಯು ಅಷ್ಟೊಂದು ಬೆಳೆದಿಲ್ಲವಾದುದರಿಂದ ಈಗಿನ ಬಿಕ್ಕಟ್ಟಿಗೆ ಅದನ್ನೇ ಸಂಪೂರ್ಣ ಹೊಣೆಯನ್ನಾಗಿ ಹಿಡಿಯಲು ಬರುವದಿಲ್ಲ.

ನೋಟುಗಳ ಚಲಾವಣೆಯು ಯುದ್ಧ ಮುಗಿದ ತರುವಾಯ ಬೆಳೆಯಲಿಲ್ಲ. ಆದರೆ ಪದಾರ್ಥಗಳ ಬೆಲೆಯು ಮಾತ್ರ ಹೆಚ್ಚಾಯಿತು. ಸರಕಾರದ ಆದಾಯದಲ್ಲಿ ಉಂಟಾದ ಹೆಚ್ಚುವಿಕೆ, ಔದ್ಯೋಗಿಕ ಮತ್ತು ಒಕ್ಕಲುತನದ ಕೂಲಿಕಾರರ ಬೆಳೆದ ಆದಾಯ ಇವುಗಳ ಪರಿಣಾಮವಾಗಿ ಹೆಚ್ಚಿದ ಪದಾರ್ಥಗಳ ಬೇಡಿಕೆ- ಇವೇ ಈ ಪರಿಸ್ಥಿತಿಗೆ ಕಾರಣವೆಂದು ಹೇಳುತ್ತಾರೆ. ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳು ಪದಾರ್ಥಗಳ ಬೆಲೆಗಳ ಬಗ್ಗೆ ನಿಶ್ಚಿತ ಧೋರಣೆಯನ್ನು ಜಾರಿಯಲ್ಲಿ ತರದೇ ಇದ್ದದ್ದೂ ಒಂದು ಕಾರಣವಾಗಿದೆ.

ಉತ್ಪಾದನೆಯು ಈ ಬಿಕ್ಕಟ್ಟನ್ನು ಬಿಡಿಸಬೇಕಾದರೆ ಒಳ್ಳೆ ಬಿಗಿಯಾದ ನಿಯಂತ್ರಣವು ಅವಶ್ಯವೆಂದು ಹೇಳಲಾಗುತ್ತಿದೆ. ಉತ್ಪಾದನೆ ಮತ್ತು ಅದರ ಮಾರಾಟ ಇವೆರಡನ್ನೇ ಲಕ್ಷ್ಯದಲ್ಲಿ ಹಿಡಿದೆ ಉತ್ಪಾದನೆಯ ಯೋಗ್ಯ ಹಂಚುವಿಕೆಯು ಮಹತ್ವದ್ದೆಂಬುದನ್ನು ಅರಿಯಬೇಕು. ಅದ್ದರಿಂದ ಉತ್ಪಾದನೆಯನ್ನು ಹೆಚ್ಚಿಸುವದರಿಂದ ತೀವ್ರವೇ ಪದಾರ್ಥಗಳ ಬೆಲೆಯು ಇಳಿಯಬಾರದು. ಈ ಸಂದರ್ಭದಲ್ಲಿ ನಿಯಂತ್ರಣವು ತೆಗೆದ ಅತ್ಯವಶ್ಯವಿದೆ. ನಿಯಂತ್ರಣವನ್ನು ತೆಗೆದೊಡನೆ ಪದಾರ್ಥಗಳ ಬೆಲೆಯು ಒಮ್ಮೆಲೇ ಏರಬಹುದು.

ಸುಯೋಜಿತ ಉತ್ಪಾದನೆಯು ನಿಯಂತ್ರಣವನ್ನು ಒಳಗೊಳ್ಳುತ್ತದೆ. ಆದರೆ ಯಾವ ಯಾವ ಪದಾರ್ಥಗಳನ್ನು ನಿಯಂತ್ರಿಸಬೇಕೆಂಬುದೇ ಮುಖ್ಯ ಪ್ರಶ್ನೆ.

—೧೩ನೇ ಪುಟಕ್ಕೆ

# ಕರ್ಮವೀರ ಹರಿಜನ ಪುರವಣಿ


## ವಿದ್ಯಾರ್ಥಿಗಳ ಬಗೆ

ಹಿಂದುಸ್ತಾನದ ವಿದ್ಯಾರ್ಥಿ ಪ್ರಪಂಚದ ಮೇಲೆ ಒಬ್ಬ ಪತ್ರಿಕಾ ವ್ಯವಸಾಯಿಯು ಸರಿಯಾದ ಹೊತ್ತಿಗೆ ಬರೆದನು. 'ನಿಮ್ಮ — ಅಭಿಪ್ರಾಯವು ಅತ್ಯಗತ್ಯವಾಗಿದೆ'—ಎಂದು ಕೇಳಿದನು. "ವಿದ್ಯಾರ್ಥಿಗಳೆಂದರೆ ಪದವೀಧರರಾಗಲಿರುವವರ ಬುದ್ಧಿಯುಳ್ಳವರು' ಎಂದು ಒಂದುಕಡೆ ದಿವಂಗತ ಎಚ್. ಜಿ. ವೆಲ್ಸರು ಬಣ್ಣಿಸಿದ್ದಾರೆ. ಅರ್ಧ ಪಕ್ವಬುದ್ಧಿಯ ವಿದ್ಯಾರ್ಥಿಗಳನ್ನು ರಾಜಕೀಯಕ್ಷೇತ್ರದಲ್ಲಿ ಬಳಸಿಕೊಳ್ಳುವದು ಅಪಾಯಕರ. ಅದು ವಿದ್ಯಾರ್ಥಿಗಳನ್ನು ಅವರ ಮುಖ್ಯ ಕರ್ತವ್ಯವಾದ ಓದಿನಿಂದ ಮತ್ತು ಓದಿದ್ದನ್ನು ಅರಗಿಸಿಕೊಳ್ಳುವುದರಿಂದ ವಿಮುಖಗೊಳಿಸುತ್ತದೆ. ಇಂತಹ ಕಠಿನ ಕಾಲಗಳಲ್ಲಿ ಪದವೀಧರರಾಗಲಿರುವವರ ಬುದ್ಧಿಯನ್ನು ದುರುಪಯೋಗ ಪಡಿಸಿಕೊಳ್ಳುವುದು ಹಾಗೆ ಮಾಡುವವರ ಮೇಲೆಯೆ ತಿರುಗಿ ಬೀಳುತ್ತದೆ. ಮೇಲೆ ಹೇಳಿದ ನಿಮ್ಮ ಬರಹದಿಂದ ಒಂದು ಪ್ರಶ್ನೆಯೇಳುತ್ತದೆ: ಗಾಂಧೀಜಿಯೇ ಮೊದಲು ವಿದ್ಯಾರ್ಥಿಗಳನ್ನು ರಾಜಕೀಯ ರಂಗಕ್ಕೆಳೆದುದು ಎಂದು. ಇದು ನಿಜವಲ್ಲವೆಂದು ನನಗೆ ಗೊತ್ತಿದೆ. ಆದರೆ ನಿಮ್ಮ ದೃಷ್ಟಿಕೋನವನ್ನು ದೃಢಪಡಿಸಲು ಪುನಃ ಸ್ಪಷ್ಟಪಡಿಸುವದು ಅಗತ್ಯ.

"ತಿಳಿಯಬೇಕೆಂದರೆ, ವಿದ್ಯಾರ್ಥಿ ಸಂಘಗಳೇನು ಮಾಡಬೇಕು ? ಅವರ ಗುರಿಯೇನಿರಬೇಕು? ಎಂಬುದುಇಂದು ನಿಮಗೆ ತಿಳಿದಿರುವಂತೆ ವಿದ್ಯಾರ್ಥಿ ಸಂಘಗಳನ್ನು ರಾಜಕೀಯ ಜೀವನದ ಸೋಪಾನಗಳೆಂದು ಗಣಿಸಲಾಗಿದೆ. ಕೆಲವರ್‍ು ಅವನ್ನು ಅದಕ್ಕಾಗಿ ದುರುಪಯೋಗ ಮಾಡಿಕೊಳ್ಳುತ್ತಾರೆ."

ಅದಕ್ಕೆ ಗಾಂಧಿಜಿಯೆಂದರು: "ಇದೇ ವಾರದಲ್ಲಿ ಪದವೀಧರರಾಗಲಿರುವವರ ಬುದ್ಧಿಯುಳ್ಳವರು ಹಾನಿಯನ್ನುಂಟು ಮಾಡಬಲ್ಲರೆಂಬುದು ದುರ್ದೈವವಶದಿಂದ ನನ್ನ ಅನುಭವಕ್ಕೆ ಬಂದಿತು. ವಿಶ್ವವಿದ್ಯಾಲಯದ ಉಪಕುಲಪತಿಗಳು ವಿದ್ಯಾರ್ಥಿ ಸಭೆಯೊಂದರಲ್ಲಿ ಭಾಷಣ ಮಾಡಲು ನನ್ನನ್ನು ಆಹ್ವಾನಿಸಿದರು. ಅವರು ಶಾಹೀದಸಾಹೇಬರ ವಿರುದ್ಧ ಒಂದು ಪ್ರದರ್ಶನ ನಡೆಸಿದರೆಂದು ಹೇಳಲು ನಾನು ವಿಷಾದಿಸುತ್ತೇನೆ. ಅನಂತರ ಅವರಿಗೆ ಅರಿವುಂಟಾಗಿ ಪಶ್ಚಾತ್ತಾಪಪಟ್ಟರು. ಅರ್ಧ ಪಕ್ವ ಬುದ್ಧಿಯು ಯುಕ್ತ ಬುದ್ಧಿವಾದ ಹೇಳಿದರೆ ಹೇಗೆ ಸರಿಯಾಗಿ ನಡೆದುಕೊಳ್ಳಬಲ್ಲುದೆಂಬುದನ್ನು ಅವರು ನಿದರ್ಶನಕ್ಕೆ ತಂದು ಕೊಟ್ಟರು. ಈ 'ಹರಿಜನ' ಸಂಚಿಕೆಯಲ್ಲಿಯ ನನ್ನ ಪ್ರಾರ್ಥನೋತ್ತರ ಭಾಷಣಗಳಿಂದ ಅದು ಸ್ಪಷ್ಟವಾಗುತ್ತದೆ.

"ಇಂಗ್ಲೀಷಿನಲ್ಲಿಯ ಮೂಲಕ್ಕೆ 'ಹರಿಜನ ಬಂಧು'ವಿನ ಗುಜರಾಥಿ ಅನುವಾದವು ಚೆನ್ನಾಗಿ ಹೊಂದಿಕೊಂಡಿರುವುದೆಂದು ನಾನು ನಂಬುತ್ತೇನೆ. ಇಂಗ್ಲೀಷಿನಲ್ಲಿರುವುದು ಹಿಂದುಸ್ತಾನಿಯಲ್ಲಿ ನಾನು ಮಾಡಿದ ಭಾಷಣದ ಭಾಷಾಂತರ. ಆದರೆ ಚೆನ್ನಾಗಿ ಸಂಪಾದಿಸಿದ ಹಿಂದುಸ್ತಾನಿಯಲ್ಲಿ ಅಥವಾ ಅಧಿಕೃತ ಇಂಗ್ಲೀಷ ಅನುವಾದದಲ್ಲಿ ಅದನ್ನು ಕೊಡಲಾಗಲಿಲ್ಲ. ಆ ಭಾರವನ್ನು ಯಾರು ಹೊರಬಲ್ಲರು ? ಬೇರೆಯ ಉತ್ತಮ ಕೆಲಸಗಳಲ್ಲಿ ತೊಡಗಿದ ಡಾ. ಸುಶೀಲಾ ನಯ್ಯರ ಹಾಗೂ ಪ್ಯಾರೆಲಾಲಜಿಯವರ ಸಹಾಯ ತೆಗೆದುಕೊಳ್ಳುವುದನ್ನು ನಾನು ಬಿಟ್ಟುಕೊಟ್ಟದ್ದೇನೆ. ಅನೇಕ ತಿಂಗಳುಗಳ ವರೆಗೆ ರಾಜಕುಮಾರಿಯ ಸಹಾಯವು ಸಿಕ್ಕಿದ್ದಿಲ್ಲ. ಈಗಂತೂ ಅವಳು ಮಂತ್ರಿಯಾಗಿಬಿಟ್ಟದ್ದಾಳೆ.

"ಒಂದೇ ಒಂದು ಸುಸಂಬದ್ಧ ವಿದ್ಯಾರ್ಥಿ ಸಂಘವಿದ್ದದ್ದೇ ಆದರೆ ಅದು ... ಸೇವೆಯ ಪ್ರಬಲ ಸಾಧನವಾಗಬಹುದು. ಅದರಗುರಿಯು ಒಂದೇ ಒಂದು ಆಗಬಹುದು:

ಸ್ವಾಭಿಮಾನವಾದ ಹುದ್ದೆಯೊಂದನ್ನು ದೊರಕಿಸುವ ಉದ್ದೇಶವೆಂದೂ ಅಂತಹ ಗುರಿಯೆನಿಸದು; ತಾಯ್ನಾಡಿನ ಸೇವೆಗೆ ಸುಸಜ್ಜಿತರಾಗುವುದೇ ಆ ಗುರಿ. ಅವರು ಹಾಗೆ ಮಾಡಿದರೆ ಅವರ ಜ್ಞಾನವು ಅತ್ಯುಚ್ಚಶಿಖರವನ್ನು ಮುಟ್ಟಬಲ್ಲುದು. ಓದು ಮುಗಿಸಿದವರಿಗೆ ಹೋರಾಟ. ಓದುತ್ತಿರುವಾಗ ವಿದ್ಯಾರ್ಥಿಗಳ ಮುಖ್ಯೋದ್ಯೋಗವೆಂದರೆ ಜ್ಞಾನವೃದ್ಧಿಮಾಡಿಕೊಳ್ಳುವುದು. ಭಾರತದ ನೆರವಿಯ ದೃಷ್ಟಿಯಿಂದ ನೋಡಿದರೆ ಇಂದು ಬಳಕೆಯಲ್ಲಿರುವ ವಿದ್ಯಾಭ್ಯಾಸ ಪದ್ಧತಿಯು ಹಾನಿಕರವಾಗಿದೆ. ದೇಶಕ್ಕೆ ಕೆಲಮಟ್ಟಿಗೆ ಇಂದಿನ ವಿದ್ಯೆ ಉಪಯುಕ್ತವಾಗಿದೆಯೆಂದು ತೋರಿಸಲು ಸಾಧ್ಯವಿದೆ. ಅದನ್ನು ನಾನು ಕ್ಷುಲ್ಲಕವೆಂದು ತಿಳಿಯುತ್ತೇನೆ. ಅದರಿಂದ ಯಾರೂ ಮೋಸಹೋಗಬಾರದು. ಅದರ ಉಪಯುಕ್ತತೆಗೆ ಇದು ನಿಕಷ: ಆಹಾರ ವಸ್ತ್ರಗಳ ಉತ್ಪಾದನೆಗೆ ಅದು ಪರಿಣಾಮಕಾರಿಯಾಗಿ ಮಾಡಬೇಕಾದ ಯಾವ ಸಹಾಯ ಮಾಡುತ್ತಿದೆ? ಇಂದಿನ ಬುದ್ಧಿಹೀನವಾದ ಕೊಲೆಗಡಿಕತನವನ್ನು ಕಡಿಮೆ ಮಾಡುವುದರಲ್ಲಿ ವಿದ್ಯಾರ್ಥಿ ಪ್ರಪಂಚವು ಯಾವ ಪಾತ್ರವನ್ನು ವಹಿಸಿದೆ? ಎಲ್ಲಿ ಕೊಡಲಾಗುತ್ತಿರುವುದೋ ಆ ದೇಶದ ಪ್ರಗತಿಯನ್ನು ಪ್ರದರ್ಶನೀಯವಾಗಿ ಸರ್ವ ವಿದ್ಯೆಯೂ ಸಾಧಿಸಬೇಕಾಗಿದೆ. ಆ ಉದ್ದೇಶವನ್ನು ಭಾರತದಲ್ಲಿಯ ವಿದ್ಯಾಭ್ಯಾಸ ಪದ್ಧತಿಯುಸಾಧಿಸಿಲ್ಲವೆಂಬುದನ್ನು ಯಾರು ಅಲ್ಲಗಳೆಯುವರು? ಅದುದರಿಂದ ಸಂಘದ ಒಂದು ಉದ್ದೇಶವೆಂದರೆ ಇಂದಿನ ವಿದ್ಯಾಭ್ಯಾಸ ಪದ್ಧತಿಯಲ್ಲಿಯ ದೋಷಗಳನ್ನು ಕಂಡು ಹಿಡಿಯುವುದು ಮತ್ತು ಅವುಗಳನ್ನು ಯಥಾಶಕ್ತಿ ತಮ್ಮಿಂದ ತೆಗೆದು ಹಾಕಲು ಪ್ರಯತ್ನಿಸುವುದು. ತಮ್ಮ ಸರಿಯಾದ ನಡತೆಯಿಂದ ಅವರು ವಿದ್ಯಾಶಾಖೆಯಲ್ಲಿಯ ಮುಖ್ಯಾಧಿಕಾರಿಗಳೂ ತಮ್ಮಂತೆಯೇ ಅಭಿಪ್ರಾಯಪಡುವಂತೆ ಮಾಡಬಲ್ಲರು. ಹಾಗೆ ಮಾಡಿದರೆ ಅವರೆಂದೂ ಪಕ್ಷೀಯ ರಾಜಕಾರಣದ ಗೊಂದಲದಲ್ಲಿ ಸಿಕ್ಕಿಬೀಳುವುದಿಲ್ಲ. ಪುನರ್ವಿಮರ್ಶಿಸಿ ತಯಾರಿಸಿದ ಯೋಜನೆಯಲ್ಲಿ ರಚನಾತ್ಮಕ ಹಾಗೂ ನಿರ್ಮಾಪಕ ಕಾರ್ಯಕ್ರಮವೇ ಸ್ವಾಭಾವಿಕವಾಗಿ ತನಗೆ ತಕ್ಕ ಸ್ಥಾನವನ್ನು ಹೊಂದುವುದು.

"ಈಗ ಮೊದಲ ಪ್ರಶ್ನೆಯ ಬಗ್ಗೆ ಹೇಳಬೇಕಾಗಿದೆ; ದೇಶದ ಸ್ವಾತಂತ್ರ್ಯ ಸಮರದ ಕಾಲದಲ್ಲಿ ವಿದ್ಯಾರ್ಥಿಯ ವಿದ್ಯೆಯ ಬಗ್ಗೆ ನಾನು ಏನು ಹೇಳಿದೆನೋ ಅದನ್ನು ಮರೆತುದು ಸ್ಪಷ್ಟವಾಗಿ ತೋರುತ್ತದೆ. ಶಾಲೆ ಕಾಲೇಜುಗಳಲ್ಲಿರುವಾಗ ವಿದ್ಯಾರ್ಥಿಗಳು ರಾಜಕೀಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು ನಾನು ಆಮಂತ್ರಿಸಲಿಲ್ಲ. ಆ ಹಿಂಸಾತ್ಮಕ ಅಸಹಕಾರವನ್ನು ಅಭ್ಯಾಸ ಮಾಡಿಕೊಂಡಿದ್ದೆ. ನಾನು ಅವರು ಈ ವಿದ್ಯಾಸಂಸ್ಥೆಗಳನ್ನು ಖಾಲಿ ಮಾಡಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಬೇಕೆಂದುಸಲಹೆ ಕೊಟ್ಟಿದ್ದೆ. ರಾಷ್ಟ್ರೀಯ ವಿಶ್ವವಿದ್ಯಾಲಯ ರಾಷ್ಟ್ರೀಯ ಶಾಲೆ ಕಾಲೇಜುಗಳಿಗೆ ನಾನು ಪ್ರೋತ್ಸಾಹವಿತ್ತಿದ್ದೆ. ದುರ್ದೈವದಿಂದ ನಮ್ಮ ಶಾಲೆ ಕಾಲೇಜುಗಳಲ್ಲಿ ಕೊಡಲಾಗುತ್ತಿದ್ದ ವಿದ್ಯಾಪಂಜರವು ವಿದ್ಯಾರ್ಥಿಗಳಿಗೆ ಅಭೇದ್ಯವೆನಿಸಿತ್ತು. ಕೇವಲ ಸ್ವಲ್ಪ ವಿದ್ಯಾರ್ಥಿಗಳು ಅದನ್ನು ಬಿಟ್ಟುಬರಲು ಶಕ್ತರಾದರು. ಹೀಗೆ ದೇಶದ ರಾಜಕೀಯ ಕಾರ್ಯಗಳಿಗೆ ವಿದ್ಯಾರ್ಥಿಗಳನ್ನು ನಾನು ಎಳೆದೆನೆಂದು ಹೇಳುವುದು ತಪ್ಪು. ಅಷ್ಟಲ್ಲದೆ, ದಕ್ಷಿಣ ಆಫ್ರಿಕದ ೨೦ ವರ್ಷದಲ್ಲಿಯ ದೇಶಾಂತರವಾಸ ಕಳೆದ ಬಳಿಕ ನಾನು ೧೯೧೫ ರಲ್ಲಿ ಹಿಂದುಸ್ತಾನಕ್ಕೆ ಬಂದೆನು; ಅಷ್ಟರೊಳಗೆ ಓದುತ್ತಿದ್ದ ವಿದ್ಯಾರ್ಥಿಗಳನ್ನು ರಾಜಕೀಯ ಜೀವನಕ್ಕೆಎಳೆಯಲಾಗಿತ್ತು. ಬಹುಶಃ ಆಗ ಬೇರೊಂದು ಮಾರ್ಗವಿಲ್ಲದಾಗಿರಬೇಕು. ದಾಸ್ಯದಿಂದ ನಮ್ಮ ದೇಶವನ್ನು ಮುಕ್ತಗೊಳಿಸಲು ಯುಕ್ತವಾದ ರಾಜಕೀಯ ಕಾರ್ಯದಲ್ಲಿ ಯಾರೂ ಮಗ್ನರಾಗದಂತೆ ನಮ್ಮ ದೇಶದ ಇಡಿಯ ಜೀವನವನ್ನೇ ನಮ್ಮ ಪರಕೀಯ ಆಳರಸರು ಮಾರ್ಪಡಿಸಿದ್ದರು. ನಮ್ಮ ಪರದೇಶದ ಶಾಸನ ಕರ್ತರು ಲಕ್ಷಗಟ್ಟಲೆ ವಿದ್ಯಾರ್ಥಿಗಳು ಅಜ್ಞಾನದಲ್ಲೇ ಉಳಿವಂತೆ ಹಾಗೂ ತಮ್ಮ ಅಂಕೆಯಲ್ಲಿ ಉಳಿವಂತೆ ತಮ್ಮ ವಿದ್ಯಾಭ್ಯಾಸವನ್ನು ನಿಯಂತ್ರಿಸಿ ಯೋಜಿಸಿದ್ದರು. ಪರರ ನಿಯಂತ್ರಣವು ಅದಷ್ಟು ಸ್ಥಾಯಿಯಾಗಿ ನಿಲ್ಲುವಂತೆ ಮಾಡಿದ ಮಾರ್ಗವೇ ಇದಾಗಿತ್ತು. ಆದುದರಿಂದ ಪರಕೀಯ ಶಾಸಕರ ಅಂಕೆಗೊಳಪಟ್ಟ ಶಾಲೆಕಾಲೇಜುಗಳಲ್ಲಲ್ಲದೆ ಬೇರೆಡೆ ಎಲ್ಲೂ ದೇಶಭಕ್ತರಾದ ಕೆಲಸಗಾರರು ಸಿಕ್ಕಲಿಲ್ಲ. ಎಷ್ಟರ ಮಟ್ಟಿಗೆ ಈ ಪರದೇಶೀ ವಿದ್ಯಾಭ್ಯಾಸವನ್ನು ದುರುಪಯೋಗಮಾಡಿಕೊಳ್ಳಲಾಯಿತೆಂಬುದನ್ನು ಇಲ್ಲಿ ವಿಚಾರಿಸುವ ಅಗತ್ಯವಿಲ್ಲ.

—ಮೋ. ಕ. ಗಾಂಧಿ

(ಗುಜರಾಥಿಯ ಮೂಲದಿಂದ)

ಕಲಕತ್ತ, ೩೦—೮—೪೭

## ಸ್ವತಂತ್ರ ಹಿಂದುಸ್ತಾನದಲ್ಲಿ ನಯೀ ತಾಲೀಮು

ಅನೇಕ ವರ್ಷಗಳಿಂದ ನಡೆದ ಹೋರಾಟದ ಫಲವಾಗಿ ಪರದಾಸ್ಯದಿಂದ ಬಿಡುಗಡೆಯಾಗಿ ಸ್ವಾತಂತ್ರ್ಯವು ಆಗಸ್ಟ ೧೫ ನೇ ದಿನ ದೊರೆಯುವದೆಂದು ಇಡೀ ರಾಷ್ಟ್ರವೇ ಆ ಶುಭ ದಿನದ ಆಗಮನವನ್ನು ಒಳ್ಳೇ ಉತ್ಸಾಹದಿಂದ ನಿರೀಕ್ಷಿಸುತ್ತಿತ್ತು. ಸಾರ್ವತ್ರಿಕ ಸಂತೋಷ ಪ್ರದರ್ಶನವು ಪ್ರಚಂಡ ಬಿರುಗಾಳಿಯಂತೆ ದೇಶದಾದ್ಯಂತ ವಡೆದುದು ನೋಡಿ ಮುಖಂಡರಿಗೂ ಆಚ್ಚರಿಯಾಗದಿರಲಿಲ್ಲ. ವಿದೇಶೀಯರ ಪ್ರಭುತ್ವ ಕೊನೆಗಂಡು ಸ್ವಾತಂತ್ರ್ಯ ಪ್ರಾಪ್ತಿಯ ಭಾವನೆಯಿಂದ ಜನತೆಯಲ್ಲಿ ಹೊಸ ಉತ್ಸಾಹ, ಹಾಗೂ ಶಕ್ತಿಯ ಸಂಚಾರವಾಗಿದೆ. ಈ ಉತ್ಸಾಹಪೂರಿತ ಶಕ್ತಿಯನ್ನು ಅಮರವಾದ ರಾಷ್ಟ್ರೀಯ ಜೀವನದಲ್ಲಿ ಉದಾತ್ತವಾದ ಎಲ್ಲ ಧ್ಯೇಯೋದ್ದೇಶ ಸಾಧಿಸಲು ಪುನರುದ್ಧಾರಕ್ಕೆ ಅಗತ್ಯವಾದ ವಿಧಾಯಕ ಕಾರ್ಯದಲ್ಲಿ ಕೂಡಲೇ ಉಪಯೋಗಿಸುವ ಯೋಜನೆಗಳನ್ನು ಮಾಡಬೇಕಾಗಿದೆ. ಸುದೈವದಿಂದ ಗಾಂಧೀಜಿಯವರು ರಾಷ್ಟ್ರ ಪುನರ್ರಚನೆಯ ಕಾರ್ಯಕ್ಕೆ ರಚನಾತ್ಮಕ ಕಾರ್ಯಕ್ರಮವನ್ನು ಕೊಟ್ಟಿದ್ದಾರೆ. ಈಗಾಗಲೇ ಅವರು ಹಾಕಿಕೊಟ್ಟ ರಚನಾತ್ಮಕ ಕಾರ್ಯಪದ್ಧತಿಯನ್ನು ಅನೇಕ ಸಂಘ ಸಂಸ್ಥೆಗಳು ಕೈಕೊಂಡು ಕಾರ್ಯ ಮುಂಬರಿಸಿವೆ. ಈ ಸಂಘಸಂಸ್ಥೆಗಳಿಗೆ ಈ ಕಾರ್ಯದಲ್ಲಿ ಹೆಚ್ಚು ಕಡಿಮೆ ಯಶಸ್ಸೂ ದೊರೆಕಿದೆ.

ರಾಷ್ಟ್ರ ನಿರ್ಮಾಣಯೋಜನೆಯಲ್ಲಿ ೬ ರಿಂದ ೧೪ ವಯಸ್ಸಿನ ಬಾಲಕರಿಗೆ ಒತ್ತಾಯದಿಂದ ಪುಕ್ಕಟೆಯಾಗಿ ಶಿಕ್ಷಣ ಕೊಡುವ ಯೋಜನೆಗೆ ವಿಶೇಷವಾಗಿ ಅಗ್ರಸ್ಥಾನಕೊಟ್ಟು ಮೊದಲು ಕೈಕೊಳ್ಳುವಂತಹದು. ಸ್ವಾತಂತ್ರ್ಯ, ಸೇವಾಬುದ್ಧಿ, ತ್ಯಾಗ ಈ ಭಾವನೆಗಳು ವಿಕಾಸವಾಗುವಂತೆ ಶಿಕ್ಷಣ ಕೊಡುವ ಗುರಿಯನ್ನಿಟ್ಟುಕೊಂಡ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುವ ಶ್ಲಾಘನೀಯ ಪ್ರಯತ್ನಗಳು ಈಗಾಗಲೇ ನಡೆದಿವೆ. ದಾರಿದ್ರ್ಯ ದುಃಖದಿಂದ ಬಳಲುತ್ತಿರುವ ಹಳ್ಳಿಗರ ಸೇವೆಯಲ್ಲಿ ನಿರತವಾದ ಸ್ವತಂತ್ರ ವೃತ್ತಿಯ ಮಹಾನುಭಾವರು ನಡೆಸಿದ ಈ ಪ್ರಯತ್ನಗಳಿಗೆ ಹೇಳಿಕೊಳ್ಳುವಂತಹ ಯಶಪ್ರಾಪ್ತಿಯಾಗಿಲ್ಲ. ಇದಕ್ಕೆ ಮುಖ್ಯ ಕಾರಣವು ನಮ್ಮ ರಾಷ್ಟ್ರವು ಇನ್ನೂ ದಾಸ ರಾಷ್ಟ್ರವಾಗಿದ್ದುದೇ ಆಗಿರುವದು.

ಮುಖ್ಯವಾಗಿ ಸಾಮಾಜಿಕ ಪ್ರವೃತ್ತಿಯಿಂದ ಶಿಕ್ಷಣವು ರೂಪುಗೊಳ್ಳುವದು. ತನ್ನ ರಾಜಕೀಯ, ಆರ್ಥಿಕ, ಸಾಮಾಜಿಕ ಧೋರಣವನ್ನು ನಿರ್ಧರಿಸಲು ಸ್ವಾತಂತ್ರ್ಯವುಳ್ಳ ಸಮಾಜವು ಮಾತ್ರ ಸ್ವಾತಂತ್ರ್ಯ, ಸೇವೆ, ತ್ಯಾಗ, ಈ ಉದಾತ್ತ ಭಾವನೆಗಳನ್ನು ಒಳ್ಳೆಯ ಶಿಕ್ಷಣ ಕೊಟ್ಟು ಜಾಗೃತಗೊಳಿಸಬಲ್ಲದು.

ಇಂದು ನಾವು ಇಂಥ ಹೊಸ ಮನ್ವಂತರದ ಹೊಸ್ತಿಲಲ್ಲಿ ಕಾಲಿಟ್ಟದ್ದೇವೆ. ರಾಷ್ಟ್ರದ ಶಿಕ್ಷಣ ಕ್ಷೇತ್ರದಲ್ಲಿ ಹೊಸ ದೃಷ್ಟಿ, ಹೊಸ ಸ್ಫೂರ್ತಿ ಸೇರಿ ಹೊಸ ಜೀವಕಳೆಯನ್ನು ತುಂಬಬಹುದೆಂದು ಆಶಾಭರಿತರಾಗಲು ಮಾರ್ಗವಾಗಿದೆ. ಅಗತ್ಯವಾದ ಮತ್ತು ಸುಲಭಸಾಧ್ಯವಲ್ಲದ ಹೊಸ ದೃಷ್ಟಿಯು ಶಿಕ್ಷಣ ಕೊಡುವ ಕಾರ್ಯಕ್ಕೆ ತರಬೇಕು ಹೊಂದಿದ ಕಾರ್ಯಕರ್ತರು ತಮ್ಮ ಜೀವನವನ್ನೇ ಮೀಸಲಾಗಿಡಬೇಕು.

೧೦ ವರ್ಷಗಳ ಹಿಂದೆ ದೂರ ದೃಷ್ಟಿಯಿಂದ ಗಾಂಧೀಜಿಯವರು ಸ್ವತಂತ್ರ ರಾಷ್ಟ್ರದ ಆಸೆ ಆಕಾಂಕ್ಷೆಗಳನ್ನು ಪೂರೈಸಲು ಸಮರ್ಥವಾದ ಶಿಕ್ಷಣ ಪದ್ಧತಿಯ ಯೋಜನೆಯನ್ನು ರಾಷ್ಟ್ರದ ಮುಂದೆ ಇಟ್ಟರು. ಈ ಶಿಕ್ಷಣ ಪದ್ಧತಿಯನ್ನು 'ನಯೀ ತಾಲೀಮು' ಎಂದು ಗಾಂಧೀಜಿಯವರೇ ನಾಮಕರಣ ಮಾಡಿದ್ದಾರೆ. ಈ ಶಿಕ್ಷಣ ಪದ್ಧತಿಯ ಒಂದೇ ಒಂದು ಭಾಗವನ್ನೇ ವಿಚಾರಿಸುವಾ 'ನಯೀ ತಾಲೀಮು'ವು. ಸಫಾಯಿ' ಅಂದರೆ ತನ್ನ ದೈಹಿಕ ಮತ್ತು ಸಾಮಾಜಿಕ ಸ್ವಚ್ಛತೆಯಿಂದಲೇ ಪ್ರಾರಂಭವಾಗುವದು.

ಊರಲ್ಲಿ ಎಷ್ಟೋ ವರ್ಷಗಳಿಂದ ಬಿದ್ದ ಕಸ, ಕಚರಾ, ಹೊಲಸು ಕಿತ್ತುಹಾಕಿ ಗ್ರಾಮ ಸ್ವಚ್ಛತೆಯ ಕಾರ್ಯಕ್ರಮ ಕೈಕೊಳ್ಳಲು ಸೇವಾಗ್ರಾಮದ ಸುತ್ತಮುತ್ತಲಿನ ಹಳ್ಳಿಗಳಲ್ಲಿಯ ಎಲ್ಲ ಜನರು ಮುಂದೆ ಬಂದು ಸಂಘಟಿತ ಪ್ರಯತ್ನ ನಡೆಸಿದ್ದಾರೆ. ಇಂಥ ದೈಹಿಕ ಶ್ರಮದ ಕಾರ್ಯವನ್ನು ಮಾಡಲು ದೇವರು ಭಂಗೀ ಹಾಗೂ ಕಸಗುಡಿಸುವವರೆಂಬ ಕೀಳ್ತರಗತಿಯ ಜನರನ್ನು ನಿರ್ಮಾಣ ಮಾಡಿದ್ದಾನೆಂದೂ, ಇಂಥ ಕೆಲಸ ಮಾಡುವದು ಮರ್ಯಾದೆಗೆ ಕಲಂಕ ತರುವದೆಂದೂ ಜನರು ಭಾವಿಸುತ್ತಿದ್ದರು. ಆದರೆ ಸ್ವಾತಂತ್ರ್ಯ ಪ್ರಾಪ್ತಿಯಾದ ನಂತರ ಈ ಬಗೆಯ ಕೆಲಸ ಮಾಡುವದು ಕೀಳ್ತನವಲ್ಲವೆಂದೂ ಇದರಿಂದ ಮರ್ಯಾದೆಗೇನೂ ಭಂಗಬಾರದೆಂಬ ಭಾವನೆ ಜನರಲ್ಲಿ ಉಂಟಾಗಿದೆ. ಸ್ವಚ್ಛತೆ ಹಾಗೂ ಸಮಾಜ ಸ್ವಾಸ್ಥ್ಯಕ್ಕಾಗಿ ಎಲ್ಲರೂ ದುಡಿಯಬೇಕೆಂಬ ಭಾವನೆ ಬೆಳಗಾಗುವದರೊಳಗಾಗಿ ಜನರ ಮನಸ್ಸಿನಲ್ಲಿ ಮೂಡಿದ್ದು ನೋಡಿದರೆ ಸ್ವಾತಂತ್ರ್ಯ ಪ್ರಾಪ್ತಿಯಾದೊಡನೆ ಜನರಲ್ಲಿ ಹೊಸ ಸ್ಫೂರ್ತಿ ಬಂದುದು, ಸಮಾಜದ ಬಗ್ಗೆ ತನ್ನ ಕರ್ತವ್ಯಗಳೂ ಉಂಟೆಂಬ ಭಾವನೆ ಒಡಮೂಡಿದುದೂ ಗೊತ್ತಾಗದಿರದು. ಈಗ ಜನರಲ್ಲಿ ಹುಟ್ಟಿದ ಈ ಭಾವನೆಗಳನ್ನು ರಾಷ್ಟ್ರದಾದ್ಯಂತ ನಯೀ ತಾಲೀಮು ಪ್ರಸಾರಕ್ಕೆ ಉಪಯೋಗಿಸಲು ತಕ್ಕ ಯೋಜನೆ ಬೇಕು. ಜನರ ಜೀವನವು ಮನುಷ್ಯ ಮಾತ್ರರನ್ನು ವವರನ್ನು ಮರ್ಯಾದೆಗೆ ಕಲಂಕತರುವಂತಹ ಕೀಳ್ತರಗತಿಗೆ ಇಳಿದುದನ್ನು ಸುಧಾರಿಸಿ, ರಾಷ್ಟ್ರದ ಅನೇಕ ಅಗತ್ಯದ ಬೇಡಿಕೆಗಳನ್ನು ಪೂರೈಸಬಹುದಾದ ಈ ನಯಿತಾಲೀಮು ಶಿಕ್ಷಣ ಪ್ರಸಾರಕ್ಕಾಗಿ ಪ್ರಾಂತಿಕ ಸರಕಾರಗಳು ದೇಶದಾದ್ಯಂತ ಪ್ರಬಲವಾದ ಪ್ರಚಾರ ಕಾರ್ಯ ಕೈಕೊಳ್ಳಬಹುದೆಂದು ನಾವು ಆಶಿಸುತ್ತೇವೆ.

## ಮಾಯೆಯೋ ಆಕಸ್ಮಿಕ ಘಟನೆಯೋ ?

ಶಾಹೀದಸಾಹೇಬ ಸುಹ್ರವರ್ದಿಯವರೂ ನಾನೂ ಬೇಲಿಯಾಘಾಟದ ಒಂದು ಮುಸಲ್ಮಾನರ ಮನೆಯಲ್ಲಿ ಒಟ್ಟಿಗಿದ್ದೇವೆ. ಇಲ್ಲಿ ದಂಗೆಯಿಂದ ಮುಸಲ್ಮಾನರಿಗೆ ಬಹಳ ನಷ್ಟವಾಗಿದೆಯೆಂದು ಹೇಳಲಾಗಿದೆ. ನಾವು ಆಗಸ್ಟ ೧೩ ರಲ್ಲಿ ಈ ಮನೆಗೆ ಬಂದೆವು ಮತ್ತು ೧೪ ರಲ್ಲಿ ನೋಡಿದರೆ ಇಲ್ಲಿಯ ಹಿಂದು ಮುಸಲ್ಮಾನರಲ್ಲಿ ಎಂದೂ ವೈರವಿದ್ದಿಲ್ಲವೆಂಬಂತೆ ತೋರಿತು. ಸಾವಿರಗಟ್ಟಲೆಯಾಗಿ ಅವರು ಒಬ್ಬರನ್ನೊಬ್ಬರು ಆಲಿಂಗಿಸತೊಡಗಿದರು ಮತ್ತು ಒಂದಲ್ಲ ಒಂದು ಪಕ್ಷದವರಿಂದ ಅಪಾಯ ಸ್ಥಳಗಳೆಂದು ತಿಳಿಯಲ್ಪಟ್ಟಿದ್ದ ಪ್ರದೇಶಗಳಲ್ಲಿ ಅವರು ನಿರಾತಂಕವಾಗಿ ತಿರುಗಾಡಲಾರಂಭಿಸಿದರು. ನಿಜವಾಗಿಯೂ ಹಿಂದು ಮುಸಲ್ಮಾನ ಸಹೋದರರನ್ನು ದೇವಾಲಯದೊಳಗೂ ಮುಸಲಮಾನನು ಹಿಂದು ಸಹೋದರನನ್ನು ಮಸೀದೆಯೊಳಗೂ ಕರೆದೊಯ್ದನು. ಇಬ್ಬರೂ ಏಕಕಾಲದಲ್ಲಿ 'ಜಯಹಿಂದ್' ಮತ್ತು 'ಹಿಂದು ಮುಸಲ್ಮಾನರು ಒಂದಾಗಲಿ' ಎಂಬ ಕೂಗು ಕೊಟ್ಟರು. ನಾನು ಮೇಲೆ ಹೇಳಿದಂತೆ ನಾವು ಒಬ್ಬ ಮುಸಲಮಾನನ ಮನೆಯೊಳಗೆ ಉಳಿದುಕೊಂಡಿದ್ದೇವೆ ಮತ್ತು ಮುಸಲ್ಮಾನ ಸೇವಕ ಸೇವಿಕೆಯರು ನಮ್ಮ ಅನುಕೂಲವನ್ನು ಅತ್ಯಂತಲಕ್ಷ್ಯಪೂರ್ವಕವಾಗಿ ನೋಡಿಕೊಳ್ಳುತ್ತಿದ್ದಾರೆ. ಮುಸಲ್ಮಾನ ಸ್ವಯಂಸೇವಕರು ನಮಗಾಗಿ ಅಡಿಗೆ ಮಾಡುತ್ತಾರೆ. ಖಾದಿ ಪ್ರತಿಷ್ಠಾನದಿಂದ ಬಹಳ ಜನರು ನನ್ನ ಸೇವೆಮಾಡಲು ಬರುತ್ತೇವೆಂದರು, ಆದರೆ ನಾನು ಅವರನ್ನು ಬೇಡವೆಂದು ತಡೆದನು. ಮುಸಲಮಾನ ಸಹೋದರ ಸಹೋದರಿಯರು ಎಷ್ಟರ ಮಟ್ಟಿಗೆ ನಮ್ಮ ಪ್ರಾರ್ಥನಾ ಪ್ರವರ್ತನಕ್ಕೆ ಅನುಕೂಲ ಮಾಡಿಕೊಡುವರೋ ಅಷ್ಟರಿಂದಲೇ ತೃಪ್ತನಾಗಬೇಕೆಂದು ನಾನು ಪ್ರತಿಜ್ಞೆ ತೆಗೆದುಕೊಂಡಿದ್ದೇನೆ.

—[illegible]

# ಗಾಂಧೀಜಿಯ ಭಾಷಣಗಳ ಸಾರ

## ಡಾ. ರೇ

"ಈ ಸಮಯದಲ್ಲಿ ನಾನು ಡಾ. ಪಿ. ಸಿ. ರೇ ಅವರನ್ನು ಸ್ಮರಿಸದಿರಲಾರೆ. ೧೯೧೧ರಲ್ಲಿ ನಾನು ಅವರೊಂದಿಗೆ ಒಂದು ತಿಂಗಳು ಇದ್ದೆ" ಎಂದು ಗಾಂಧೀಜಿಯವರು ತಮಗೆ ಮಾನಪತ್ರವನ್ನಿತ್ತು ಸತ್ಕರಿಸಿದ ಕಲಕತ್ತೆ ಕಾರ್ಪೊರೇಶನದವರನ್ನು ಅಭಿನಂದಿಸುತ್ತ ಹೇಳಿದರು. ಅವರು ದಿ. ದೇಶಬಂಧುರವರೊಡನೆ ಇದ್ದಾಗ ಕೆಲವು ವಿಜ್ಞಾನಿ ಸ್ನೇಹಿತರನ್ನು ಕರೆದುಕೊಂಡು ಹೋಗಿ ಅವರನ್ನು ಭೆಟ್ಟಿಯಾಗುತ್ತಿದ್ದರು. ಸ್ಮಾರಕ ಮಂದಿರದ ನೆಳಲಿನಲ್ಲಿ ಸೇರಿದ ಈ ಸ್ನೇಹಿತರಲ್ಲಿ ಕೇವಲ ವೈಜ್ಞಾನಿಕವಾದರೂ ಬೋಧಪ್ರದ ಚರ್ಚೆ ಸಾಗುತ್ತಿತ್ತು. ಅದೇ ಅವರ ಮನೋರಂಜನೆಯಾಗಿತ್ತು. ಗಾಂಧೀಜಿಯವರೊಮ್ಮೆ "ಏನಾದರೂ ವಾದ್ಯಮೇಳಗಳಿವೆಯೆ? ಎಂದು ದಿ. ದೇಶಬಂಧುರನ್ನು ಕೇಳಿದರು. ಇಲ್ಲ "ಸೋಮಾರಿಗಳ ಹರಟೆಗಿಂತ ಬೇರೆಯಾದ ನಮ್ಮ ಬೋಧಪ್ರದ ಚರ್ಚೆಯೆ ನಮ್ಮ ಅನ್ನ" ಎಂದು ಅವರು ಸ್ಪಷ್ಟವಾಗಿ ನುಡಿದರು.

## ಕಾರ್ಪೊರೇಶನದ ಮಾನಪತ್ರ

ಕಾರ್ಪೊರೇಶನದವರು ತಮಗೆ ಅರ್ಪಿಸಿದ ಮೂರನೆಯ ಮಾನಪತ್ರವಿದು. ದೇಶಬಂಧು ದಾಸರು ಮೇಯರರಿದ್ದಾಗ ತಮಗೆ ಮೊದಲನೆ ಮಾನಪತ್ರ ಸಲ್ಲಿಸಿದರು. ಬಳಿಕ ನಲಿನಿ ಬಾಬುಗಳು ಮೇಯರರಾಗಿದ್ದ ಎರಡನೆ ಮಾನಪತ್ರ ಸಂದಿತು. ಆ ಕರಂಡಕಗಳನ್ನು ಹರಿಜನರ ಹಿತಕ್ಕಾಗಿ ಆಗ ಲಿಲಾವು ಮಾಡಲಾಯಿತು. ಈ ಸಲದ ಕರಂಡಕವನ್ನೂ ಮೇಯರರು ಅದೇ ಕಾರಣಕ್ಕಾಗಿ ಲಿಲಾವು ಮಾಡುವರೆಂದು ತಾವು ಆಶಿಸಿರುವದಾಗಿ ಗಾಂಧೀಜಿ ಹೇಳಿದರು.

## ಸೌಮ್ಯ ಬುದ್ಧಿವಾದ

"ನೈರ್ಮಲ್ಯದ ದೃಷ್ಟಿಯಿಂದ ಕಲಕತ್ತೆಯು ಜಗತ್ತಿನಲ್ಲಿ ಪ್ರಮುಖ ನಗರವಾಗುವ ವರೆಗೆ ನನಗೆ ಸಮಾಧಾನವಾಗುವದಿಲ್ಲೆಂದು ನಾನು ಮೊದಲನೇ ಮಾನಪತ್ರಕ್ಕೆ ಕೊಟ್ಟ ಉತ್ತರವನ್ನೇ ಈಗಲಾದರೂ ಪುನರುಚ್ಚರಿಸುತ್ತೇನೆ. ಕಲಕತ್ತೆಯ ಬೀದಿಗಳಲ್ಲಿ ಕಂಡುಬರದ ನೈರ್ಮಲ್ಯವನ್ನು ಕುರಿತು ನಾನು ಹೇಳುತ್ತಿದ್ದೇನೆ. ಇಲ್ಲಿಯ ನಾಗರಿಕರ ಸುದೃಢ ಕಾಯದಲ್ಲಿ ಸುದೃಢ ಮನಸ್ಸು ಉಳಿದರೆ ಪುಂಡರು, ಕುಡುಕರು ಮುಂತಾದವರು ಹೇಳಹೆಸರಿಲ್ಲದಂತಾಗುತ್ತಾರೆ. ಕಲಕತ್ತೆಯಲ್ಲಿ ಮರಣದ ಸಂಖ್ಯೆಯನ್ನು ಕಡಿಮೆ ಮಾಡಿದರೆ ಹಾಲಿನ ಹೊಳೆ ಹರಿದೀತು ಇಂದು ಈ ಸಂಗತಿ ದುಸ್ಸಾಧ್ಯವಾಗಿದೆ. ಶಾಹೀದಸಾಹೇಬರು ಸೂಚಿಸಿದಂತೆ ಕಾರ್ಪೊರೇಶನದ ಸದಸ್ಯರು ಹಿಂದು ಮುಸ್ಲಿಮರಲ್ಲಿ ಸೌಹಾರ್ದವನ್ನು ಶಾಶ್ವತವಾಗಿ ಸ್ಥಾಪಿಸಲು ಪ್ರಯತ್ನಿಸುವರೆಂದು ನಾನು ಆಶಿಸಿದ್ದೇನೆ"ದು ಗಾಂಧೀಜಿಯವರು ಮಾನಪತ್ರಕ್ಕೆ ಉತ್ತರಿಸಿದರು.

## ಚಿತಗಾಂಗ

ಬ್ರಹ್ಮದೇಶದಿಂದ ಬರುವ ಅಕ್ಕಿಯಲ್ಲಿ ಕನಿಷ್ಠ ೫೦೦ ಟನ್ ಅಕ್ಕಿಯನ್ನಾದರೂ ತಮಗೆ ಕೊಡಿಸಬೇಕು ಎಂದು ಖ್ವಾಜಾ ನಾಜೀಮುದ್ದೀನರು ತಮ್ಮನ್ನು ಕೇಳಿಕೊಂಡಿದ್ದಾರೆಂದು ತಿಳಿಸಿದರು. ಅಕ್ಕಿ ಹೇರಿಕೊಂಡು ಬರುವ ಹಡಗವನ್ನು ಚಿತಗಾಂಗಕ್ಕೆ ತಿರುಗಿಸಿ ೫೦೦ ಟನ್ ಅಕ್ಕಿಯನ್ನು ಅಲ್ಲಿಳಿಸಬೇಕು ಎನ್ನುವಷ್ಟರಮಟ್ಟಿಗೆ ಅಲ್ಲಿ ಅಕ್ಕಿಯ ಕೊರತೆಯಾಗಿದೆ. ಈ ಬಿನ್ನಹವನ್ನು ತಾವು ಸಂತೋಷದಿಂದ ಆದರಿಸಿ, ಸಾಧ್ಯವಿದ್ದಲ್ಲಿ ಡಾ. ರಾಜೇಂದ್ರ ಪ್ರಸಾದರು ಅಮೂಲ್ಯವಾದ ಈ ೫೦೦ ಟನ್ ಅಕ್ಕಿಯನ್ನು ಚಿತಗಾಂಗಕ್ಕೆ ನೀಡಲು ಪ್ರಯತ್ನಿಸುವರೆಂದು ತಾವು ಆಶಿಸಿದ್ದಾಗಿ ಹೇಳಿದರು.

ಪರಿಹಾರ ಕಾರ್ಯದಲ್ಲಿ ತೊಡಗಿದ್ದ ಚಿಕ್ಕಪುಟ್ಟ ಅಧಿಕಾರಿಗಳು ನೆರೆಹಾವಳಿಗೀಡಾದ ಮುಸ್ಲಿಂ ನಿರಾಶ್ರಿತರಿಗಷ್ಟೇ ಧಾನ್ಯವನ್ನು ಹಂಚಿದರು ಎಂಬ ದೂರನ್ನು ಇಲ್ಲಿ ಹೇಳದಿರಲಾರೆ. ಈ ಸುದ್ದಿ ನಿಜವಿಲ್ಲೆಂದು ತಾವು ಭಾವಿಸಿರುವದಾಗಿಯೂ ಒಂದು ವೇಳೆ ದುರ್ದೈವದಿಂದ ಈ ಸಂಗತಿ ನಿಜವಿದ್ದರೂ ಮಂತ್ರಿಗಳೂ ಉಚ್ಚ ದರ್ಜೆಯ ಅಧಿಕಾರಿಗಳೂ ಈ ತೊಂದರೆಯನ್ನು ಸರಿಪಡಿಸುವರೆಂಬಲ್ಲಿ ತಮಗೆ ಸಂದೇಹವಿಲ್ಲೆಂದೂ ಗಾಂಧೀಜಿಯವರೂ ಹೇಳಿದರು. ಎರಡೂ ಜನಾಂಗಗಳು ವಿಶ್ವಾಸದಿಂದ ಸ್ನೇಹಿತರಂತೆ ಬಾಳಿದರೆ ಜಾತೀಯ ಭಾವನೆ ಸಂಪೂರ್ಣವಾಗಿ ನಷ್ಟವಾಗದಿರದು. ಹಿಂದೂ—ಮುಸ್ಲಿಂ ಮುಖಂಡರು ತಾವು ಹೋರಾಟದಲ್ಲಿ ತೊಡಗಿದ್ದಾಗ ಬಿತ್ತಲಾದ ಜಾತೀಯ ದ್ವೇಷದ ಬೀಜಗಳನ್ನು ನಮ್ಮ ಮುಂದೆ ಕಿತ್ತು ಹಾಕುವಂತೆ ಅವರು ನೋಡಿಕೊಳ್ಳಬೇಕು. ಇನ್ನು ಸರಕಾರಿ ನೌಕರಿಯಲ್ಲಿದ್ದ ಈ ಹಿಂದು-ಮುಸ್ಲಿಂ ನೌಕರರಿಗೆ ತಮಗೆ ದುಡಿಯಲು ಮನಸ್ಸಿದ್ದ ರಾಷ್ಟ್ರವನ್ನು ಆರಿಸಿಕೊಳ್ಳಲು ಅವಕಾಶ ಕೊಟ್ಟಾಗ ಮುಸ್ಲಿಂ ನೌಕರರು ಪಾಕಿಸ್ತಾನವನ್ನು ಹಿಂದೂ ನೌಕರರು ಹಿಂದುಸ್ತಾನವನ್ನು ಆರಿಸಿಕೊಂಡದನ್ನು ಕಂಡು ತಮಗೆ ವ್ಯಥೆಯಾಗುತ್ತದೆಂದು ಗಾಂಧೀಜಿಯವರು ಹೇಳಿದರು. ಅವಸರದಲ್ಲಿ ಈ ನಿರ್ಣಯ ಕೈಕೊಳ್ಳಲಾಗಿದೆಂಬ ಬಗ್ಗೆ ಗಾಂಧೀಜಿಯವರಿಗೆ ಯಾವ ಸಂದೇಹವೂ ಇಲ್ಲ. ಜಾತೀಯ ಭಾವನೆಯು ಸರಕಾರೀ ನೌಕರಿಗಳಲ್ಲಿಯೂ ಸೇರಿದ್ದನ್ನು ಕಂಡು ಬಹಳ ವಿಷಾದವಾಗಿದೆ. ಈ ನೌಕರರಿಗೆ ತಮ್ಮ ನಿರ್ಣಯಗಳನ್ನು ಪುನರ್ವಿಮರ್ಶಿಸಲು ಅವಕಾಶ ಕೊಡುವದು ನಿಜವಾಗಿಯೂ ಸಾಧ್ಯವಿದೆಯೆ ಎಂಬುದನ್ನು ಉಭಯ ರಾಷ್ಟ್ರಗಳ ಮುಖ್ಯ ಮಂತ್ರಿಗಳು ಸೇರಿ ವಿಚಾರ ಮಾಡಬೇಕು. ಹಿಂದು ಅಧಿಕಾರಿಗಳಲ್ಲಿ ಮುಸ್ಲಿಂರೂ ಮುಸ್ಲಿಂ ಅಧಿಕಾರಿಗಳಲ್ಲಿ ಹಿಂದುಗಳೂ ವಿಶ್ವಾಸವಿಡಲಿಲ್ಲವಾದರೆ ಭಾರತಕ್ಕೆ ದುರ್ಗತಿಯೆ ಸರಿ. ಇವೆಲ್ಲ ಯೋಗ್ಯ ಮಾರ್ಗ ಹಿಡಿಯುವದು ಮುಖಂಡರನ್ನೇ ಅವಲಂಬಿಸಿದೆ. ಜನತೆಯಲ್ಲಿಯೂ ನೌಕರವರ್ಗದಲ್ಲಿಯೂ ಅವರ ಪ್ರಭಾವವೇ ಹೆಚ್ಚಾಗಿದೆ.

ಕೊನೆಯದಾಗಿ ಖುಲ್ನಾ ಜಿಲ್ಹೆಯು ಪಾಕಿಸ್ತಾನಕ್ಕೆ ಸೇರಿದ ನಿಮಿತ್ತ ಅಲ್ಲಿ ಉತ್ಸವ ನಡೆಯಲಿದೆಂಬುದನ್ನು ಕೇಳಿ ಗಾಂಧೀಜಿಯವರಿಗೆ ವ್ಯಥೆಯಾಯಿತು. ತ್ರಯಸ್ಥರ ತೀರ್ಪಿನ ನಂತರ ಇಂಥ ಉತ್ಸವ ನಡೆಯುವದು ಗಾಂಧೀಜಿಯವರ ದೃಷ್ಟಿಯಲ್ಲಿ ಶೋಚನೀಯ. ಆದರೆ ಅಲ್ಲಿಯ ಹಿಂದುಗಳೂ ಈ ಉತ್ಸವದಲ್ಲಿ ಸಹಕರಿಸಲಿದ್ದಾರೆ ಎಂದು ಶಾಹೀದ ಸಾಹೇಬರು ಗಾಂಧೀಜಿಯವರನ್ನು ಸಮಾಧಾನಪಡಿಸಿದರು. ಆದರೂ ಇಂಥ ಉದಾಹರಣೆಯಿಂದ ತಮಗೆ ಸಮಾಧಾನವಾಗಲಾರದು ಎಂದರು ಗಾಂಧೀಜಿ. ಈ ತೀರ್ಪಿನಿಂದ ನೊಂದುಕೊಂಡವರು ವ್ಯಥೆಯಿಂದ ಅದನ್ನು ಒಪ್ಪಿಕೊಳ್ಳುತಿರುವದರಿಂದ ಉತ್ಸಾಹಿಗಳು ಸ್ವಲ್ಪ ಸಂಯಮವನ್ನು ತೋರಿಸಬೇಕು. ಈ ವಿಭಜನೆಗೆ ಸಂಬಂಧಿಸಿದ ಪಕ್ಷಗಳ ಬಯಕೆಯಂತೆ ಉಭಯ ರಾಷ್ಟ್ರಗಳ ಮಂತ್ರಿಗಳು ಈ ತೀರ್ಪನ್ನು ಬದಲಿಸುವ ವರೆಗೆ ಇದೇ ಕೊನೆಯ ತೀರ್ಪೆಂದು ಸ್ವೀಕರಿಸಲ್ಪಡಬೇಕು.

## ಮೈತ್ರಿ

ಕಲಕತ್ತಾ ೨೫—೮—೪೭

"ಇಂದು ನನ್ನ ಮೌನ ದಿನವಾದ್ದರಿಂದ ನಾನು ನಿಮ್ಮನ್ನುದ್ದೇಶಿಸಿ ಮಾತಾಡಲಾರೆನಾದ್ದರಿಂದ ನನಗೆ ಖೇದವೆನಿಸುತ್ತದೆ. ಅದ್ದರಿಂದ ನಿಮಗೆ ಹೇಳಬೇಕೆಂಬುದನ್ನು ನಾನು ಬರೆದು ತಿಳಿಸಬೇಕೆಂದಿದ್ದೇನೆ. ಪಶ್ಚಿಮ ಬಂಗಾಲದಲ್ಲಿ ಅಲ್ಪಸಂಖ್ಯಾಕರಾದ ಮುಸ್ಲಿಂ ಬಾಂಧವರ ಬಗ್ಗೆ ಬಹುಸಂಖ್ಯಾಕ ಹಿಂದುಗಳ ಕರ್ತವ್ಯವೇನಿರಬೇಕೆಂಬುದನ್ನು ಕುರಿತು ನಾನು ದಿನಾಲೂ ಹೇಳುತ್ತಿರುತ್ತೇನೆ ಗತಂ ನ ಶೋಚಯೇತ್ ಎಂಬುದು ಸಾಧ್ಯವಾದರೆ ಈ ಹಿಂದುಗಳು ತಮ್ಮ ಕರ್ತವ್ಯವನ್ನು ಮಾಡಬಲ್ಲರು. ಈಗ ಇಡೀ ಜಗತ್ತಿನಲ್ಲಿಯ ಶತ್ರುಗಳೆಲ್ಲ ಗಾಢ ಸ್ನೇಹಿತರಾಗಿದ್ದಾರೆಂಬುದನ್ನು ನಾವು ಅರಿತಿದ್ದೇವೆ. ಹಿಂದೆ ಕ್ರೌರ್ಯ ಘನಘೋರವಾಗಿ ಕಾದಿದ ಬ್ರಿಟಿಶರೂ ಬೋಅರರೂ ಈಗ ಪರಮಮಿತ್ರರಾಗಿದ್ದಾರೆ. ಹಿಂದು — ಮುಸ್ಲಿಂರು ಸ್ನೇಹಿತರಾಗಲು ಇದಕ್ಕೂ ಬಲವಾದ ಕಾರಣವಿದೆ ನಮ್ಮ ವೈಮನಸ್ಸನ್ನು ಬಿಟ್ಟುಕೊಡಲು ನಮಗೆ ಸಾಧ್ಯವಾಗದಿದ್ದರೆ ಈ ಸ್ನೇಹವನ್ನೂ ನಾವು ಸಾಧಿಸಲಾರೆವೆಂದು ಗಾಂಧೀಜಿಯವರು ಹೇಳಿದರು.

"ಇಂದು ಸಾಯಂಕಾಲ ಸಿಲ್ಹಟದ ಬಗ್ಗೆ ಹೇಳಲಿಚ್ಛಿಸುತ್ತೇನೆ. ಸಿಲ್ಹಟದಲ್ಲಿ ಭಯಂಕರ ಸ್ವರೂಪದ ಜಾತೀಯ ದಂಗೆ ಪ್ರಾರಂಭವಾಗಿದೆಂದು ತಂತಿಗಳು ಬಂದಿವೆ. ಅದಕ್ಕೆ ಕಾರಣವೇನೊ ತಿಳಿದಿಲ್ಲ ಈಗ ಸದ್ಯಕ್ಕೆ ನನಗೆ ಅಲ್ಲಿ ಹೋಗಲಿಕ್ಕೆ ಸಾಧ್ಯವಿಲ್ಲದ್ದರಿಂದ ನನಗೆ ಖೇದವಾಗಿದೆ ಮತ್ತು ನಾನು ಅಲ್ಲಿಗೆ ಹೋದೊಡನೆ ಆ ಜನತೆಯ ರೋಷಾಗ್ನಿಯು ನಂದಿ ಹೋಗುವದೆಂದು ಭಾವಿಸುವಷ್ಟು ನಾನು ಗರ್ವಿತನಾಗಿಲ್ಲ. ಅಷ್ಟೊಂದು ಅಗತ್ಯದ ಕಾರಣವಿಲ್ಲದೆ ತಾನು ಸದ್ಯಕ್ಕೆ ಕೈಕೊಂಡ ಕರ್ತವ್ಯವನ್ನು, ಅದು ಅಷ್ಟೇ ಸಾಮಾನ್ಯವಾದುದಾದರೂ ಉಚ್ಚವೆಂದು ತೋರಬಹುದಾದ ಬೇರೊಂದು ಕೆಲಸಕ್ಕಾಗಿ, ಬಿಟ್ಟು ಕೊಡಬಾರದು ಎಂಬುದನ್ನೂ ನಾನು ಅರಿತಿದ್ದೇನೆ. ಸೈನಿಕ ಭಾಷೆಯಲ್ಲಿಯೆ ಹೇಳಬೇಕೆಂದರೆ ನಾವೆಲ್ಲರೂ ಅಧರ್ಮದ ವಿರುದ್ಧ ಧರ್ಮ ಯುದ್ಧವನ್ನು ಹೂಡಿದ ದೇವರ ಸೈನಿಕರಾಗಿದ್ದೇವೆ. ಅದ್ದರಿಂದ ನಾವು ಸತ್ಯ ಅಹಿಂಸಾವಾದಿಗಳಾಗಿರಬೇಕು. ಸೈನಿಕರಾದ ನಾವು ಕಾರಣವನ್ನು ಅರಸುತ್ತ ಹೋಗಬೇಕಾಗಿಲ್ಲ; ಮಾಡಿ ಮಡಿವುದು ಮಾತ್ರ ನಮ್ಮ ಕರ್ತವ್ಯ. ಅದ್ದರಿಂದ ಸಿಲ್ಹಟದ ದುಃಖಿತರ ಆರ್ತ ಕರೆಗೆ ಓಗೊಡುವುದು ನನಗೆ ಸಾಧ್ಯವಿಲ್ಲವಾದರೂ ಅಲ್ಲಿಯ ದುಃಖಿತರ ರಕ್ಷಣೆಗಾಗಿ ಪುಂಡರನ್ನು ಹತ್ತಿಕ್ಕಲು ಪೂರ್ವ ಬಂಗಾಲದ, ಅದರಲ್ಲಿಯೂ ಸಿಲ್ಹಟದ ಅಧಿಕಾರಿಗಳು ತಮ್ಮ ಸರ್ವ ಪ್ರಯತ್ನಗಳನ್ನು ಮುಂಬರಿಸಬೇಕೆಂದು ನಾನು ಬಿನ್ನವಿಸಿಕೊಳ್ಳದಿರಲಾರೆ.

"ಈಗ ಹಿಂದು ಮುಸ್ಲಿಂರಲ್ಲಿ ಶಾಂತತೆಯಿರುವಾಗ ಇಂಥ ದಂಗೆಗಳನ್ನು ಅಧಿಕಾರಿಗಳೂ ಅಪೇಕ್ಷಿಸಲಾರರು. ಇದು ಪುಂಡರ ಪುಂಡಾಟಿಕೆ ಎಂದು ಹೇಳಿ ದಂಗೆಯ ಭೀಕರ ಸ್ವರೂಪವನ್ನು ಮರೆಮಾಜುವದರಲ್ಲಿ ಅರ್ಥವಿಲ್ಲ. ಬಹುಸಂಖ್ಯಾಕರಂತೆ ತಾವಾದರೂ ಗೌರವಪಡೆದ ನಾಗರಿಕರಾಗಿರುವೆವೆಂಬ ಭಾವನೆಯನ್ನು ಅಲ್ಪಸಂಖ್ಯಾಕರಲ್ಲಿ ಬೆಳೆಸಬೇಕು. ಬಂಗಾಲದ ಉಭಯ ವಿಭಾಗಗಳ ಮುಖ್ಯಮಂತ್ರಿಗಳು ಪುನಃ ಪುನಃ ಒತ್ತಟ್ಟಿಗೆ ಸೇರಿ ತಂತಮ್ಮ ಪ್ರಾಂತದಲ್ಲಿ ಶಾಂತತೆ ಸ್ಥಾಪನೆಗಾಗಿ ಉಪಾಯಗಳನ್ನು ಚರ್ಚಿಸಬೇಕು; ತಮ್ಮ ಜನರಿಗೆ ಪೌಷ್ಟಿಕ ಆಹಾರ, ಸಾಕಷ್ಟು ಬಟ್ಟೆ, ಉದ್ಯೋಗಗಳನ್ನು ಒದಗಿಸಲು ಪ್ರಯತ್ನಿಸಬೇಕು. ಜನತೆಯ ಮುಖಂಡರೆ ಈ ರೀತಿ ವಿಶ್ವಾಸದಿಂದ, ಪ್ರಾಮಾಣಿಕತನದಿಂದ ಒತ್ತಟ್ಟಿಗೆ ಸೇರಿ ಎದೆಗಾರಿಕೆಯಿಂದ ಕೆಲಸ ನಡೆಸಹತ್ತಿದರೆ ಆ ಜನತೆಯು ತಮ್ಮ ಮುಖಂಡರಿಂದ ಪಾಠವನ್ನು ಕಲಿತು ಅದೇ ರೀತಿಯಲ್ಲಿ ನಡೆದುಕೊಳ್ಳಬಲ್ಲದು. ನಿರಾಶ್ರಿತರು ಭವಿತವ್ಯವನ್ನು ಧೈರ್ಯದಿಂದ ಎದುರಿಸಬೇಕೇ ವಿನಾ ಗೊಂದಲ ಎಬ್ಬಿಸಬಾರದೆಂದೂ ಹೇಳುತ್ತೇನೆ. ಮನುಷ್ಯನ ಜೀವಮಾನದಲ್ಲಿ ಇಂಥ ದಂಗೆಗಳು ಸಂಭವಿಸತಕ್ಕವೇ. ಎದೆಗಾರಿಕೆಯಿಂದ ಅವನ್ನೆದುರಿಸುವದೇ ನಿಜವಾದ ಪೌರುಷ. ದೌರ್ಬಲ್ಯದಿಂದ ಕಿಡಿಗೇಡಿತನ ಹುಟ್ಟುತ್ತದೆ ಎದೆಗಾರಿಕೆಯು ಅದನ್ನು ನಿರ್ಮೂಲಗೊಳಿಸುತ್ತದೆ."

ಈ ಸಂದೇಶವನ್ನು ಬಂಗಾಲಿಯಲ್ಲಿ ಭಾಷಾಂತರಿಸಲು ನಿರ್ಮಲ ಬಾಬುಗಳಿಗೆ ಅನುಕೂಲವಾಗಲೆಂದು ಅಂಗ್ಲ ಭಾಷೆಯಲ್ಲಿ ಬರೆಯಲಾಗಿತ್ತು. ಆದರೆ ಧೋಧೋ ಎಂದು ಮಳೆ ಸುರಿಯುತ್ತಿದ್ದದ್ದರಿಂದ ಮಹಾತ್ಮರೂ ಅವರ ಪರಿವಾರದವರೂ ಪ್ರಾರ್ಥನಾ ಸ್ಥಳಕ್ಕೆ ಒಂದು ತಾಸು ತಡಮಾಡಿ ಎಂದರೆ ಆರು ಗಂಟೆಗೆ ಬಂದು ತಲುಪಿದರು. ಮಾತಾಡಲು ಕೆಲವೇ ನಿಮಿಷಗಳ ಅವಕಾಶವಿತ್ತು. ಶಾಹೀದ ಸಾಹೇಬರು ಸಭೆಯನ್ನುದ್ದೇಶಿಸಿ ನಾಲ್ಕು ಮಾತು ಹೇಳುವವರಿದ್ದದ್ದರಿಂದ ಗಾಂಧೀಜಿಯವರಿಗೆ ಮಾತಾಡಲು ಹೆಚ್ಚು ಸಮಯ ದೊರೆಯಲಿಲ್ಲ.

## ಸೌಮ್ಯ ಬುದ್ಧಿವಾದ

ಸಭಿಕರನ್ನು ಕೆಸರಿನಲ್ಲಿ ನಿಲ್ಲಿಸಿದ್ದಕ್ಕಾಗಿ ಗಾಂಧೀಜಿಯವರು ಮೊದಲು ಅವರ ಕ್ಷಮೆ ಕೋರಿದರು. ಹೌರಾದಲ್ಲಿ ಮೇ. ಜ. ಶಹಾನವಾಜರ ಗೌರವಾರ್ಥ ಸೇರಿದ್ದ ಸಭೆಯಲ್ಲಿ ಶಾಹೀದ ಸಾಹೇಬರನ್ನು ಅಪಮಾನಕ್ಕೀಡು ಮಾಡಿದ ಸಂಗತಿಯನ್ನು ಬಳಿಕ ತಿಳಿಸಿದರು. ಆ ರೀತಿ ವರ್ತಿಸಿದ ಅವಿನೀತರಿಗೆ ಜನರಲರು ಸೌಮ್ಯವಾಗಿ ಬುದ್ಧಿವಾದ ಹೇಳಿದರೆಂದರು.

ಯಾವ ಮುಚ್ಚುಮರೆಯಿಲ್ಲದೆ ಉಭಯತರೂ ಸೇರಿ ಒಂದೇ ಧ್ಯೇಯ ಸಾಧನೆಗಾಗಿ ಹಿಂದಿನದೆಲ್ಲವನ್ನೂ ಮರೆತು ದುಡಿಯುತ್ತಿರುವಾಗ ಒಬ್ಬನಿಗೆ ಮಾಡಿದ ಅಪಮಾನವು ಇನ್ನೊಬ್ಬನಿಗೂ ಅದಂತೆಯೆ ಎಂದು ಗಾಂಧೀಜಿಯವರು ಹೇಳಿದರು ತಾವಿಬ್ಬರೂ ಸೇರಿ ಹಿಂದೂಮುಸ್ಲಿಂ ಐಕ್ಯವನ್ನು ಪ್ರದರ್ಶಿಸಬೇಕೆಂದಾಗ ಹಿಂದುವಿಗಾಗಲಿ ಮುಸ್ಲಿಮನಿಗಾಗಲೀ ಮಾಡಿದ ಅಪಮಾನವು ತಮ್ಮಿಬ್ಬರಿಗೂ ತಾಗುತ್ತದೆಂದೂ ಗಾಂಧೀಜಿಯವರು ಹೇಳಿದರು.

## ಪಂಜಾಬದ ಕರೆ

ತಾವು ಅದಷ್ಟು ಬೇಗನೆ ಪಂಜಾಬಕ್ಕೆ ಭೆಟ್ಟಿಕೊಡಬೇಕು ಎಂದು ತಮ್ಮನ್ನು ಕಂಡು ಅಗ್ರಹಪಡಿಸಿದ ಪಂಜಾಬಿ ಮಿತ್ರರನ್ನು ಕುರಿತು ಗಾಂಧೀಜಿಯವರು ಎರಡು ಮಾತು ಹೇಳಿದರು.

"ಪಂಡಿತಜಿಯವರೊಡನೆ ನಾನು ದೈನಂದಿನ ಪತ್ರವ್ಯವಹಾರವನ್ನಿಟ್ಟುಕೊಂಡಿದ್ದೇನೆಂದು ನಿಮಗೆ ಆಶ್ವಾಸನೆ ಕೊಡುತ್ತೇನೆ. ನಾನು ಇಡೀ ಭಾರತದ ಸೇವಕನಾಗಿರುವದರಿಂದ ಭಾರತದ ಉಳಿದ ಯಾವ ಭಾಗವನ್ನೇ ಪ್ರೀತಿಸುವಷ್ಟೇ ಪಂಜಾಬವನ್ನು ನಾನು ಪ್ರೀತಿಸುತ್ತೇನೆ. ಪಂಜಾಬದಲ್ಲಿ ದಂಡಿನ ಕಾಯದೆ ಜಾರಿದ್ದಾಗ ನಾನು ಆರು ತಿಂಗಳು ಅಲ್ಲಿ ಕಳೆದಿದ್ದೇನೆ. ಅವಶ್ಯಕತೆ ಕಂಡ ಕೂಡಲೆ ನಾ[illegible] ಪಂಜಾಬಕ್ಕೆ ಧಾವಿಸಿ ಬರುವೆನು. ಸಿಲ್ಹ[illegible] ನೋವಾಖಾಲಿ, ಮುರ್ಶಿದಾಬಾದ ಮುಂತಾದ ಸ್ಥ[illegible]ಗಳಲ್ಲಿಯೂ ನಾನಿರಬೇಕಾದುದು ಅಗತ್ಯವಾಗಿ[illegible] ಬಂದ ಎಲ್ಲ ಕರೆಗೆ ಓಗೊಡುವದು ಯಾರೊಬ್ಬ[illegible]ಗುತ್ತಿಗೆಯಲ್ಲ ಅಲ್ಲದೆ ಸಂಕಟಸಮಯ[illegible]ದಲ್ಲಿ ಹೆರವರನ್ನು ಅವಲಂಬಿಸುವದೂ ಒಳ್ಳೆ[illegible]ದಲ್ಲ. ಸಂಕಟನಿವಾರಣೆಗಾಗಿ ದೇವರನ್ನು [illegible] ಹೊಗುವದೇ ಯಾವಾಗಲೂ ಒಳ್ಳೆಯ[illegible] ಅವನೊಬ್ಬನೆ ನಿಜವಾದಸ್ನೇಹಿತ,ಮಾರ್ಗದ[illegible] ಎಂದೂ ಗಾಂಧೀಜಿಯವರು ಹೇಳಿದರು.

## ಜಮೀನದಾರರಿಗೆ ಬಿನ್ನಹ

"ನಿರಾಶ್ರಿತರ ಪರಿಹಾರ ಕಾರ್ಯ ಸುಗಮವಾ[illegible] ಸಾಗುತ್ತಿರುವದಿಲ್ಲ. ಇದಕ್ಕೆ ಜಮೀನದಾರ[illegible] ಕಾರಣರಾಗಿದ್ದಾರೆಂದು ತಿಳಿಯುತ್ತದೆ. ನಿರಾ[illegible]ತರನ್ನು ಸ್ವಾಗತಿಸಿ ಅವರಿಗೆ ಆಶ್ರಯ ಕೊ[illegible]ವದು ಜಮೀನದಾರರ ಕರ್ತವ್ಯ. ಅನಿವಾರ್ಯವಾ[illegible] ಮನೆಬಿಟ್ಟು ಹೋದವರ ಕಡೆಯಿಂದ [illegible] ಗೈರಹಾಜರಿಯಲ್ಲಿ ಇವರು ಅವರಿಂದ ಬಾ[illegible] ಪಡೆದುಕೊಳ್ಳಬಾರದು" ಎಂದೂ ಗಾಂಧೀಜಿಯವರು ಹೇಳಿದರು.

## ತಿಳಿವಳಿಕೆ ಉಂಟಾಗಲಿ

ಕೊನೆಯದಾಗಿ ಅವರು ತಾನೊಬ್ಬ ಸೂ[illegible] ಎಂದು ಹೇಳಿಕೊಳ್ಳುವವನಿಂದ ಬಂದ ಪತ್ರವನ್ನು ಉಲ್ಲೇಖಿಸಿದರು. ಶಾಹೀದ ಸಾಹೇ[illegible] ಮುಖಾಂತರ ಅವನು ಈ ಪತ್ರವನ್ನು ಕ[illegible]ದ್ದನು. ಹಿಂದು—ಇಸ್ಲಾಂ ಧರ್ಮಗಳ[illegible] ಸಾಮಾನ್ಯವಾದುದೇನೂ ಇಲ್ಲ ಅದ್ದರಿಂದ [illegible]ರಡು ಅಭಿನ್ನವಾಗಿ ಬಾಳಲಾರವು ಎಂಬುದೇ [illegible] ಪತ್ರದ ಆಶಯವಾಗಿತ್ತು. ಹಿಂದುಗಳು ಒಬ್ಬ[illegible] ದೇವರಲ್ಲಿ ವಿಶ್ವಾಸವಿಟ್ಟು ಉಳಿದ ಪ್ರಾಣಿಗಳ[illegible] ಮತ್ತು ಮಾನವರಲ್ಲಿ ಕೀಳು ಮೇಲೆಂಬ ಭೇ[illegible]ವನ್ನು ತೋರಿಸುತ್ತಾರೆ ಆದರೆ ಇಸ್ಲಾಮ[illegible] ಅಲ್ಲಾನೊಬ್ಬನೇ ದೇವರು,ಉಳಿದವರೆಲ್ಲ ಸಮ[illegible]ನರು ಎಂದು ಪರಿಗಣಿಸಲ್ಪಟ್ಟಿದ್ದಾರೆಂದು [illegible] ಸೂಫಿಯವಾದ. ಈಪತ್ರದಲ್ಲಿ ಹಿಂದುಧರ್ಮವ[illegible] ತಿರಸ್ಕರಿಸಲಾಗಿದೆ. ಅವಾಗಲಿ ಆಡಾಗಲಿ [illegible] ಪನಿಗಿಂತ ಶ್ರೇಷ್ಠವೆಂದು ಹಿಂದೂ ಧರ್ಮ[illegible] ಎಲ್ಲಿಯೂ ಹೇಳಲಾಗಿಲ್ಲ. ಆದರೆ ದೇವರ [illegible]ಯಲ್ಲಿತಾನು ಅಧಮಾಧಮನೆಂದು ಯಾರಾದರೂ ಹೇಳಿಕೊಳ್ಳುತ್ತಿದ್ದರೆ ಅದರಲ್ಲಿ ಯಾವ [illegible] ಇಲ್ಲವೆಂದು[illegible]ತಾವು ಒಪ್ಪಿಕೊಳ್ಳುವದಾಗಿ ಗಾಂ[illegible] ಹೇಳಿದರು. ಹಿಂದು ಧರ್ಮದ ಸುತ್ತಲೂ [illegible] ಹೆಚ್ಚಾಗಿ ಬೆಳೆದಿದೆ. ಶುದ್ಧ ಹಿಂದು ಧರ್ಮವ[illegible] ಅದರ ಅನುಯಾಯಿಗಳು ಅನುಸರಿಸುತ್ತಿ[illegible] ಅದ್ದರಿಂದ ತಮ್ಮಂಥ ಹಿಂದೂ ಧರ್ಮಾಭಿ[illegible]ನಿಯು ಹಿಂದು ಧರ್ಮವನ್ನು ಅರಿತುಕೊಂಡ[illegible] ನಿಷ್ಪಕ್ಷಪಾತಿಗಳೂ ಈಗ ಹಿಂದು ಧರ್ಮವ[illegible] ಅರಿತುಕೊಳ್ಳಬೇಕಾಗಿದೆ ಅದರಂತೆಯೆ ಮುಸ್ಲಿ[illegible] ಸಜ್ಜನನು ತನ್ನ ಧರ್ಮವನ್ನು ಅರಿತುಕೊ[illegible]ಡಂತೆ ನಿಷ್ಪಕ್ಷಪಾತ ಹಿಂದುವೂ ಇಸ್ಲಾಂ ಧರ್ಮ[illegible]ವನ್ನು ಅರಿತುಕೊಳ್ಳಬೇಕಾದುದು ಅವನ ಕ[illegible]ವ್ಯವಾಗಿದೆ. ಅನೇಕ ಗೂಢಗಳನ್ನು ಅರಿತು[illegible]ಳ್ಳಲು ಇದೊಂದೆ ಸರಿಯಾದ ದಾರಿ. ಆದ[illegible] ಜಗತ್ತಿನ ಧರ್ಮಗಳಿಗೆಲ್ಲ ಮೂಲ ತತ್ವಗಳು ಒಂದೇ ಆಗಿವೆ. ಮತ್ತು ಒಂದೇ ಮೂಲದಿಂ[illegible] ಎಲ್ಲ ಧರ್ಮಗಳು ಹುಟ್ಟಿವೆ ಎಂಬುದು ಕೊನೆ[illegible] ಕಂಡುಬರದಿರದು ಎಂದೂ ಅವರು ಹೇಳಿದ[illegible]

## ತೀರ ಸಾವಕಾಶ

ಕಲಕತ್ತೆ ತಾ. ೨೬-೮-೪೭

"ನೀವೆಲ್ಲ ಈಗ ನಡೆಸಿರುವ ಗುಜು ಗುಜ[illegible] ಮಾತಿನಿಂದ ನಾನು ನಿಮಗೆ ಹೇಳಬೇಕ[illegible] ನಾಲ್ಕು ಮಾತುಗಳನ್ನು ಹೇಳಲಿಕ್ಕೂ ಸಾ[illegible] ವಿಲ್ಲದಾಗಿದೆ"ಂದು ಗಾಂಧೀಜಿಯವರು ಅ[illegible] ಪ್ರಾರ್ಥನಾ ಸಭೆಯಲ್ಲಿ ಸೇರಿದ್ದ ಅಪಾರ [illegible] ಸಾಗರವನ್ನು ಉದ್ದೇಶಿಸಿ ಹೇಳಿದರು. "ನಿ[illegible] ವರಲ್ಲಿ ಬಹು ಜನರು ಶಾಂತರಾಗಿರುವದ[illegible] ನಾಲ್ಕು ಮಾತುಗಳನ್ನು ಹೇಳುತ್ತೇನೆ ಪರಿ[illegible] ಕಾರ್ಯವು ನಾವೆಣಿಸಿದಷ್ಟು ಭರದಿಂದ ಸಾಗು[illegible] ವದಿಲ್ಲ. ಈ ಕಾರ್ಯವು ಸಕಾಲದಲ್ಲಿ ಮು[illegible] ಹಿಂ[illegible] ನಿರಾಶ್ರಿತರು ಸ್ವಸ್ಥಾನಗಳಿಗೆ [illegible] ಲಿಲ್ಲವಾದರೆ ದಿನಾಲೂ ನಾವು [illegible] ಇಂಥ ಪ್ರಚಂಡ ಸಭೆಗಳನ್ನು ಸೇರಿಸಿದರೂ [illegible] ತೆಯು ಕ್ಷಣಿಕವಾಗಿ ಉಳಿಯುವದು. [illegible] ಭಾಗದಲ್ಲಿ ಸಿರಿವಂತರು ವಾಸಿಸಿದ್ದಾರೆ. [illegible] ತಮ್ಮ ಕರ್ತವ್ಯ ಮಾಡಬೇಕೆಂದು ಮನಸು ಮಾ[illegible]ದರೆ ಪರಿಹಾರ ಕಾರ್ಯಕ್ಕೆ ಅವರು ಸುಲಭವಾ[illegible] ನೆರವಾಗಬಲ್ಲರು. ಪೋಲೀಸರೂ ಅಂಜಿಕೆ [illegible]ಕೆಗಳಿಲ್ಲದೆ ದಯಾದಾಕ್ಷಿಣ್ಯಗಳಿಲ್ಲದೆ ತಮ್ಮ ಕ[illegible]ವ್ಯವನ್ನು ನೆರವೇರಿಸಿದರೆ ಅರ್ಧಕೆಲಸ ಪೂರ್ತಿ[illegible]ದಂತಾಗುವದು."

( ೧೦ ನೇ ಪುಟಕ್ಕೆ )

## ಇದು ಸನ್ಯಾಸಿತನವೆ?

[ಲೇ— ಶ್ರೀ ಜೆ. ಸಿ. ಕುಮಾರಪ್ಪ]

ಗಾಂಧೀಜಿಯವರು ಪ್ರತಿಪಾದಿಸುತ್ತಿರುವ ಜೀವನ ಮಾರ್ಗವು ಅವರಲ್ಲಿರುವ ಸನ್ಯಾಸಿಯ ಛಟಿಯ ಪರಿಣಾಮವೆಂದು ಹೇಳಲಾಗುತ್ತಿದೆ. ಇದರಿಂದ ಅವರು ಹೇಳುವ ಜೀವನ ರೀತಿಗೆ ಬೆಲೆಯಿಲ್ಲದಂತಾಗಿದೆ. ಸರಿಯಾಗಿ ತಿಳಿದುಕೊಂಡರೆ ನಿರಂತರತೆಯ ನಿಯಮನ್ನಿಟ್ಟುಕೊಂಡ ಯಾವದೇ ಅರ್ಥವಿಜ್ಞಾನದ ತಳಹದಿಯು ಸರಳತೆಯ ಅವಶ್ಯಕತೆಯಾಗಿದೆಂಬ ಮಾತು ಹೊಳೆಯುವದು. ಯುರೋಪಿನ ಮೊನ್ನಿನ ನನ್ನ ಪ್ರವಾಸದಲ್ಲಿ ನನ್ನ ಮನಸ್ಸಿನ ಮೇಲೆ ಅಚ್ಚೊತ್ತಿದ ಒಂದು ಮಾತೆಂದರೆ ಪರಿಸ್ಥಿತಿಯ ಒತ್ತಾಯದಿಂದ ಧನಿಕ ಇಂಗ್ಲಂಡಿನ ಜನರು ಬೇಕಾಗಿಯೆ ಆಗಲಿ ಬೇಡಾಗಿಯೆ ಆಗಲಿ ತಮ್ಮ ಜೀವನಗಳನ್ನು ಸರಳಗೊಳಿಸುತ್ತಿರುವರು.

ಆಹಾರಕ್ಕಾಗಿ ಗ್ರೇಟಬ್ರಿಟನ್ನು ಹೊರದೇಶಗಳಿಂದ ಬರುವ ಆಯಾತಗಳನ್ನೇ ಅವಲಂಬಿಸಿರುವದರಿಂದ ಅದರ ಸಲುವಾಗಿ ಅನೇಕ ಆಯಾತ ಸರಕುಗಳನ್ನಂಗೀಕರಿಸದೆ ಬಿಡಬೇಕಾಗಿದೆ. ಮತ್ತು ಅದರ ಬೆಲೆ ಕೊಡುವದಕ್ಕಾಗಿ ಸ್ವತಃ ಬ್ರಿಟನ್ನಿಗೆ ಬಟ್ಟೆ ಬರೆಗಳ ಕೊರತೆಯಿದ್ದರೂ ಬಟ್ಟೆಬರೆ ಮತ್ತು ಬೇರೆ ಸಿದ್ಧ ಸರಕುಗಳನ್ನು ಹೊರನಾಡುಗಳಿಗೆ ಕಳಿಸಬೇಕಾಗುತ್ತಿದೆ. ಇದರ ಫಲವಾಗಿ ಇಂಗ್ಲಂಡಿನಲ್ಲಿ ಕಾಲುಚೀಲಗಳನ್ನು ಹಾಕಿಕೊಂಡ ಹೆಂಗಸು ಇಂದು ಕ್ವಚಿತ್ತಾಗಿ ಕಣ್ಣಿಗೆ ಬೀಳುವಳು. ಮತ್ತು ಮೀಯುವ ಉಡುಪಿನಲ್ಲಿ ಕಾಲ್ಸಡಿಗಳ ಮೇಲೆ ಕುಳಿತು ಮೈಮೇಲೆ ಒಂದಂಗುಲ ಅರಿವೆಯೂ ಇಲ್ಲದೆ ಓಣಿಗಳಲ್ಲಿ ಅಲೆದಾಡುವ ಯುವಕರನ್ನು ಕಂಡು ನನಗೆ ಸೋಜಿಗೆನಿಸಿತು. ಇವರೇನೂ ಮಹಾತ್ಮರ ಶಿಷ್ಯರಲ್ಲ. ಮಹಾತ್ಮರ ಮೈಮೇಲಿರುವ ಬಟ್ಟೆಗಿಂತಲೂ ಕಡಿಮೆ ಬಟ್ಟೆಯನ್ನು ಇಂದು ಧರಿಸುತಿರುವರು. ಮೊದಲ ಕಾಲದಲ್ಲಿ ಇಂತಹ ಅರೆಬತ್ತಲೆಯವಸ್ಥೆಯಲ್ಲಿ ಯಾರಾದರೂ ಅಲೆದಾಡಲೆತ್ನಿಸಿದರೆ ಅಂತಹನನ್ನು ಅಸಂಭಾವಿತ ಉಡುಪಿನವನೆಂದು ಕೈಸೆರೆ ಹಿಡಿಯಲಾಗುತಿತ್ತು.

ಕೂಲಿಯ ದರಗಳು ಏರಿರುವದರಿಂದ ಮನೆಗೆಲಸಕ್ಕೆ ತೊತ್ತುಗಳನ್ನಿಟ್ಟುಕೊಳ್ಳುವದಶಕ್ಯವಾಗಿದೆ. ಈ ಪರಿಸ್ಥಿತಿಯು ಹಾಗು ಸಾಬಾಣದ ಕೊರತೆಯ ಮೂಲಕ ಅಗಸರ ಮನೆಗಳಿಗೆ ಬಟ್ಟೆಗಳನ್ನು ಗಂಜಿಗೆ ಕೊಡುವದು ಸುಖಲೋಲುಪತೆಯೆಂದೆಣಿಸಲಾಗಿದೆ. ಈಗಿದ್ದ ಗಂಜೀ ಮನೆಗಳಲ್ಲಿ ೧೫ ದಿವಸಗಳೊಳಗೆ ಶರ್ಟು ಒಗೆದು ಬರಲಾರದು. ಇದರಿಂದ ತಮ್ಮ ಬಟ್ಟೆ ಹಸನಾಗಿರಬೇಕೆನ್ನುವವರು ಸ್ವತಃ ಒಗೆದುಕೊಳ್ಳದೆ ಗತ್ಯಂತರವಿಲ್ಲ. ಸ್ವಾವಲಂಬನ ತತ್ವಕ್ಕೆ ನಿಷ್ಠರಾದ ಆಶ್ರಮವಾಸಿಗಳೇನೂ ಇವರಲ್ಲ.

ಕೈಲಿದ್ದ ಸಂಗ್ರಹಗಳಿಗೆ ಪೂರಕಗಳನ್ನೊದಗಿಸಲು ಭಗೀರಥ ಪ್ರಯತ್ನಗಳನ್ನು ಮಾಡಲು ಆಹಾರ ಧಾನ್ಯ ಕೊರತೆಯು ಪ್ರಚೋದನೆಯನ್ನಿತ್ತಿದೆ. ನಮ್ಮ ನಾಡಿನಲ್ಲಾದರೋ "ಆಹಾರ ಧಾನ್ಯ ಹೆಚ್ಚು ಬೆಳೆಯಿರಿ" ಎಂಬ ಪ್ರಕಟನೆಗಳಲ್ಲಿಯೇ ನಮ್ಮ ಭಗೀರಥ ಪ್ರಯತ್ನಗಳೆಲ್ಲ ಬತ್ತಿಬಿಡುತ್ತವೆ. ಆದರೆ ಬ್ರಿಟನ್ನಿನಲ್ಲಿ ಕೆಲ ಕಾಲದ ಹಿಂದೆ ಗಿಡಗಂಟಿಗಳಿಂದ ತುಂಬಿದ ಹಿತ್ತಲಲ್ಲಿ ಇಂದು ಬಟಾಟಿ, ಕೋಸುಗಡ್ಡೆ, ಕಾಲಿಫ್ಲಾವರ, ಮೊದಲಾದ ಕಾಯಿಪಲ್ಲೆಗಳನ್ನು ಬೆಳೆಸಲಾಗುತ್ತದೆ. ಮನೆಯೊಡೆಯನು ಕೆಲಸದಿಂದ ಮರಳಿಬಂದ ಬಳಿಕ ತೋಳೇರಿಸಿ ಕೈತೋಟದ ಕೆಲಸಕ್ಕೆ ಅಣಿಯಾಗುವನು. ಭೂಮಿಯಲ್ಲಿ ಕಾಯಕ ಮಾಡುವ ಈ ಪ್ರವೃತ್ತಿಯು "ಬಾದರಾಯಣ ಕಾಲಕ್ಕೆ ಹೋದಂತೇನು ?"

ಇಷ್ಟೆಲ್ಲ ಇದ್ದರೂ ದುಡಿಮೆಗಾರರು ಮತ್ತು ಮಧ್ಯಮ ವರ್ಗದವರು ಮೊದಲಿನಕಿಂತ ಧಷ್ಟಪುಷ್ಟರೂ ಚೆನ್ನುಡುಪಿನವರೂ ಎಂದು ಕಾಣುವರು. ನಲ್ವತ್ತೈವತ್ತು ವರ್ಷಗಳ ಹಿಂದಿನ ಪರಿಸ್ಥಿತಿಗೆ ಹೋಲಿಸಿನೋಡಿದರೆ ಅವರು ನಿಶ್ಚಿತವಾಗಿ ಚೆನ್ನಾಗಿ ಕಾಣುವರು. ನಿಜವಾಗಿಯೂ ಯುದ್ಧಗಳು ಸಂಪತ್ತಿನ ವಿತರಣವು ಸರಿಯಾಗಿ ಆಗಲಿಕ್ಕೆ ನೆರವಾಗಿವೆ.

ಸಾಮಾನ್ಯ ಜನರಿಗೆ ಅವಶ್ಯವಾಗಿರುವ ಕೆಲವು ಆಹಾರ ಪದಾರ್ಥಗಳನ್ನೊದಗಿಸಲು ಸರಕಾರವು ಅವುಗಳ ಅರ್ಧ ಬೆಲೆಯನ್ನು ತಾನೇ ತೆರುತ್ತದೆ. ಮತ್ತು ಕೆಲಪ್ರಸಂಗಗಳಲ್ಲಿ ಹೆಚ್ಚಿನ ಅಂಶವನ್ನು ಕೂಡ ಅದು ಕೊಡುತ್ತದೆ. ಈ ಕಾರ್ಯಕ್ರಮದಿಂದ ಕಳ್ಳಪೇಟಿಗನ ಕೈಯಿಂದ ವ್ಯಾಪಾರವೆಲ್ಲ ತಪ್ಪಿಹೋಗಿದೆ. ನಮ್ಮ ಸರಕಾರವು ಇದರಿಂದೇನಾದರೂ ಕಲಿಯಬಹುದೊ? ಆಹಾರವು ಪಡಿಪದ್ಧತಿಯಿಂದ ಕೊಡಲಾಗುತ್ತಿದ್ದರೂ ಸಮತೂಕ (ಪೋಷಕ ಅಂಶಗಳುಳ್ಳ) ಆಹಾರ ಪೂರೈಕೆಯ ಆಶ್ವಾಸನವು ಪ್ರತಿಯೊಬ್ಬರಿಗಿದೆ. ಅತ್ಯಶನ ಮತ್ತು ಕೆಟ್ಟ ಕೂಳುಗಳ ನಿಯಂತ್ರಣದಿಂದ ಜನರ ಆರೋಗ್ಯ ಸುಧಾರಿಸಲು ಸಹಾಯಕವಾಗಿರಬಹುದಲ್ಲವೆ?

ಜಾಗ್ರತ ಬುದ್ಧಿಯಿಂದ ಹೆಚ್ಚಿನ ಗುರಿಗಳನ್ನು ಪಡೆಯಲು ನಮ್ಮ ಜೀವನವನ್ನು ನಿರಾಡಂಬರಗೊಳಿಸಿದರೆ ನಾವು ತಲೆತಿರುಕರೂ ಆಗಬೇಕಾಗಿಲ್ಲ; ಸನ್ಯಾಸಿಗಳೂ ಆಗಬೇಕಾಗಿಲ್ಲ. ಕೈಮೀರಿದ ನಿಲುಮೆಯಿಂದ ಲಂಡನ್ನು ಗಾಂಧೀಯ ಜೀವನ ರೀತಿಗೆ ಒಲಿಯಬೇಕಾಗಿದೆ. ಇಂತಹ ಸನ್ನಿವೇಶಗಳನ್ನು ಮುಂಗಂಡು ನಮ್ಮ ಜೀವನವನ್ನು ತದನುಸಾರ ನಿಯಮಿತಗೊಳಿಸುವದು ಲೇಸಲ್ಲವೆ?

೧೫೦ ವರ್ಷಗಳಿಂದ ಹೆಚ್ಚಾದ ಅವಧಿಯವರೆಗೆ ದೊಡ್ಡ ಪ್ರಮಾಣದಿಂದ ಸರಕುಗಳ ಹುಟ್ಟುವಳಿ ಪದ್ಧತಿಯನ್ನವಲಂಬಿಸಿ ಹೆಚ್ಚೆಚ್ಚು ಸರಕುಗಳನ್ನು ಹುಟ್ಟಿಸಲೆತ್ನಿಸಿದ ಮೇಲೂ ಗ್ರೇಟಬ್ರಿಟನ್ನಿನಲ್ಲಿ ಸಾಮಾನ್ಯ ದಿನಬಳಕೆಯ ಸರಕುಗಳ ಕೊರತೆಯಿರುವದು ಆಶ್ಚರಿಯಾಗಿದೆ. ಆ ಮಾನವೀ ಪ್ರಯತ್ನ ಸಾಕಲ್ಯದಿಂದ ಇಂದು ಯುರೋಪಿರುವ ಅವಸ್ಥೆಗೆ ನಾವು ಹೋಗಿ ತಲ್ಪುವದಾದರೆ "ಔದ್ಯೋಗೀಕರಣ"ದ ಆ ಬುದ್ಧಿಹೀನ ಮಾರ್ಗದಿಂದ ಮುಂದುವರಿಯುವದು ಹಿಂದುಸ್ಥಾನಕ್ಕೆ ಹಿತಕರವೆ?

# ಅಹಿಂಸೆ ಮತ್ತು ಸ್ವತಂತ್ರ ಭಾರತ

ಬೆಲಿಯಾ ಘಾಟದಲ್ಲಿ ಮಹಾತ್ಮರ ಶಿಬಿರದಲ್ಲಿ ಮೊನ್ನೆ ಸ್ಥಳೀಯ ವಿದ್ಯಾರ್ಥಿಗಳ ಚಿಕ್ಕ ತಂಡವೊಂದು ನೆರೆದಿತ್ತು. 'ನಿಮ್ಮಲ್ಲಿ ಯಾರಾದರೂ ಗಲಭೆಯಲ್ಲಿ ಭಾಗವಹಿಸಿದ್ದಿರೆ? ಎಂದು ಗಾಂಧೀಜಿ ಅವರನ್ನು ಮೊದಲಿಗೆ ಕೇಳಿದರು. ಅವರೆಲ್ಲ ನಕಾರಾರ್ಥವಾಗ್ಯುತ್ತರಿಸಿದರು. ತಾವು ಮಾಡಿದ್ದೆಲ್ಲ ಆತ್ಮರಕ್ಷಣೆಗೆಂದು ಮಾಡಿದ್ದು ಅದ್ದರಿಂದ ಅದು ದಂಗೆಯ ಅಂಗವಾಗಲಾರದೆಂದು ಅವರು ತಿಳಿಸಿದರು.

ಇದರಿಂದ ಮಹಾತ್ಮರಿಗೆ ಅಹಿಂಸೆಗೆ ಸಂಬಂಧಿಸಿದ ಕೆಲವು ಮಹತ್ವದ ಸಂಗತಿಗಳ ಬಗ್ಗೆ ಮಾತನಾಡಲು ಅವಕಾಶ ದೊರೆಯಿತು. "ಅನಿವಾರ್ಯವಾದ ಆತ್ಮರಕ್ಷಣೆಯ ನೆವದಲ್ಲಿ ಮಾನವ ಜನಾಂಗವು ಹಿಂಸೆ ಯುದ್ಧಗಳನ್ನು ಇದು ವರೆಗೆ ಸಮರ್ಥಿಸುತ್ತ ಬಂದಿದೆ. ಆದರೆ ಆಕ್ರಾಮಕರ ಹಿಂಸೆಯನ್ನು ಮೀರಿದ ಸ್ವರಕ್ಷಕರ ಹಿಂಸೆಯು ಅದನ್ನು ಪರಾಭವಗೊಳಿಸಬಲ್ಲದು ಎಂಬುದು ಸುಲಭ ಸಾಮಾನ್ಯ ನಿಯಮವಾಗಿದೆ. ಇಡೀ ಜಗತ್ತೇ ಶಸ್ತ್ರಾಸ್ತ್ರಗಳ ಹುಚ್ಚು ಸ್ಪರ್ಧೆಗಿಳಿದಿದೆ. ಖಡ್ಗವನ್ನು ನೇಗಿಲಾಗಿ ಪರಿವರ್ತಿಸುವ ಸುರಕ್ಷಿತ ಸಮಯವು ಜಗತ್ತಿನಲ್ಲಿ ಎಂದು ಉಂಟಾಗುವದೊ ಎಂಬುದು ಯಾರಿಗೂ ಗೊತ್ತಿಲ್ಲ. ಆತ್ಮಸಂರಕ್ಷಣೆಯ ನಿಜವಾದ ಕಲೆಯನ್ನು ಮಾನವ ಜನಾಂಗವಿನ್ನೂ ಅಳವಡಿಸಿಕೊಂಡಿಲ್ಲ" ಎಂದು ಮಹಾತ್ಮರು ಹೇಳಿದರು.

ನುಡಿದಂತೆ ನಡೆದು ತೋರಿಸಿದ ಮಹಾವಿಭೂತಿಗಳು ಸೇಡು ತೀರಿಸಿಕೊಳ್ಳದೇ ಇರುವದರಲ್ಲಿಯೆ ನಿಜವಾದ ಆತ್ಮಸಂರಕ್ಷಣೆಯಿದೆಂದು ಹೇಳಿದ್ದಾರೆ. ಇದು ವಿರೋಧಾಭಾಸದಂತೆ ತೋರಬಹುದು. ಆದರೆ ಮಹಾತ್ಮರ ಮನೀಷೆ ಇದೇ ಆಗಿದೆ. ಪ್ರತಿಹಿಂಸೆಯನ್ನವಲಂಬಿಸಿ ಹಿಂಸೆ ಅಭಿವೃದ್ಧಿಗೊಳ್ಳುತ್ತದೆ. ಆಕ್ರಮಕನು ಯಾವುದೊಂದು ಉದ್ದೇಶವಿಟ್ಟುಕೊಂಡೇ ದಾಳಿ ನಡೆಸುತ್ತಾನೆ; ಎದುರಾಳಿಯ ಶರಣಾಗತಿಯನ್ನು ಅಪೇಕ್ಷಿಸಿ ಇಲ್ಲವೇ ಬೇರೊಂದು ಉದ್ದೇಶ ಸಾಧನೆಗಾಗಿ ಅವನು ಪ್ರಯತ್ನಿಸುತ್ತಾನೆ. ಆದರೆ ಈಗ ದಾಳಿಗೀಡಾದವನು ಆಕ್ರಾಮಕನ ಮನಸ್ಸನ್ನೊಲಿಸಬಲ್ಲನಾದರೆ, ಅವನ ಹಿಂಸೆಗೆ ಪ್ರತಿಹಿಂಸೆಯನ್ನು ತೋರುವ ಚಾಪಲ್ಯವನ್ನು ಹತ್ತಿಕ್ಕಿ ಅವನಿಗೆ ಒಂದಂಗುಲ ಭೂಮಿಯನ್ನಾದರೂ ಬಿಟ್ಟುಕೊಡದಿದ್ದರೆ ದಾಳಿಗೀಡಾದವನನ್ನು ದಂಡಿಸುವದು ಯೋಗ್ಯವಲ್ಲ; ಈ ರೀತಿ ತನ್ನ ಉದ್ದೇಶವನ್ನು ಒತ್ತಾಯದಿಂದ ಹೇರಲಿಕ್ಕಾಗದು ಎಂದು ಆಕ್ರಾಮಕನಿಗೆ ಅಲ್ಪಾವಧಿಯಲ್ಲಿಯೆ ಬಿಂಬಿಸಬಹುದು. ಇದಕ್ಕಾಗಿ ಕಷ್ಟನಿಷ್ಠುರಗಳನ್ನು ಸಹಿಸಬೇಕಾಗುವದು. ಈ ಕಷ್ಟಸಹನೆಯೆ ತೀರ ಶುದ್ಧ ಸ್ವರೂಪದ ಆತ್ಮಸಂರಕ್ಷಣೆ, ಇದಕ್ಕೆ ಸೋಲೆಂಬುವದಿಲ್ಲ.

ಹೀಗೆ ಪ್ರತಿಭಟನೆ ತೋರದವನು ತನ್ನ ಪ್ರಾಣವನ್ನು ಕಳೆದುಕೊಂಡರೆ ಅದೂ ಆತ್ಮಸಂರಕ್ಷಣೆಯಾಗಬಲ್ಲದೆ? ಎಂದು ಯಾರಾದರೂ ಕೇಳಬಹುದು. ಏಸುವು ಶಿಲುಬೆಯಮೇಲೆ ಪ್ರಾಣತ್ಯಾಗ ಮಾಡಿದನು; ಅದರಿಂದ ರೋಮನ ಅಧಿಕಾರಿಗೆ ವಿಜಯವಾಯಿತು ಎನ್ನುತ್ತಾರೆ. ಆದರೆ ಗಾಂಧೀಜಿ ಇದನ್ನು ಒಪ್ಪುವದಿಲ್ಲ ಜಗತ್ತಿನ ಇತಿಹಾಸವೇ ಎತ್ತಿ ತೋರಿಸುವಂತೆ ಏಸುವೇ ವಿಜಯಿಯಾಗಿದ್ದಾನೆ. ಏಸುವಿನ ನಿಷ್ಕ್ರಿಯೆಯಿಂದ ಸಮಾಜದಲ್ಲಿ ಸತ್ಪ್ರವೃತ್ತಿಗಳು ಹರಡಿದಾಗ ಅವನ ನಶ್ವರ ದೇಹ ಹಾಳಾದರೇನು?

ಪ್ರಾಣಾರ್ಪಣೆ ಮಾಡಿ ಪ್ರಾಣಪಡೆಯುವಂಥ ಈ ಆತ್ಮಸಂರಕ್ಷಣೆಯ ನೈಜಕಲೆಯನ್ನು ಕೆಲವೇ ವ್ಯಕ್ತಿಗಳು ಅಳವಡಿಸಿಕೊಂಡಿದ್ದಾರೆ. ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಮಾನವ ಜನಾಂಗದ ಬಹುಸಂಖ್ಯಾತರು ಪ್ರಯೋಜನಕ್ಕೆ ತಂದುಕೊಳ್ಳುವಂತೆ ಇದನ್ನು ಪರಿಪೂರ್ಣಗೊಳಿಸಲಾಗಿಲ್ಲ. ಭಾರತದಲ್ಲಿ ನಡೆದ ಸತ್ಯಾಗ್ರಹವು ಈ ದಾರಿಯಲ್ಲಿ ನಡೆದ ಅಪರಿಪಕ್ವ ಪ್ರಯತ್ನ. ಅದ್ದರಿಂದ ಅದು ಹಿಂದೂ ಮುಸ್ಲಿಂ ಗಲಭೆಯ ಕಾಲಕ್ಕೆ ಸಂಪೂರ್ಣವಾಗಿ ಅಯಶಸ್ವಿಯಾಯಿತು.

೨—೩ ದಿನಗಳ ಹಿಂದೆ ಈ ವಿದ್ಯಾರ್ಥಿಗಳಿಗೆ ಭೆಟ್ಟಿಯಾಗುವುದರ ಮೊದಲು ಅಮೇರಿಕದಲ್ಲಿಯ ತಮ್ಮ ಕಾಲೇಜಿಗೆ ಹೋಗುವುದರ ಮುನ್ನ ತಮ್ಮನ್ನು ನೋಡಲು ಬಂದಿದ್ದ ಪ್ರೊ. ನೆಲ್ಸನ್ನರಿಗೆ ಗಾಂಧೀಜಿಯು ಈ ವಿಷಯದಲ್ಲಿ ತಮ್ಮ ಮನಸ್ಸಿನಲ್ಲಿದ್ದುದನ್ನು ಹೇಳಿದರು. ಹೆಚ್ಚುಕಡಿಮೆ ಜಯಪ್ರದವಾಗಿ ಶಾಂತಿಯುತ ಅಹಿಂಸೆಯಿಂದಲೇ ಸ್ವಾತಂತ್ರ್ಯಪಡೆದ ಹಿಂದೀಯರಿಗೆ ಅದರಿಂದಲೇ ಯಾದವೀ ಕಲಹವನ್ನು ಅಡಗಿಸಲು ಏಕೆ ಸಾಧ್ಯವಾಗುತ್ತಿಲ್ಲವೆಂದು ಪ್ರೊ. ನೆಲ್ಸನ್ನರು ಕೇಳಿದರು. ಅದೊಂದು ಸತ್ವಪರೀಕ್ಷೆಯ ಪ್ರಶ್ನೆಯೆಂದೂ ಅದನ್ನು ತಾವು ಉತ್ತರಿಸಲೇಬೇಕಾಯಿತೆಂದೂ ಗಾಂಧೀಜಿಯೆಂದರು. ಅವರು ಮುಂದುವರಿಸಿದರು: "ಸತ್ಯಾಗ್ರಹವೆಂದು ನಾನು ತಿಳಿದುಕೊಂಡದು ಸತ್ಯಾಗ್ರಹವಲ್ಲ; ನಿಷ್ಕ್ರಿಯ ಪ್ರತೀಕಾರ, ದುರ್ಬಲರ ಅಸ್ತ್ರ ಎಂದು ನಾನು ಒಪ್ಪುತ್ತೇನೆ" ತಮ್ಮ ಪರಕೀಯ ಆಳರಸರ ಮೇಲೆ ಕ್ರೋಧ ಹಾಗೂ ದುರಾಗ್ರಹವನ್ನು ಇಟ್ಟುಕೊಂಡು ಹಿಂದೀಯರು ಅಹಿಂಸೆಯಿಂದ ಪ್ರತಿಭಟಿಸುವ ನಾಟಕ ಹೂಡಿದರು. ಆದುದರಿಂದ ಅವರ ಪ್ರತಿಭಟನೆಯು ಹಿಂಸಾಪ್ರೇರಿತವಾಗಿತ್ತು; ಹಾಗಲ್ಲದೆ ಸತ್ಯಾಗ್ರಹದ ಮೂಲಕ ಬ್ರಿಟಿಶರಲ್ಲಿಯ ಮಾನುಷ್ಯತ್ವವನ್ನು ಮನ್ನಿಸಿ ಅದನ್ನು ಅನುಕೂಲವಾಗಿ ಪರಿವರ್ತಿಸ ಹೊರಡಲಿಲ್ಲ.

"ಈಗ ಸ್ವಬುದ್ಧಿಯಿಂದ ಬ್ರಿಟಿಶರು ಹಿಂದುಸ್ಥಾನವನ್ನು ಬಿಟ್ಟು ಹೋಗುತ್ತಿರುವಾಗ ತೋರಿಕೆಯ ಅಹಿಂಸೆಯು ನಿಮಿಷಾರ್ಧದಲ್ಲಿ ಹರಿದು ಚೂರಾಗಿ ಹೋಯಿತು. ನಾವು ಗುಪ್ತವಾಗಿ ಇಟ್ಟುಕೊಂಡಿದ್ದ ಹಿಂಸಾ ಪ್ರವೃತ್ತಿಯು ಹಿಂದೀ ರಾಷ್ಟ್ರೀಯ ಕಾಂಗ್ರೆಸ್ಸು ಹಾಕಿದ ಸಂಯಮದ ಅಜ್ಞೆಯನ್ನು ಮೀರಿ ನಮ್ಮ ಮೇಲೆಯೇ ಈಗ ಹರಿದುಬಿದ್ದಿದೆ ಮತ್ತು ಅಧಿಕಾರವಿತರಣದ ಪ್ರಶ್ನೆ ಬಂದಿರುವಾಗ ನಮ್ಮನ್ನು ಪರಸ್ಪರ ಕತ್ತು ಕುಯ್ಯುವಂತೆ ಮಾಡಿದೆ. ಜಾತೀಯ ಸ್ವರೂಪವನ್ನು ತಾಳಿದ ಈ ಹಿಂಸಾಶಕ್ತಿಯನ್ನು ಈಗ ಹಿಂದುಸ್ಥಾನವು ಉದಾತ್ತ ರೂಪಕ್ಕೆ ತಿರುಗಿಸಲು ಶಕ್ತವಾದರೆ, ಅದಕ್ಕೆ ಶಾಂತಿ ಮಾರ್ಗದ ರಚನಾತ್ಮಕ ಸ್ವರೂಪ ಕೊಡಲು ಸಮರ್ಥವಾದರೆ ಅದರಿಂದ ಪರಸ್ಪರ ಹಿತಸಂಬಂಧದ ಬಗ್ಗೆ ಬರುವ ಭಿನ್ನಾಭಿಪ್ರಾಯಗಳು ಕರಗಿ ನಶಿಸಿ ಹೋಗುವುದು— ಅದೊಂದು ಮಹಾದಿನವೆಂದೇ ನಾವು ನಿಜವಾಗಿ ತಿಳಿಯಬಹುದು.

"ಹಿಂದುಸ್ಥಾನದ ಅಹಿಂಸಾತ್ಮಕ ಅಸಹಕಾರವೆಂಬುದು ನಿಜವಾಗಿಯೂ ಅಹಿಂಸಾತ್ಮಕವಿಲ್ಲವೆಂದು ನನಗೆ ಹಲ ಆಂಗ್ಲ ಮಿತ್ರರು ಎಚ್ಚರಿಕೆ ಕೊಟ್ಟಿದು ಶತ್ರುವನ್ನು ಎಂದು ಬಲಾತ್ಕರಿಸದ, ಕೇವಲ ಸ್ವಭಾವ ಪರಿವರ್ತನ ಗೊಳಿಸುವ, ಹಿತಗಳಲ್ಲಿ ದ್ವಂದ್ವ ಉಂಟಾದಾಗ ಕೂಡ ಮಾನವ ಕುಲ ಒಂದು ಮತ್ತು ಎಲ್ಲರೂ ಸಹೋದರರು ಎಂಬ ಬುದ್ಧಿಯನ್ನು ಬಿಡದ ಧೀರ ಹೃದಯದವರ ಅಹಿಂಸೆ ಅದಾಗಿರಲಿಲ್ಲ; ಅದು ದುರ್ಬಲರ ನಿಷ್ಕ್ರಿಯತ್ವವೇ ಆಗಿತ್ತು.

"ಮೇಲಿನ ಮಾತು ನಿಜ; ನಾನು ಇಲ್ಲಿಯವರೆಗೂ ಭ್ರಾಂತಿಯಲ್ಲೇ ಮುಳುಗುತ್ತ ಬಂದೆ. ಆದರೆ ನಾನು ಆ ಬಗ್ಗೆ ಎಂದೆಂದೂ ಪಶ್ಚಾತ್ತಾಪ ಪಡುವದವನಲ್ಲ. ನನ್ನ ದರ್ಶನವು ಆ ಭ್ರಾಂತಿಯಿಂದ ಪ್ರಚ್ಛನ್ನವಾಗಿರದಿದ್ದರೆ ಭಾರತವು ಇಂದು ಬಂದು ಮುಟ್ಟಿದ ಸ್ಥಿತಿಗೆ ಬಂದು ಮುಟ್ಟಲು ಶಕ್ತವಾಗುತ್ತಿದ್ದಿಲ್ಲ.

"ಭಾರತವಿಂದು ಸ್ವತಂತ್ರವಾಗಿದೆ; ಆದರೆ ನಿಜತ್ವವಿಂದು ಸ್ಪಷ್ಟವಾಗಿ ನನಗೆ ಕಾಣುತ್ತದೆ. ದಮನಕ ಹೊರೆಯಿನ್ನೀಗ ಕೆಳಗಿಳಿಸಲಾಗಿರುವದರಿಂದ ಒಂದೇ ಜನತೆಯ ೨ ಪಕ್ಷಗಳಲ್ಲಾಗಲಿ, ಎರಡು ರಾಷ್ಟ್ರಗಳ ನಡುವೆಯಾಗಲಿ ಇರುವ ಮಾನವ್ಯ ವಿರೋಧಗಳನ್ನು ಪರಿಹರಿಸಲು ರೂಢಿಯ ಹಿಂಸಾ ಪದ್ಧತಿಯನ್ನು ಬಿಟ್ಟುಕೊಟ್ಟು ನಾವು ನಮ್ಮ ನಾಡನ್ನು ಕಟ್ಟಲು ಎಲ್ಲ ಸತ್ಪ್ರವೃತ್ತಿಗಳನ್ನೂ ಸದ್ಯಃ ಒಟ್ಟುಗೂಡಿಸಬೇಕಾಗಿದೆ. ಈಗಲಾದರೂ ಎರಡು ರಾಷ್ಟ್ರಗಳ ಉದಯವು ಜಗತ್ತಿಗೆ ಎಂದೂ ಹಾನಿಕರವೆನಿಸದೆ, ಮಾನವಕುಲಕ್ಕೆ ಒಂದು ವರಪ್ರದಾನವೆಂದೆನಿಸುವ ರೀತಿಯಲ್ಲಿ ಭಾರತವು ಜಗತ್ತಿನ ನಿರ್ವರ್ತನಕ್ಕೆ ತಂದುಕೊಡುವುದೆಂದು ನನ್ನ ಭರವಸೆಯಿದೆ. ತನ್ನ ಸ್ವಾತಂತ್ರ್ಯವು ಸಾರ್ಥಕವೆನಿಸಬೇಕಾದರೆ ಭಾರತವು ಸಾಮೂಹಿಕ ಮತಭೇದವನ್ನು ನಿರಾಸಗೊಳಿಸಲು ಅಹಿಂಸಾಸಾಧನವನ್ನು ಪೂರ್ಣವಾಗಿ ಸಜ್ಜುಗೊಳಿಸುವುದು ಭಾರತದ ಕರ್ತವ್ಯ."

—ಎನ್. ಕೆ. ಬೋಸ್

## ಆಹಾರ ಪರಿಸ್ಥಿತಿ

ಮುಂಬಯಿಯ ಸುಗ್ಗಿಯಲ್ಲಿ ನೂರಕ್ಕೆ ೩೩ ರಷ್ಟು ಮಾತ್ರ ಭತ್ತವು ದೊರೆಯಬಹುದೆಂದು ದಿಲ್ಲಿಯಲ್ಲಿ ಸೇರಿದ ಆಹಾರ ಅಧಿಕಾರಿಗಳ ಸಭೆಯ ಪರಿಷತ್ತಿನಲ್ಲಿ ಹೇಳಲಾಗಿತ್ತು. ಉತ್ತಮ ಮಳೆಯಾದ ಕೆಲವೊಂದು ಭಾಗಗಳಲ್ಲಿ ಪರಿಸ್ಥಿತಿ ಸುಧಾರಿಸಬಹುದಾದರೂ ಒಟ್ಟಿನಮೇಲೆ ಕೊರತೆಯು ವಿಚಾರಾರ್ಹವಿದೆ. ಏನೇ ಆದರೂ ದೇಶದ ಆಹಾರ ಪರಿಸ್ಥಿತಿಯು ಕಡೆಗೆ ಚೆನ್ನಾಗಿ ಲಕ್ಷ್ಯಹಾಕುವದವಶ್ಯವಿದೆ. ಹಿಂದುಸ್ಥಾನವು ಪರದೇಶಗಳಿಂದ ಸಾವಿರಾರು ಟನ್ನು ಆಹಾರವನ್ನು ತರಿಸುತ್ತಿದೆ. ಇದರಿಂದ ಕೃಷಿಪ್ರಧಾನ ದೇಶದ ಬಣ್ಣವು ಹೊರದೀಳುತ್ತದೆ. ಹಿಂದುಸ್ಥಾನವು ಈಗ ಬ್ರಿಟಿಶರ ಆಳಿಕೆಯಿಂದ ಮುಕ್ತವಾಗಿದೆ ಮತ್ತು ಶೀಘ್ರದಲ್ಲಿಯೇ ಜನಸಾಮಾನ್ಯರ ಅಭಿಪ್ರಾಯಕ್ಕನುಗುಣವಾಗಿ ನಡೆಯುವ ಕೇಂದ್ರ ಸರಕಾರದಿಂದ ಯುಕ್ತವಾದ ಸ್ವರಾಜ್ಯವನ್ನು ಪಡೆಯಲಿದೆ. ತನ್ನ ಅವಶ್ಯಕತೆಗಳ ಸಲುವಾಗಿ ಬೇರೆ ದೇಶಗಳ ಮೇಲೆ ಅವಲಂಬಿಸುವ ರಾಷ್ಟ್ರವು ಸ್ವರಾಜ್ಯವನ್ನು ಎಂತು ಪಡೆಯುವದು? ಅದ್ದರಿಂದ ಹಿಂದುಸ್ಥಾನವು ಆಹಾರದ ವಿಷಯದಲ್ಲಿ ಸ್ವಾವಲಂಬಿಯಾಗುವಂತೆ ನಾವು ಶಕ್ತಿಮೀರಿ ಪ್ರಯತ್ನಿಸಬೇಕು.

ಅನೇಕ ಕಷ್ಟನಷ್ಟಗಳನ್ನು ಅನುಭವಿಸಿದ ಬಳಿಕ ಯುರೋಪಿಯನ್ನ ರಾಷ್ಟ್ರಗಳಿಗೆ ದೂರದೇಶಗಳ ಮೇಲೆ ಆಹಾರದ ಸಲುವಾಗಿ ಅವಲಂಬಿಸುವದು ಎಷ್ಟು ಗಂಡಾಂತರದ ಕೆಲಸವಾಗಿದೆಂಬುದು ಈಗ ತಿಳಿದು ಬರುತ್ತಿದೆ. ಆಹಾರದ ಸಲುವಾಗಿ ಇಲ್ಲಿಯವರೆಗೆ ಪರದೇಶಗಳ ಮೇಲೆಯೇ ಅವಲಂಬಿಸುತ್ತ ಬಂದ ಇಂಗ್ಲಂಡಕ್ಕೆ ಕೂಡ ಈಗ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಬೇಕಾದರೆ ಆಹಾರದ ಸಲುವಾಗಿ ಪರಾವಲಂಬಿಯಾಗುವದು ವ್ಯರ್ಥವೆಂದು ಮನದಟ್ಟಾಗಿದೆ. ಮತ್ತು ಇದಕ್ಕಾಗಿಯೇ ಅವರು ತಮ್ಮ ಭೂಮಿಯ ಹುಟ್ಟುವಳಿಯನ್ನು ಹೆಚ್ಚಿಸಲು ಅವರು ಹೊಸ ಒಕ್ಕಲತನ ಯೋಜನೆಗಳನ್ನು ಅಮಲಿನಲ್ಲಿ ತರುತ್ತಿದ್ದಾರೆ. ಬ್ರಿಟಿಶ ಸರಕಾರದ ಯೋಜನೆಯ ಮುಖ್ಯಾಂಶವೆಂದರೆ ಮಾಂಸ, ತತ್ತಿ, ಗೋದಿ ಮತ್ತು ಬಾರ್ಲಿ ಇವುಗಳ ಉತ್ಪಾದನೆಯನ್ನು ಹೆಚ್ಚಿಸುವದು ಮತ್ತು ೪೦೦,೦೦೦ ಎಕರೆಗಿಂತ ಹೆಚ್ಚಿನ ಭೂಮಿಯಲ್ಲಿ ಅಗಸೆಯನ್ನು ಬೆಳೆಯುವದು ಎಂದು ಇಂಗ್ಲಂಡದ ಒಕ್ಕಲತನ ಮಂತ್ರಿಗಳಾದ ಟಾಮ ವಿಲಿಯಮ್ಸರು ಹೇಳಿದ್ದಾರೆ. ಮುಂದಿನ ವರ್ಷ ಅವರು ಗೋದಿಯ ಕ್ಷೇತ್ರವನ್ನು ೫೦೦,೦೦೦ ಎಕರೆಯಷ್ಟು ಹೆಚ್ಚಿಸಲಿದ್ದಾರೆ. ಇದನ್ನು ಸಾಧಿಸಬೇಕಾದರೆ ಆ ಸರಕಾರದವರು ಒಕ್ಕಲಿಗರಿಗೆ ಅವರ ಹುಟ್ಟುವಳಿಯ ಮಾರಾಟದ, ಹೆಚ್ಚಿನ ದರಗಳ, ಧನಸಹಾಯದ ಆಶ್ವಾಸನ ಕೊಟ್ಟಿದ್ದಾರೆ. ಮನೆ ಕಟ್ಟುವ ಕಾರ್ಯ ಮತ್ತು ಇನ್ನಿತರ ಸಹಾಯಕ್ಕಾಗಿ ಉದ್ದಿಮೆದಾರರು ಪ್ರಾಶಸ್ತ್ಯವನ್ನು ಕೊಡಬೇಕಾಗಿಯೂ ಹೇಳಿದ್ದಾರೆ.

ಇಂಗ್ಲಂಡದಂಥ ಔದ್ಯೋಗೀಕರಣದ ಉಚ್ಚಾಂಕವನ್ನು ಮುಟ್ಟಿದ ರಾಷ್ಟ್ರವು ತನ್ನ ಸರಕುಗಳನ್ನು ಪರದೇಶಗಳಿಗೆ ಮಾರಿ ಅವುಗಳ ಬದಲು ಆಹಾರವನ್ನು ದೊರಕಿಸಿಕೊಂಡರೆ ಚಂದ ಕಾಣಬಹುದು. ಭೀಕರ ಪರಿಸ್ಥಿತಿಯನ್ನು ಎದುರಿಸಬೇಕಾದರೂ ಅವನ್ನು ಲೆಕ್ಕಿಸದೆ ಇಂಗ್ಲಂಡವು ಬಿಟ್ಟರೆನಡೆಯುವಂಥ ಸರಕುಗಳ ಆಯಾತವನ್ನು ಕಟ್ಟುಮಾಡದೆ ಮತ್ತು ಸ್ವದೇಶದಲ್ಲಿಯೇ ಕೊರತೆಯಾದರೂ ಲೆಕ್ಕಿಸದೆ ಬಟ್ಟೆಯನ್ನು ಪರದೇಶಕ್ಕೆ ಕಳುಹುವ ಮನಸ್ಸು ಮಾಡಿದೆ. ಈ ವಿಷಯದಲ್ಲಿ ಇಂಗ್ಲಂಡದ ಮಂತ್ರಿಗಳು ಗಟ್ಟಿಮನಸ್ಸಿನಿಂದ ನಡೆಸಿದ ಪ್ರಯತ್ನಕ್ಕೂ ಮತ್ತು ನಮ್ಮ ಸರಕಾರಗಳು ನಡೆಸಿದ ಕೇವಲ ಪ್ರಚಾರಕ್ಕೂ

—೧೧ನೇ ಪುಟಕ್ಕೆ

# ಗಾಂಧೀಜಿಯ ಭಾಷಣಗಳ ಸಾರ

( ೮ ನೇ ಪುಟದಿಂದ )

## ಪ್ರಾಂತೀಯತೆಯ ಅಪಾಯ

ಅನಂತರ ಪ್ರಾಂತಗಳನ್ನು ಪ್ರವೇಶಿಸಿ ಅಂಟಿಕೊಳ್ಳುತ್ತಿರುವ ಪ್ರಾಂತೀಯತೆಯ ಕಡೆಗೆ ಗಾಂಧೀಜಿ ಗಮನ ಸೆಳೆದರು.

"ಅಸಾಮವು ಕೇವಲ ಅಸಾಮಿಗಳಿಗೆ ಸೇರಿದ್ದೆಂದು ಹೇಳುವುದನ್ನು ನಾನು ಪತ್ರಿಕೆಗಳಲ್ಲಿ ನೋಡಿದೆ. ಪ್ರತಿಯೊಂದು ಪ್ರಾಂತದಲ್ಲೂ ಆ ಭಾವನೆ ಹೊಕ್ಕರೆ ಹಿಂದುಸ್ತಾನವು ಯಾರದ್ದಾಗಬೇಕು ? ಎಲ್ಲ ಪ್ರಾಂತಗಳ ಜನರೂ ಭಾರತಕ್ಕೆ ಸೇರಿದವರು. ಮತ್ತು ಭಾರತವು ಎಲ್ಲರಿಗೂ ಸೇರಿದ್ದೆಂದು ನನ್ನ ಮತ. ಒಂದೇ ಒಂದು ಕಾರಣವೆಂದರೆ ಯಾರೂ ಒಂದು ಪ್ರಾಂತದಿಂದ ಮತ್ತೊಂದಕ್ಕೆ ಅದನ್ನು ಸ್ವಾರ್ಥಕ್ಕಾಗಿ ಬಳಸಲೆಂದಾಗಲಿ ಆಳಲೆಂದಾಗಲಿ, ಅದರ ಹಿತವನ್ನು ಹಾಳುಮಾಡಲೆಂದಾಗಲಿ ಹೋಗಬಾರದು. ಎಲ್ಲರೂ ಭಾರತದ ಸೇವಕರು ಮತ್ತು ಅವರು ಸೇವಾ ಭಾವದಲ್ಲಿಯೇ ಬದುಕಿದ್ದಾರೆ. ಅದೇ ತರಹದ ದುರ್ಭಾವನೆಯನ್ನು ಬಂಗಾಲಿಗಳ ವಿರುದ್ಧ ಬಿಹಾರಿಗಳು ತಳೆದಿದ್ದಾರೆಂದು ಹೇಳಲಾಗಿದೆ. ಅದರ ಅತಿ ಹೆಚ್ಚಿನ ಸ್ಥಿತಿಯನ್ನು ಡಾರ್ಜಲಿಂಗಿನಿಂದ ಕೇಳಿದೆ. ಮೈದಾನದ ನಿವಾಸಿಗಳನ್ನು ಡಾರ್ಜಲಿಂಗಿನಲ್ಲಿ ಪ್ರವೇಶಮಾಡಗೊಡದಿರುವದನ್ನೆ ಮುಖ್ಯ ಕೆಲಸವಾಗಿಟ್ಟುಕೊಂಡ ಗೂರ್ಖರ ಸಂಘವೊಂದು ಅಲ್ಲಿದೆಯಂತೆ. ತಮ್ಮ ಉದ್ದೇಶ ಸಾಧನೆಗಾಗಿ ಅವರು ಬಲಪ್ರಯೋಗ ಮಾಡುತ್ತಿದ್ದಾರೆಂದು ತಿಳಿದು ಬಂದಿದೆ. ಆ ವಿಷವು ಕೆಲವೇ ಬುದ್ಧಿಹೀನರಾದ ದೇಶಪ್ರೇಮವಿಲ್ಲದ ತರುಣರಲ್ಲಿ ಮಾತ್ರ ಇದೆಯೆಂದು ನಾನು ತಿಳಿಯುತ್ತೇನೆ. ತಾವು ಹಿಂದುಸ್ತಾನದ ಭಾಗದವರೆಂದು ಹೆಮ್ಮೆ ಪಡುವ ಪ್ರಸಿದ್ಧ ಗೂರ್ಖ ಅಧಿಕಾರಿಗಳನ್ನು ಕಂಡಿದ್ದೇನೆ. ಸಾತ್ವಿಕ ಮಾರ್ಗವನ್ನು ನಾನು ಎಲ್ಲರಿಗೂ ಸಿಗುವಂತೆ ಮಾಡಿದ್ದೇನೆ; ಯಾರೇ ಆಗಲಿ, ಒಂದು ಪ್ರಾಂತವನ್ನು ಹಾಳು ಮಾಡಲು ಅದನ್ನು ಪ್ರವೇಶಿಸಬಾರದು. ಮತ್ತು ತನ್ನ ಉದ್ದೇಶ ಸಾಧನೆಗೆ ಎಂದೂ ಬಲ ಪ್ರಯೋಗ ಮಾಡಬಾರದು.

ಕಲಕತ್ತ ೨೭—೮—೪೭

"ಮೇಟಿಯಾ ಬುರ್ಜಗೆ ನಾನು ಬರುವುದು ಈಗ ಎರಡನೆಯ ಸಲ. ಹಿಂದು-ಮುಸ್ಲಿಂ ಕೂಲಿಕಾರರಲ್ಲಿ ಕಲಹವೊಂದು ನಡೆದಿದ್ದು ಆ ಸಂಬಂಧದಲ್ಲಿ ನಾನೂ ಮೌಲಾನಾ ಅಬ್ದುಲ್ ಕಲಾಂ ಅಜಾದರೂ ಬಹಳ ವರುಷಗಳ ಹಿಂದೆ ಭೆಟ್ಟಿಯಿತ್ತೆವು. ಸುದೈವದಿಂದ ಕಲಹಕಾಂಡ ಆಗಲೇ ಕೊನೆಗಂಡಿತು ಮತ್ತು ಅನರ್ಹರಾಗಿದ್ದರೂ ನಮಗೆ ಅದರ ಬಗ್ಗೆ ಶಹಭಾಸಗಿರಿದೊರೆಯಿತು. ಇದೊಂದು ಸಂತೋಷದ ಸಂದರ್ಭ. ಹಿಂದು ಮುಸ್ಲಿಮರು ತಮ್ಮ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಂಡು ಗೆಳೆತನದಿಂದಿದ್ದಾರೆ. ಇದು ಚಿರಸ್ಥಾಯಿಯಾಗಲೆಂದು ಹಾರೈಸುತ್ತೇನೆ. ಕೂಲಿಕಾರ ವಸತಿ ಪ್ರದೇಶದಲ್ಲಿಯ ಕೂಲಿಕಾರರಿಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಕಾಯಕಷ್ಟದಲ್ಲಿ ಹಿಂದು ಮುಸ್ಲಿಮರಲ್ಲಿ ಭೇದವಿಲ್ಲೆಂದು ನಾನು ತಿಳಿಯುತ್ತೇನೆ. ಅವರೆಲ್ಲರೂ ಕೂಲಿಕಾರರೇ. ಜಾತೀಯ ಭೂತವು ಅವರಿಗೆ ಹಿಡಿದರೆ ಅವರು ತಮ್ಮನ್ನೂ ದೇಶವನ್ನೂ ದುರ್ಬಲಗೊಳಿಸುತ್ತಾರೆ. ಶ್ರಮವೆಂಬುದು ಎಲ್ಲ ವಿಧದ ಭೇದಗಳನ್ನೂ ಸಮಗೊಳಿಸುವಂಥದು. ಈ ಸತ್ಯವನ್ನು ಅವರು ಅರಿತು ಅವರು ಮತ್ತೂ ಒಂದು ಹೆಜ್ಜೆ ಮುಂದೆ ಹೋಗಬೇಕೆಂದು ನಾನು ಹೇಳುತ್ತೇನೆ. ಬುದ್ಧಿಹೀನರಾಗಿ ಉಳಿಯಬಯಸಿದುದರಿಂದ ಕೂಲಿಕಾರ ವರ್ಗವು ಒಂದೇ ದಾಸ್ಯದಲ್ಲುಳಿಯುವಂತಾಯಿತು ಇಲ್ಲವೆ ಬಂಡವಲಿಗರ ಯಂತ್ರಾದಿ ಸಾಮಾನು ಸರಕುಗಳನ್ನು ಹಾಳುಮಾಡುವುದರಲ್ಲಿ ಮತ್ತು ಕೆಲವೆಡೆ ಅವರನ್ನು ಕೊಂದು ಕೂಗುವುದರಲ್ಲಿ ದುರಹಂಕಾರದಿಂದ ನಂಬಿಗೆಯಿಡುವಂತಾಯಿತು. ಸಾಮ್ಯವಾದ ಭಂಗಿ ಹಾಗೂ ಕೂಲಿಕಾರನೆಂದು ನನ್ನ ಸಿದ್ಧಾಂತ. ಆದುದರಿಂದ ನನ್ನ ಹಾಗೂ ಕೂಲಿಕಾರರ ಹಿತಗಳು ಒಂದೇ. ಹಾಗಿದ್ದುದರಿಂದ ಹಿಂಸೆಯೆಂದೂ ಕೂಲಿಕಾರರನ್ನು ಕೆಡಿಸದೆಂದು ನಾನು ಹೇಳಬಯಸುತ್ತೇನೆ. ಅವರು ಹಿಂಸಾ ಪ್ರವೃತ್ತರಾದರೆ ಚಿನ್ನದ ತತ್ತಿಯಿಡುವ ಕೋಳಿಯನ್ನು ಕೊಂದಂತಾಗುತ್ತದೆ.

ಶ್ರಮವು ಯಾವಾಗಲೂ ಬಂಡವಲಕ್ಕಿಂತ ಶ್ರೇಷ್ಠವೆಂದು ನಾನು ಎಂದಿನಿಂದಲೂ ಹೇಳುತ್ತ ಬಂದಿದ್ದೇನೆ. ಕೂಲಿ ಕಾರರಿಲ್ಲದೆ (ಶ್ರಮವಿಲ್ಲದೆ) ಚಿನ್ನ, ಬೆಳ್ಳಿ ಮತ್ತು ತಾಮ್ರಗಳು ಅಪ್ರಯೋಜಕವಾದ ಹೊರೆಯೆನಿಸುವುವು. ಭೂಗರ್ಭದಾಳದಿಂದ ಅದಿರುಗಳನ್ನು ಅಗೆದು ತೆಗೆದುದು ಕೂಲಿಕಾರನೇ. ಲೋಹಾದಿಗಳಿಲ್ಲದೆ ಕೂಲಿಕಾರನಿರುವುದನ್ನು ನಾನು ಬಲ್ಲೆ. ಶ್ರಮವು ಅಮೂಲ್ಯವಾದುದು, ಚಿನ್ನವಲ್ಲ. ಬಂಡವಾಲಿಗರು ಮತ್ತು ಕೂಲಿಕಾರರಲ್ಲಿ ಅಂತರ್ವರ್ಗದ ಮದುವೆಗಳಾಗಬೇಕು. ಸಹಕಾರದಿಂದ ಅವರು ಅದ್ಭುತವನ್ನೇ ಮಾಡಿತೋರಿಸಬಲ್ಲರು. ಕೂಲಿಕಾರರು ಬುದ್ಧಿವಂತರಾದರೆ, ತಮ್ಮ ತಮ್ಮಲ್ಲೇ ಸಹಕರಿಸಿ ಅನಂತರ ಗೌರವಯುತವಾದ ಸಮಾನಸ್ಕಂಧತೆಯಿಂದ ಬಂಡವಾಲಿಗರೊಡನೆ ಸಹಕರಿಸಬಲ್ಲರಾದರೆ ಅದು ಸಾಧ್ಯವಾದೀತು. ಸಂಯೋಜಿಸುವ ಕಲೆ ತಿಳಿದಿರುವದರಿಂದ ಬಂಡವಾಲಿಗರು ಕೂಲಿಕಾರರನ್ನು ಹಿಡಿತದಲ್ಲಿಡಬಲ್ಲವರಾದರು. ವಿಭಕ್ತ ತುಂತುರುಗಳು ಆವಿಯಾಗಿ ಹೋಗುವವು; ಸಂಯುಕ್ತ ತುಷಾರಗಳು ಸಾಗರವಾಗಿ ಜಗತ್ಪ್ರಲಯವನ್ನೇ ವ್ಯಾಪಿಸಬಲ್ಲವು. ಹಾಗೇ ಜಗತ್ತಿನ ಒಂದು ಭಾಗದಲ್ಲಿ ಎಲ್ಲ ಕೂಲಿಕಾರರೂ ಒಂದಾದರೆ ಹೆಚ್ಚಿಗೆ ಸಂಬಳದಾಶೆತೋರಿಸಿ ಅವರನ್ನು ಆಕರ್ಷಿಸಲು ಸಾಧ್ಯವಿಲ್ಲ. ಇಲ್ಲದೆ ಅಸಹಾಯರಾಗಿ ಒಂದು ತುತ್ತಿಗೆ ಹೊಟ್ಟೆ ಬಡಿದು ಬೇಡುವಂತಾಗುವುದೂ ಸಾಧ್ಯವಿಲ್ಲ. ನಿಜವಾದ ಅಹಿಂಸಾತ್ಮಕ ಸಂಘಟನೆಯಿದ್ದ ಒಂದು ಕೂಲಿಕಾರ ಸಂಗಡವು ಲೋಹ ಚುಂಬಕದಂತೆ ತನಗೆ ಬೇಕಾದ ಬಂಡವಾಲವನ್ನು ತನ್ನೆಡೆಗೆಳೆದುಕೊಳ್ಳಬಲ್ಲುದು. ಆಗ ಬಂಡವಾಲಿಗರು ಕೇವಲ ಪಾಲಕರಾಗಿ ಉಳಿಯುವರು. ಅಂತಹ ಸುಖದ ದಿನ ಮೂಡಿತೆಂದರೆ ಆಗ ಬಂಡವಾಲಿಗರಿಗೂ ಕೂಲಿಕಾರರಿಗೂ ಏನೂ ಭೇದವಿರಲಾರದು. ಆಗ ಕೂಲಿಕಾರರಿಗೆ ಬೇಕಾದಷ್ಟು ಆಹಾರ, ಒಳ್ಳೆಯ ಆರೋಗ್ಯಕರವಾದ ವಸತಿ, ಮಕ್ಕಳಿಗೆ ಅಗತ್ಯವಾದ ಸರ್ವವಿದ್ಯಾಭ್ಯಾಸ ಸೌಕರ್ಯ, ತಮ್ಮ ಓದಿಗಾಗಿ ಅನರ್ಘ ವಿರಾಮ ಮತ್ತು ಯುಕ್ತವಾದ ವೈದ್ಯಕೀಯ ಸಹಾಯ ಒದಗುವಂತಾಗುತ್ತದೆ.

## ರಾಷ್ಟ್ರೀಯ ಮುಸಲಮಾನರು

ಕೆಳಗಿನ ಚೀಟಿಯನ್ನು ಕಳುಹಿದ್ದ ರಾಷ್ಟ್ರೀಯ ಮುಸ್ಲಿಮರತ್ತ ಗಾಂಧೀಜಿ ಅನಂತರ ಹೊರಳಿದರು:

"ರಾಷ್ಟ್ರೀಯ ಮುಸ್ಲಿಮರು ಲೀಗನ್ನು ಸೇರಬೇಕೆಂದು ನೀವು ಅಭಿಪ್ರಾಯಪಟ್ಟಿದ್ದೀರಿ ಹಾಗಾದರೆ ಕಾಂಗ್ರೆಸ್ಸೆಂಬುದೀಗ ಒಂದು ಜಾತೀಯ ಸಂಸ್ಥೆಯಾಗಿ ಹೋಯಿತೆ ? "

ಗಾಂಧೀಜಿಯೆಂದರು:—

"ನಾನು ನೀವು ರಾಷ್ಟ್ರೀಯತೆಯನ್ನು ಬಿಡಬೇಕೆಂದು ಹೇಳುವುದಿಲ್ಲ ಇಲ್ಲವೆ ಕಾಂಗ್ರೆಸ್ಸು ಮತ್ತೊಂದು ಹಿಂದು ಮಹಾಸಭೆಯಾಗಬೇಕೆಂದು ನಿರೀಕ್ಷಿಸುವುದಿಲ್ಲ. ಜಾತೀಯ ಸಂಸ್ಥೆಯೆನಿಸಿ ಕಾಂಗ್ರೆಸ್ಸು ಅಸ್ತಿತ್ವಕ್ಕೆ ಉಳಿದುಕೊಳ್ಳಲಾರದೆಂದು ನನಗೆ ಭರವಸೆಯಿದೆ. ಲಕ್ಷಾಧಿಕಾರಿಯಾಗಲಿ ಭಿಕ್ಷಾಧಿಕಾರಿಯಾಗಲಿ ಹಿಂದುವಾಗಲಿ ಮುಸಲಮಾನನಾಗಲಿ—ತಾವು ಭಾರತೀಯರೆಂದು ಹೆಮ್ಮೆಯಿಂದ ಹೇಳಿಕೊಳ್ಳುವ ಎಲ್ಲರನ್ನೂ ಪ್ರತಿನಿಧಿಸುವುದನ್ನು ಕಾಂಗ್ರೆಸ್ಸು ಬಿಟ್ಟಾಕ್ಷಣ್ವ ಅದು ತನ್ನನ್ನೆ ತಾನು ನಾಶಮಾಡಿಕೊಂಡತಾಗುತ್ತದೆ. ಆದುದರಿಂದ ಲೀಗನ್ನು ಸೇರುವುದಕ್ಕೆ ಕಾಂಗ್ರೆಸ್ಸಿನ ಸದಸ್ಯತ್ವವನ್ನು ಬಿಟ್ಟುಕೊಡುವ ಕರಾರಿದ್ದರೆ ನಾನು ಯಾವ ಮುಸ್ಲಿಂ ಕಾಂಗ್ರೆಸ್ಸಿಗನಿಗೂ ಲೀಗನ್ನು ಸೇರೆಂದು ಹೇಳಲಾರೆ. ಜನಾಂಗದ ಹಿತಕ್ಕಾಗಿರುವ ಲೀಗಿನ ಠರಾವುಗಳಿಗೆ ಬೆಂಬಲಕೊಡುತ್ತೇನೆ; ತದ್ವಿರುದ್ಧವಾದವುಗಳಿಗೆ ಎಂದೂ ಬೆಂಬಲಕೊಡಲಾರೆನು. ನನ್ನ ಹತ್ತಿರ ಕಾಂಗ್ರೆಸ್ಸಿನಲ್ಲಾಗಲಿ ಲೀಗಿನಲ್ಲಾಗಲಿ ಇಲ್ಲದ ಅನೇಕ ಮನಸಾ ದೃಢಶ್ರದ್ಧೆಯುಳ್ಳ ಮುಸಲಮಾನರಿದ್ದಾರೆ.

ಮುಸಲ್ಮಾನ ನೆರವಿಯಲ್ಲಿ ಪರಿಣಾಮವುಂಟು ಮಾಡಬೇಕೆಂದಿದ್ದರೆ ನಾನು ರಾಷ್ಟ್ರೀಯ ಮುಸ್ಲಿಮರಿಗೆ ಲೀಗನ್ನು ಸೇರಿರೆಂದು ಬುದ್ಧಿ ಹೇಳುತ್ತೇನೆ. ನಿಜವಾದ ರಾಷ್ಟ್ರೀಯತಾವಾದಿಗಳಿಗೆ ನನ್ನ ಅಥವಾ ಪ್ರೆಸ್ಸಿತರರ ಪ್ರೋತ್ಸಾಹ ಬೇಕಾಗಿಲ್ಲ. ಒಳ್ಳೆಯ ನಡತೆಯಂತೆ ರಾಷ್ಟ್ರೀಯತೆಯು ತನಗೆ ತಾನೇ ಒಂದು ಬಹುಮಾನವಾಗಬಲ್ಲುದು. ಈ ಅಥವಾ ಆ ಸಂಘವನ್ನು ಐಹಿಕ ಸಂಪದಭಿವೃದ್ಧಿ ಮಾಡಿಕೊಳ್ಳಲು ಇಲ್ಲವೆ ಅಧಿಕಾರ ಸಂಪಾದಿಸಲು ಅವರು ಸೇರಬಾರದೆಂದು ನಾನು ಎಚ್ಚರಿಕೆ ಕೊಡುತ್ತೇನೆ. ರಾಷ್ಟ್ರೀಯತಾವಾದಿಯು ಯಾವಾಗಲೂ ಸೇವೆ ಮಾಡುವುದನ್ನೇ ವಿಚಾರದಲ್ಲಿಟ್ಟುಕೊಳ್ಳಬೇಕು. ಅವನು ಅಧಿಕಾರ ಇಲ್ಲವೆ ಐಶ್ವರ್ಯವನ್ನು ಅಪೇಕ್ಷಿಸಬಾರದು. ಕಾಂಗ್ರೆಸ್ ಇಲ್ಲವೆ ಲೀಗಿಗೆ ಒಬ್ಬ ಅಧ್ಯಕ್ಷನು ಇರಬಲ್ಲನು. ಸೇವಾ ಸಾಮರ್ಥ್ಯದಿಂದ ಹಾಗೂ ಗುಣಗೌರವದಿಂದ ಅಧ್ಯಕ್ಷತೆ ಬರುತ್ತದೆ. ಲೀಗು ಈಗ ಇರುವಂತಾದುದು ಲೀಗಿನ ಅಥವಾ ಕಾಂಗ್ರೆಸ್ಸಿನಸ್ತಿತ್ವದಿಂದಲ್ಲ. ಕಾಯದೆ ಆಜಮರು ಐಶ್ವರ್ಯ ಇಲ್ಲವೆ ಬಿರುದುಬಾವಲಿಗಳಿಂದ ಕೊಳ್ಳಲಾರದ ದಕ್ಷ ಅಧ್ಯಕ್ಷರು. ಅವರು ಪ್ರಥಮ ಶ್ರೇಣಿಯ ಬ್ಯಾರಿಸ್ಟರು ಹಾಗೂ ಧನಿಕರು. ವರ್ತಕನೊಬ್ಬನ ಮಗನಾಗಿದ್ದುದರಿಂದ ವಕೀಲನಾಗಿ ತಮ್ಮ ಆದಾಯವನ್ನು ಬುದ್ಧಿವಂತಿಕೆಯಿಂದ ವ್ಯಾಪಾರದಲ್ಲಿ ಹಾಕಿ ಹೆಚ್ಚಿಸುವುದು ಹೇಗೆಂದು ಅವರಿಗೆ ಗೊತ್ತು. ಇದರಿಂದ ನಾನು ಅವರ ಎಲ್ಲ ನಡತೆಗಳೂ ಸರಿಯೆಂದಂತಾಗಲಿ ಇಲ್ಲವೆ ಅವರು ಮುಸ್ಲಿಮರನ್ನು ಸರಿಯಾದ ಮಾರ್ಗದಲ್ಲಿ ಒಯ್ದರೆಂದೆನೆಂದಾಗಲಿ ಅರ್ಥಮಾಡಿಕೊಳ್ಳಬಾರದು. ಕಾಯದೆ ಆಜಂ ಮತ್ತು ಲೀಗಿಗರಿಗೂ ನನಗೂ ಭಿನ್ನಾಭಿಪ್ರಾಯಗಳಿದ್ದೇ ಇವೆ. ಯುಕ್ತವಾದಲ್ಲಿ ಗುಣಪ್ರಶಂಸೆ ಮಾಡುವುದನ್ನು ನಾನು ತಡೆಹಿಡಿಯುವವನಲ್ಲ. ನಾನು ಯಾವ ಕರಾರುಗಳ ಮೇಲೆ ಲೀಗನ್ನು ರಾಷ್ಟ್ರೀಯ ಮುಸಲಮಾನರು ಸೇರಬೇಕೆಂದೆನೆಂಬುದು ಈಗ ಸ್ಪಷ್ಟವಾಗಿರಬಹುದೆಂದು ನಂಬುತ್ತೇನೆ.

ಅನಂತರ ಗಾಂಧೀಜಿ ಆಜಾದ ಹಿಂದ ಸೈನ್ಯದ ಕೆಲವು ಸದಸ್ಯರು ಕೇಳಿದ ಪ್ರಶ್ನೆಗಳತ್ತ ಹೊರಳಿದರು. ಆದರೆ ಅಷ್ಟರಲ್ಲಿ ಜಡಿಮಳೆ ಪ್ರಾರಂಭವಾಗಿ ಸಭೆಯಲ್ಲಿ ಅಶಾಂತಿ ತಲೆದೋರಿದ್ದರಿಂದ ಮುಂದಿನ ಸಭೆಗೆ ಆ ಪ್ರಶ್ನೆಗಳನ್ನುತ್ತರಿಸುವುದನ್ನು ಮುಂಬರಿಸಿದರು.

---

## ಮಾಯೆಯೋ ಆಕಸ್ಮಿಕ ಘಟನೆಯೋ ?

( ೭ ನೇ ಪುಟದಿಂದ )

ಮತ್ತು ಇದರಿಂದ ನನಗೆ ಯಾವ ನಷ್ಟವೂ ಸಂಭವಿಸಿಲ್ಲವೆಂದು ನಾನು ಹೇಳಬಲ್ಲೆ. ಮನೆಗಳ ಅಂಗಳಗಳಲ್ಲಿ ಅಸಂಖ್ಯಾತ ಹಿಂದು ಮುಸಲಮಾನರು ತಮ್ಮ ಉತ್ಸ್ಫೂರ್ತಿಯ ಘೋಷವನ್ನು ಮಾಡುತ್ತಲಿದ್ದಾರೆ, ಸಹೋದರ ಭಾವವು ಗಂಟೆ ಗಂಟೆಗೆ ಹೆಚ್ಚುತ್ತ ಹೋಗುತ್ತಿದೆಯೆಂದು ಕೇಳುತ್ತಬಂದಿದ್ದೇನೆ.

ಇದೊಂದು ಮಾಯೆಯೋ ಇಲ್ಲವೆ ಆಕಸ್ಮಿಕ ಘಟನೆಯೋ ಇದನ್ನು ಏನೆಂದೇ ಕರೆಯಲಿ, ಎಲ್ಲ ಕಡೆಯಿಂದಲೂ ಈ ಬಗ್ಗೆ ನನಗೆ ಕೊಡಲಾಗುತ್ತಿರುವ ಶ್ರೇಯಸ್ಸಿಗೆ ನಾನು ಅರ್ಹನಲ್ಲ. ಹಾಗಾದರೆ ಇದರ ಶ್ರೇಯಸ್ಸು ಶಾಹೀದ ಸಾಹೇಬರಿಗೆ ಸಲ್ಲುವುದೆ ? ಅವರಿಗೂ ಈ ಶ್ರೇಯಸ್ಸು ಸಲ್ಲದೆನ್ನುತ್ತೇನೆ. ಏಕಾಏಕಿ ಹೀಗೆ ಎದ್ದ ಕೋಲಾಹಲವು ಒಬ್ಬಿಬ್ಬರ ಕೆಲಸದಿಂದಾದುದಲ್ಲ. ನಾವು ದೇವರ ಕೈಯಲ್ಲಿಯ ಆಟಿಕೆಗಳು ಅವನು ತನ್ನ ರಾಗಾನುಸಾರವಾಗಿ ನಮ್ಮನ್ನು ಕುಣಿಸುವನು. ಆದುದರಿಂದ ಮನುಷ್ಯನು ಮಾಡತಕ್ಕ ಹೆಚ್ಚಿನ ಕರ್ತವ್ಯವೆಂದರೆ, ಈ ನೃತ್ಯವನ್ನು ನಿಲ್ಲಿಸದೆ ತನ್ನ ನಿವಾರ್ಯವಾದ ದೇವನ ಇಚ್ಛೆಗೆ ಸಂಪೂರ್ಣವಿಧೇಯನಾಗಿರುವುದು. ಈ ಪ್ರಕಾರ ವಿಚಾರ ಮಾಡಿದರೆ, ಈ ಮಾಯೆಯಲ್ಲಿ ದೇವರು ನಮ್ಮಿಬ್ಬರನ್ನೂ ಸಾಧನವನ್ನಾಗಿ ಬಳಸಿಕೊಂಡಿದ್ದಾನೆಂದು ಹೇಳಬಹುದು. ಮತ್ತು ನನ್ನ ತಾರುಣ್ಯದ ಕನಸುಗಳು ನನ್ನ ಬಾಳಿನ ಸಂಜೆಯಲ್ಲಿ ಪೂರ್ತಿಗೊಂಡುವವೆಂದು ನಾನು ತಿಳಿಯಲೇ ? ಎಂದು ನಾನು ಇಂದು ಕೇಳಬೇಕಾಗಿದೆ.

ಭಗವಂತನಲ್ಲಿ ಪೂರ್ಣ ಶ್ರದ್ಧೆಯಿಟ್ಟವರಿಗೆ ಇದೊಂದು ಮಾಯೆಯೂ ಅಲ್ಲ, ಆಕಸ್ಮಿಕ ಘಟನೆಯೂ ಅಲ್ಲ. ಘಟನೆಗಳ ಸೂತ್ರಮಾಲಿಕೆಯತ್ತ ಗಮನವಿತ್ತರೆ ಎರಡೂ ಜಾತಿಯ ಜನಗಳಲ್ಲಿ ಈ ಭ್ರಾತೃಭಾವ ಪ್ರಸಾರಕ್ಕೆ ಅವರಿಗೆ ತಿಳಿಯದಂತೆಯೇ ತಯಾರಿ ನಡೆದಿದೆಯೆಂಬುದು ಚೆನ್ನಾಗಿ ಗೊತ್ತಾಗದಿರದು. ಈ ಘಟನೆಯಲ್ಲಿ ನಾವು ಬಂದು ಸೇರಿದುದು ನೋಟಕನಿಗೆ ಈ ಸಂತೋಷಕರವಾದ ಸಂಗತಿಯು ಪೂರ್ತಿಯಾದ ಬಗ್ಗೆ ನಮಗೆ ಶ್ರೇಯಸ್ಸನ್ನು ಸಲ್ಲಿಸಲು ಅವಕಾಶ ಕಲ್ಪಿಸಿ ಕೊಟ್ಟಿತು.

ಅದು ಹೇಗೇ ಇರಲಿ, ಈ ಆನಂದೋನ್ಮಾದವು ನನಗೆ ಖಿಲಾಫತ್ ದಿನಗಳನ್ನು ನೆನಪಿಗೆ ತಂದು ಕೊಡುವುದು. ಒಂದು ಹೊಸ ಅನುಭವವಾಗಿ ಅಂದು ಭ್ರಾತೃಭಾವ ಪ್ರಸರಣವು ಜನತೆಯಲ್ಲಿ ಉದಯಿಸಿತು. ಅದರ ಮೇಲೆ, ಆಗ ನಮಗೆ ಖಿಲಾಫತ್ ಮತ್ತು ಸ್ವರಾಜ್ಯಗಳೆಂಬ ಯಮಳ ಧ್ಯೇಯಗಳಿದ್ದವು. ಇಂದು ನಮಗೆ ಅಂತಹದೇನೂ ಇಲ್ಲ. ನಾವು ಪರಸ್ಪರ ದ್ವೇಷದ ಹಾಲಾಹಲವನ್ನು ಕುಡಿದೆವು; ಅದುದರಿಂದ ಭ್ರಾತೃಭಾವ ಪ್ರಸಾರವು ಮತ್ತಷ್ಟು ಅಮ್ಯಾಯಮಾನವಾಗಿ ರುಚಿಸುತ್ತಿದೆ. ಹಾಗೂ ಆ ಮಾಧುರ್ಯವು ಎಂದೂ ಕಡಿಮೆಯಾಗಬಾರದು.

ಇಂದಿನ ಆನಂದೋನ್ಮಾದದಲ್ಲಿ ಹಿಂದು ಮುಸಲ್ಮಾನರ ಸಂಯುಕ್ತ ಕಂಠದಿಂದ "ಹಿಂದುಸ್ತಾನ ಪಾಕಿಸ್ತಾನಗಳು ದೀರ್ಘಾಯುಗಳಾಗಲಿ" ಎಂಬ ಕೂಗು ಕೇಳಿ ಬರುತ್ತಿದೆ. ಅದು ಯುಕ್ತವಾದುದೆಂದು ನನ್ನ ಮತ. ಒಪ್ಪಂದ ಯಾವುದೇ ಕಾರಣವಿರಲಿ, ಮೂರು ಪಕ್ಷ ಪಾಕಿಸ್ತಾನವನ್ನು ಸ್ವೀಕರಿಸಿದವು. ಹಾಗಾಗಿ ಮೇಲೆ ಇಬ್ಬರು ಒಬ್ಬರೊಬ್ಬರ ಶತ್ರುವಾಗಿದ್ದರೆ—ಇಲ್ಲಿ ಸ್ಪಷ್ಟವಾಗಿ ಅವರು ಆಗಿಲ್ಲ—ಖಂಡಿತವಾಗಿ ಉಕ್ತ ಘೋಷಣೆಯಲ್ಲಿ ಏನೂ ಅರ್ಥವಿ... ನಿಜವಾಗಿ ಇಬ್ಬರೂ ಗೆಳೆಯರಾಗಿದ್ದರೆ ಎರಡು ರಾಜ್ಯಗಳಿಗೂ ದೀರ್ಘಾಯುವನ್ನು ಕೋರಿದ್ದರೆ ಬಹುಶಃ ಅದೊಂದು ಅವಿಧೇಯತೆಯ... ದೀತು. (ಗಾಂಧೀಜಿಯಿಂದ)

ಬೇಲಿಯಾಘಾಟ, ೧೬-೮-೪೭

---

## ಆಹಾರ ಪರಿಸ್ಥಿತಿ

( ೯ ನೇ ಪುಟದಿಂದ )

ಭೂಮ್ಯಾಕಾಶದಷ್ಟು ವ್ಯತ್ಯಾಸವಿದೆ. ಔದ್ಯೋಗಿಕ ಪ್ರಗತಿಯಲ್ಲಿ ಹಿಂದುಸ್ತಾನವನ್ನು ಇಂಗ್ಲಂಡಿನೊಡನೆ ಹೋಲಿಸುವದು ಎಂದೂ ಶಕ್ಯವಿಲ್ಲ. ಆದರೂ ಅಲ್ಪಸ್ವಲ್ಪ ಔದ್ಯೋಗೀಕರಣವಾದರೂ ನಾವು ಆಹಾರದ ಸಲುವಾಗಿ ಬೇರೆ ದೇಶಗಳ ಮೊರೆ... ಯನ್ನು ನೋಡಬೇಕಾಗಿದೆ. ಉಚ್ಚಾಸನದಲ್ಲಿದ್ದ ಕೆಲವು ಮಿತ್ರರು ಹೇಳಿಕೊಡುತ್ತಿರುವ ಔದ್ಯೋಗೀಕರಣದ ಯೋಜನೆಗಳನ್ನು ಸಾ... ಅಮಲಿನಲ್ಲಿ ತಂದರೆ ಆಹಾರ ಪರಿಸ್ಥಿತಿಯ ಮೇಲೆ ಅದರ ದುಷ್ಪರಿಣಾಮವೇನಾಗುವದೆಂಬುದನ್ನು ಊಹಿಸುವದೆ ಒಳ್ಳೇದು ! ಇಂಗ್ಲಂಡಿನಲ್ಲಿ ಇಂದು ಕಣ್ಣು ತುಂಬುವಂಥ ದೃಶ್ಯವೆಂದರೆ ಎಲ್ಲಿ ಶಕ್ಯವಿದೆಯೋ ಅಲ್ಲಲ್ಲೆಲ್ಲ ಕಾಯಿಪಲ್ಯೆಗಳ ಮಡಿಗಳಾಗಿವೆ. ಇಷ್ಟೇ ಅಲ್ಲದೆ ನೂರಾರು ಸಾವಿರ ಎಕರೆ ಹೆಚ್ಚಿನ ಭೂಮಿಯನ್ನು ಅವರು ಸಾಗು ಮಾಡಲಿದ್ದಾರೆ. ನಮ್ಮ ಒಕ್ಕಲತನ ಮಂತ್ರಿಗಳು ಈ ಆದರ್ಶಮಾರ್ಗವನ್ನೇಕೆ ಅನುಸರಿಸಬಾರದು? ಉದ್ಯೋಗದ ಸಲುವಾಗಿ ಕಂಬಾ... ಬೆಳೆಗಳನ್ನು) ತಂಬಾಕು ಹತ್ತಿ ಮೊದಲಾದವುಗಳನ್ನು ) ಬೆಳೆಯುವದನ್ನು ನಿಲ್ಲಿಸಿ ಅವು... ಔದ್ಯೋಗಿಕ ಸುಲಿಗೆಗೆ ಒಳಗಾದ ಭೂಮಿಗಳಲ್ಲಿ ಆಹಾರಧಾನ್ಯ ಬೆಳೆಯುವದಕ್ಕೆ ಪ್ರಾಶಸ್ತ್ಯವನ್ನು ಕೊಡಬಾರದೆ ? ಜನರ ಪ್ರಯತ್ನದಿಂದಲೇ ಜನರಿಗೆ ಆಹಾರ ಸಿಗಬೇಕೆಂದು ನಿರ್ಧರಿಸಿದರೆ ಮಾತ್ರ ಶಕ್ಯ. ಇದಕ್ಕಾಗಿ ಭೂಮಿಯ ಮೇಲೆ ನಿಯಂತ್ರಣ ಹೇರಬೇಕಾಗಬಹುದು, ನಿರ್ದಿಷ್ಟ ಬೆಳೆಗಳ ಸಲುವಾಗಿ ಭೂಮಿಗೆ ಲಾಯಸನ್ಸ ಕೊಡುವ ಪದ್ಧತಿಯನ್ನು ಅಮಲಿನಲ್ಲಿ ತರಬೇಕಾಗಬಹುದು. ಕಂಬಾಣಿ ಬೆಳೆಗಳನ್ನು ಬೆಳೆಯಬಿಚ್ಛಿಸುವರು ಫೀ ಕೊಟ್ಟು ಲಾಯಸನ್ಸ ಪಡೆಯಬೇಕೆಂದಿದ್ದ... ಭೂಮಿಯ ಮೇಲೆ ನಿಯಂತ್ರಣ ಹಾಕಿದಂತಾಗುವದಲ್ಲದೆ, ರಾಷ್ಟ್ರ ಹಿತದ ದೃಷ್ಟಿಯಿಂದ ಉಪಯೋಗಿಸಿದಂತಾಗುತ್ತದೆ ಹೊರತು ಕೆಲವೊಂದು ವ್ಯಕ್ತಿಗಳ ಧನಸಂಚಯಕ್ಕಾಗಿ ಅಲ್ಲ. ಇದಕ್ಕಾಗಿ ಒಕ್ಕಲತನ ಖಾತೆ ಹಾಗೂ ಉದ್ಯೋಗ ಖಾತೆಗಳಲ್ಲಿ ಸಹಕಾರ ಬೇಕು. ರಾಷ್ಟ್ರದ ಆರೋಗ್ಯದ ಸಲುವಾಗಿ ಇಂಥ ಸಹಕಾರ ಉಂಟಾದೀತೆಂದು ನಮಗೆ ಭರವಸೆಯಿದೆ.

—ಜೆ. ಸಿ. ಕುಮಾರಪ್ಪ


---

## ಮಹಾತ್ಮರ ಉಪವಾಸದ ಯಶಸ್ವಿ ಮುಕ್ತಾಯ

ತಾ. ೩ರ ರಾತ್ರಿ ೯ ಗಂಟೆಯಿಂದ ೪ ರ ರಾತ್ರಿ... ೯ ಗಂಟೆ ವರೆಗೆ ಯಾವದೇ ದುರ್ಘಟನೆ ನಡೆಯದೆ ಕಲ್ಕತ್ತದಲ್ಲಿ ಸಂಪೂರ್ಣ ಶಾಂತಿ... ಸ್ಥಾಪಿತವಾಗಿದ್ದರಿಂದ ಮಹಾತ್ಮಾ ಗಾಂಧಿಯವರು ರಾತ್ರಿ ೯-೧೫ಕ್ಕೆ ಉಪವಾಸ ಮುಂದು... ಪಾರಣೆ ಮಾಡಿದರು.

ಕಾಂಗ್ರೆಸ ಅಧ್ಯಕ್ಷರಾದ ಆಚಾರ್ಯ ಕೃಪ... ಲಾನಿ, ಪಶ್ಚಿಮ ಬಂಗಾಲದ ಗವರ್ನರರಾದ... ಶ್ರೀ ಸಿ. ರಾಜಗೋಪಾಲಾಚಾರ್ಯ, ಪಶ್ಚಿಮ... ಬಂಗಾಲದ ಮುಖ್ಯ ಪ್ರಧಾನರಾದ ಡಾ. ಪಿ. ಸಿ. ಘೋಷ ಹಾಗೂ ಎಚ್. ಎಸ್. ಸುಹ್ರವರ್ದಿ... ವರು ಮಹಾತ್ಮಾ ಗಾಂಧಿಯವರೊಂದಿಗೆ ಪ್ರಾರ್ಥನೆ... ತ್ತಿನಲ್ಲಿ ಸೇರಿ ಕೊನೆಯಲ್ಲಿ ಉಪವಾಸ ಮುಕ್ತಾ... ಯಲು ಅವರ ಮನವೊಲಿಸಿದರು.

ನವಖಾಲಿ ಪ್ರವಾಸದಲ್ಲಿ ತೆಂಗಿನ ನೀರು ಕುಡಿಯಲು ಉಪಯೋಗಿಸಿದ ಗ್ಲಾಸಿನಿಂದ ಅವರು ಇಂದು ಲಿಂಬೆಯ ರಸ ತೆಗೆದುಕೊಂಡು ಪಾರಣೆ ಮಾಡಿ.ದರ




## ಧಾರವಾಡ

ಹುಬ್ಬಳ್ಳಿ ನಗರ ಸಭೆಯವರು ೨೯ ನೇ ತಾ॥ ಗೆ ಸೇರಿದ್ದ ಸಭೆಯಲ್ಲಿ ನಗರಾಧ್ಯಕ್ಷರಾದ ಶ್ರೀ ಆರ್. ಎಸ್ ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ಕುರುಡರ ದುಃಖ ಪರಿಹಾರಕ್ಕಾಗಿ ೧೫ ಜನರ ಒಂದು ಸಮಿತಿಯನ್ನು ರಚಿಸಲಾಯಿತು. ಹುಬ್ಬಳ್ಳಿ ಸ್ವಾತಂತ್ರ್ಯೋತ್ಸವ ಸಮಿತಿಯವರು ಈ ಕಾರ್ಯಕ್ಕೆಂದು ೧೨೦೦ ರೂ. ಗಳನ್ನು ಕೊಟ್ಟಿದ್ದಾರೆ.

ಅಖಿಲ ಭಾರತ ಶಿವಾನುಭವ ಸಂಸ್ಥೆಯ ವತಿಯಿಂದ 'ಸಾವಧಾನ' ಎಂಬ ಪಾಕ್ಷಿಕ ಪತ್ರಿಕೆಯು ಪಂ. ನಾಗಭೂಷಣ ಶಾಸ್ತ್ರಿಗಳ ಸಂಪಾದಕತ್ವದಲ್ಲಿ ಗದಗಿನಿಂದ ಬೇಗನೆ ಹೊರಡುವದಾಗಿ ತಿಳಿಯುತ್ತದೆ.

ಲಕ್ಷ್ಮೇಶ್ವರಕ್ಕೆ ಜೊಟ್ಟ ಪರಮಿಟ್ಟುಗಳ ಸಹಾಯದಿಂದ ಎರಡು ಟ್ರಕ್ಕು ಭತ್ತ ಸಾಗಿಸುತ್ತಿದ್ದ ಪ್ರಕರಣದಲ್ಲಿ ಹಾನಗಲ್ಲದ ಮಾಮಲೇದಾರ ಅಮಲಾ ಇವರೂ ಹೆಡ್‌ಕ್ಲಾರ್ಕ ಎಂ ಬಿ ಪಾಟೀಲರೂ ಸಸ್ಪೆಂಡ ಮಾಡಲ್ಪಟ್ಟಿದ್ದಾರೆ. ಕಾರಕೂನರಾದ ದಡ್ಡೀ ಕೊಪ್ಪರಿಗೆ ರೋಣಕ್ಕೆ ವರ್ಗ ಮಾಡಲಾಗಿದೆ.

ಮೈಸೂರು ಸತ್ಯಾಗ್ರಹದಲ್ಲಿ ಭಾಗವಹಿಸಲು ಬೇಡಿನ್ನೂರ ತಾಲೂಕಿನ ಹೂಲಿಹಳ್ಳಿ ನಾವು ಸೂಡ ರಾಷ್ಟ್ರ ಸೇವಾದಲದವರು ಮೈಸೂರ ಕಾಂಗ್ರೆಸ್ಸಿನ ಬಿನ್ನಹ ಮನ್ನಿಸಿ ಮೈಸೂರಿಗೆ ತೆರಳಿದವರು.

ಧಾರವಾಡದಲ್ಲಿಯ ಮಾರುತಿ ಮೋಟಾರ ಸರ್ವಿಸ ಒಡೆಯರಾದ ಉಸ್ತಾದ ಮಾಧವರಾವ ಶಿರೋಳೆಯವರು ಅಗಸ್ಟ ೨೬ ಕ್ಕೆ ನಸುಕಿನ ನಾಲ್ಕು ತಾಸಿಗೆ ನಿಧನಹೊಂದಿದರು. ಇವರು ಸ್ವತಃ ಬಲವಾನರಾಗಿದ್ದರಲ್ಲದೆ ಜನರಲ್ಲಿ ಶಾರೀರಿಕ ಶಿಕ್ಷಣದ ಬಗ್ಗೆ ಆಸಕ್ತಿಯನ್ನು ಹುಟ್ಟಿಸಿದರು. ಮರಣ ಕಾಲದ ಸಮಯಕ್ಕೆ ಇವರಿಗೆ ೬೨ ವರ್ಷಗಳಾಗಿದ್ದವು.

ಗದಗದಲ್ಲಿ ಗೃಹ ಸಂರಕ್ಷಕ ದಳವನ್ನು ರಚಿಸಬೇಕೆಂದು ನಿರ್ಧರಿಸಲಾಗಿದ್ದು ಶ್ರೀ ಹಿರೇಮಠ ಕಮಾಂಡರರು ಮತ್ತು ಡಾ. ಕುಲಕರ್ಣಿ ಹೆ. ಕುಂಬಿ ಮತ್ತು ಅಕ್ಕಿಯವರು ಸಲಹೆಗಾರರಾಗಿ ನೇಮಿಸಲ್ಪಟ್ಟಿದ್ದಾರೆ. ಕನಿಷ್ಠ ಎಂದರೆ ಪರೀಕ್ಷೆ ಇಲ್ಲವೆ ಇಂಗ್ಲೀಷ ಆರನೆಯ ಇಯತ್ತೆ ಕಲಿತ ೨೦ ರಿಂದ ೪೦ ವರ್ಷದ ಒಳಗಿನವರಿಗೆ ಈ ದಲದಲ್ಲಿ ಪ್ರವೇಶವಿರುತ್ತದೆ.

[illegible] ಕಡಲೆ ಮತ್ತು ಹತ್ತಿ ಬಿತ್ತುವ ಕಾಲ ಸಮೀಪಿಸಹತ್ತಿದೆ. ರೈತರ ಹತ್ತರ ಗೋದಿ [illegible] ಗೋದಿ ಬೀಜ ಸಿಗುವದೆಂದು ಖಾತ್ರಿ ಮಾಡಿಕೊಟ್ಟಲ್ಲಿ ಗೋದಿಗಾಗಿ ಅಷ್ಟು ಭೂಮಿಯನ್ನು ಬಿಟ್ಟು ಉಳಿದ ಭೂಮಿಯಲ್ಲಿ ಕಡಲೆ ಬಿತ್ತಲು ಅನುಕೂಲವಾಗುವದೆಂದು [illegible]ತುರಗೋಳದ ಶ್ರೀ ಮಲ್ಲನಗೌಡ ಪಾಟೀಲರು ಧಾರವಾಡ ಜಿಲ್ಲಾ ಬೆಲೆ ಮತ್ತು ಪೂರೈಕೆ ಮಂಡಲದ ಅಧ್ಯಕ್ಷರಲ್ಲಿ ಬಿನ್ನವಿಸಿದ್ದಾರೆ.

ಜೈನ ಸಾಧುಗಳಾದ ಶ್ರೀ ಎಲ್. ಅಕಲಂಕ ಮುನಿಗಳು ನವಲಗುಂದದಲ್ಲಿ ಚಾತುರ್ಮಾಸ್ಯ ವ್ರತವನ್ನು ಧಾರಣ ಮಾಡಿದ್ದಾರೆ. ಅಗಸ್ಟ ೨೪ ಕ್ಕೆ ಅವರ ಕೇಶಲೋಚನ ಸಮಾರಂಭವು ಅತ್ಯಂತ ವೈಭವದಿಂದ ನಡೆಯಿತು. ಸುತ್ತುಮುತ್ತ ಸಾವಿರಾರು ಜೈನ ಭಕ್ತರು ಈ ಸಮಾರಂಭಕ್ಕೆ ಆಗಮಿಸಿದ್ದರು.

ಹುಬ್ಬಳ್ಳಿ ರೇಲ್ವೆ ಕೆಲಸಗಾರರು ೨೭ ನೇ [illegible] ಸಭೆ ಸೇರಿ ಈಗ ಕೊಡಲಾಗುತ್ತಿರುವ [illegible] ನುಚ್ಚನ್ನು ನಿಲ್ಲಿಸಬೇಕು ಎಂದು ಠರಾವು ಮಾಡಿಕೊಂಡರು.

ಹೈದರಾಬಾದಕ್ಕೆ ಸತ್ಯಾಗ್ರಹದಲ್ಲಿ ಭಾಗವಹಿಸಲು ವನಹಳ್ಳಿ ಸೇವಾದಲದ ಶ್ರೀ ಪಾಂಡುರಂಗ ಕಾಡಗಂಟಿಯವರು ಹೋಗಿದ್ದಾರೆ.

[illegible]ವಿಲ್ಲಿಯಲ್ಲಿ ಇದೇ ಸಪ್ಟೆಂಬರ ೧೩ ಕ್ಕೆ ಸೇರಲಿರುವ ಸರ್ವಭಾಷಾ ಸಾಹಿತ್ಯ ಸಮ್ಮೇಲನಕ್ಕೆ ಧಾರವಾಡದ ಪ್ರೊ. ಆರ್ ವಿ. ಜಾಗೀರದಾರರು 'ಸಾಹಿತ್ಯ ಮತ್ತು ಸ್ಫೂರ್ತಿ' ಹಾಗೂ "ಆಧುನಿಕ ಭಾರತೀಯ ಸಾಹಿತ್ಯಗಳ ಮೇಲೆ ಆಂಗ್ಲ ಸಾಹಿತ್ಯದ ಪ್ರಭಾವ" ಎಂಬೆರಡು ಪ್ರಬಂಧಗಳನ್ನು ಕಳುಹಿದ್ದಾರೆ.

ಭಾರತೀಯ ನೃತ್ಯವಿಶಾರದರಾದ ಶ್ರೀನಿವಾಸ [illegible] ಕರ್ಣಿ ಯವರು ಹಿಂದುಸ್ತಾನದ ಪ್ರಮುಖ ನಗರಗಳಲ್ಲಿ ತಮ್ಮ ನೀಳವರೊಂದಿಗೆ ನೃತ್ಯ ಪ್ರದರ್ಶನ ನಡೆಸಲಿದ್ದಾರೆ. ಈ ಸಂಚಾರದಲ್ಲಿ ಅವರು ಕೆಲ ಕನ್ನಡಿಗ ಕಲಾವಿದರಿಗೆ [illegible]ಕಾಶ ಮಾಡಿಕೊಡಬೇಕೆಂದಿರುವದರಿಂದ ಕುಳ್ಳ ಕಲಾವಿದರು ಸಂಚಾಲಕ ನೃತ್ಯ [illegible] ೬೧ ರಾಜುಪೇಟೆ ಹಾಯರೋಡ [illegible]ಸ ಇವರೊಡನೆ ಪತ್ರವ್ಯವಹಾರ ಮಾಡ[illegible]

## ಬೆಳಗಾವಿ

ಬೈಲಹೊಂಗಲದಲ್ಲಿ ಸನದೀ ಕಾರ್ಯಕಾರಿ ಮಂಡಲ ಮತ್ತು ವಿಶೇಷ ಪ್ರತಿನಿಧಿಗಳ ಸಭೆಯು ೨೫ ಕ್ಕೆ ಸೇರಿ ೧೮೫೮ ಕ್ಕೆ ಮೊದಲು ತಮಗಿದ್ದ ಸ್ಥಾನಮಾನಗಳನ್ನು ಸರಕಾರವು ಗೌರವಿಸಬೇಕು, ಅವರಿಗೆ ಯೋಗ್ಯ ಸಂಭಾವನೆ ಕೊಡಬೇಕು ಮತ್ತು ಗ್ರಾಮರಕ್ಷಕ ದಳಗಳಲ್ಲಿ ತಮ್ಮನ್ನು ಸೇರಿಸಿಕೊಳ್ಳಬೇಕು ಎಂದು ಗೊತ್ತುವಳಿಗಳನ್ನು ಪಾಸುಮಾಡಿಕೊಂಡಿತು. ಸನದಿಗಳ ಸಂಘಟನೆಗಾಗಿ ವೀರಭದ್ರಪ್ಪ ತುರಮರಿಯವರನ್ನು ನೇಮಿಸಲಾಯಿತು.

ಹುದಲಿಯಲ್ಲಿ ನಡೆದಿದ್ದ ಮೂಲ ಶಿಕ್ಷಣದ ವರ್ಗದ ಮುಕ್ತಾಯದ್ದೆಂದು ೩೦ ನೇ ತಾರೀಖಿಗೆ ಸುಳಧಾಳಕ್ಕೆ ಆಗಮಿಸಿದ್ದ ಮಾನ್ಯಮಂತ್ರಿ ಪಾಟೀಲ ಮಲ್ಲನಗೌಡರನ್ನು ಅಲ್ಲಿಯ ಹಳ್ಳಿಗರು ಸತ್ಕರಿಸಿ ತಮಗೆ ಕೂಡಲೆ ಅನ್ನ ವಸ್ತ್ರ ದೊರೆಯಬೇಕೆಂದು ಕೇಳಿದರು. ಈ ಸಮಸ್ಯೆ ಇಡೀ ದೇಶದ ಸಮಸ್ಯೆಯಾಗಿರುವದರಿಂದ ಇಷ್ಟು ಬೇಗನೆ ಏನನ್ನೂ ಮಾಡಲಿಕ್ಕೆ ಬರುವದಿಲ್ಲೆಂದು ಹೇಳಿದರು. ನಂತರ ಹುದ್ಲಿಯಲ್ಲಿ ಮೂಲ ಶಿಕ್ಷಣ ವರ್ಗದ ಮುಕ್ತಾಯ ಸಮಾರಂಭ ತೀರಿಸಿಕೊಂಡು ಅಂದೇ ಸಂಜೆ ಮೋಟಿನಿಂದ ಮುಂಬಯಿಗೆ ತೆರಳಿದರು.

ಬೆಳಗಾವಿ ನಗರ ಸಭೆಯ ಭಂಗೀ ಜನರೂ ಕಸಗುಡಿಸುವವರೂ ತಮ್ಮ ಸಂಬಳದ ಕಾಲು ಪಾಲು ಬೋನಸ್ಸು ಕೊಡಲಾಗುವದು ಎಂದು ನಗರ ಸಭೆಯ ನಿರ್ಣಯವನ್ನು ವಿರೋಧಿಸಿ ತಮಗೆಲ್ಲ ಅಷ್ಟಷ್ಟೇ ಬೋನಸ್ಸು ಸಿಗಬೇಕೆಂದು ೨೯ ನೇ ತಾರೀಖಿನಿಂದ ಮೂರು ದಿನ ಸಂಪು ನಡೆಸಿದ ನಂತರ ನಗರ ಸಭೆಯವರು ತಲಾ ೨೦ ರೂ. ಗಳ ಬೋನಸ್ಸು ಕೊಡಬೇಕೆಂದು ಪುನಃ ನಿರ್ಧರಿಸಿದ್ದರಿಂದ ಅವರು ತಮ್ಮ ಸಂಪು ನಿಲ್ಲಿಸಿದ್ದಾರೆ.

ಬೆಳಗಾವಿ ವಿದ್ಯುತ್ ಕಂಪನಿ ಮತ್ತು ಅದರ ಕೂಲಿಕಾರರ ನಡುವಿನ ತಂಟೆಯನ್ನು ಬಗೆಹರಿಸಲು ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎಂ. ಬಿ. ಹೊನ್ನಾವರರನ್ನು ಔದ್ಯೋಗಿಕ ನ್ಯಾಯ ಮಂಡಳಕ್ಕೆ ನೇಮಿಸಲಾಗಿದೆ.

ಬೆಳಗಾವಿಯಲ್ಲಿ ಡಾ. ಕೋಮುಡಕರ ಮತ್ತು ಇನ್ನಿಬ್ಬರ ನೇತೃತ್ವದಲ್ಲಿ ಗೃಹ ರಕ್ಷಕ ದಳವನ್ನು ಸ್ಥಾಪಿಸಬೇಕೆಂದು ಹಿಂದಿನ ಕಲೆಕ್ಟರರು ನಿರ್ಧರಿಸಿದ್ದಕ್ಕೆ ಸರಕಾರದ ಒಪ್ಪಿಗೆ ದೊರೆತಿದ್ದು ಈಗ ಆ ಬಗೆಗೆ ಪ್ರಯತ್ನವನ್ನು ಮುಂಬರಿಸಲು ನಗರದಲ್ಲಿಯ ಎಲ್ಲ ಸಂಘ ಸಂಸ್ಥೆಗಳ ಸಭೆ ಕರೆಯಬೇಕೆಂದು ನಿರ್ಧರಿಸಲಾಗಿದೆ.

ಬೆಳಗಾವಿ ನಗರದ ಎಲ್ಲ ಶಾಲೆಗಳನ್ನು ನಗರ ಸಭೆಯು ತನ್ನ ಕಡೆಗೆ ತೆಗೆದುಕೊಳ್ಳಲು ಶ್ರೀಗಳಾದ ಭಾತಖಾಂಡೆ, ಡಾ. ಬಾಕ್ರೆ, ಸಾವಂತ, ರಾಣೆ, ಸುಬ್ರಾವ ಪಾಟೀಲರ ಸಮಿತಿಯೊಂದನ್ನು ರಚಿಸಿದೆ.

## ವಿಜಾಪುರ

ಬಾಗಲಕೋಟೆ ಬಸವೇಶ್ವರ ಕಾಲೇಜಿನ ಅರ್ಥಶಾಸ್ತ್ರ ಮತ್ತು ಇತಿಹಾಸ ಸಂಘದ ಪರವಾಗಿ ಪ್ರೊ. ವೆಂಕಟೇಶ್ವರನ್ ಅವರು ವಿದ್ಯಾರ್ಥಿಗಳಿಗೆ ಜಗತ್ತಿನ ಪ್ರಚಲಿತ ವಿಷಯಗಳ ಪರಿಚಯ ಮಾಡಿ ಕೊಡುವದಕ್ಕಾಗಿ ಪ್ರತಿ ಶನಿವಾರ ಸಂಜೆ ೫॥ ಗಂಟೆಗೆ ಒಂದು ತಾಸಿನ ವ್ಯಾಖ್ಯಾನ ಮಾಲೆಯನ್ನು ಏರ್ಪಡಿಸಿದ್ದಾರೆ. ನಾಗರಿಕರೂ ಇದರ ಲಾಭವನ್ನು ಪಡೆದುಕೊಳ್ಳಲು ಅವಕಾಶವಿದೆ.

ಹಿಂದುಳಿದ ಕುರುಬರ ಸಮಾಜದಲ್ಲಿ ಕೆಲಸ ಮಾಡಲು ವಿಜಾಪುರ ಜಿಲ್ಲೆಯ ಸಲುವಾಗಿ ಸ್ವಯಂಸೇವಕರು ಒಂದೆರಡು ತಿಂಗಳ ಮಟ್ಟಿಗೆ ಬೇಕಾಗಿದ್ದಾರೆ. ಸೇವಾಭಾವನೆಯ ಕುರುಬ ಸುಶಿಕ್ಷಿತ ತರುಣರು ಕಾರ್ಯದರ್ಶಿ, ಜಿಲ್ಲಾ ಕುರುಬರ ಸೊಸಾಯಿಟಿ ವಿಜಾಪೂರ ಇವರೊಡನೆ ಪತ್ರವ್ಯವಹಾರ ನಡೆಸಬೇಕು.

ಬಾಗಲಕೋಟೆ—ಇಲಕಲ್ಲ ಯುನಿಯನ ಮೋಟರ ಸರ್ವಿಸ ಕಂಪನಿ ಒಡೆಯರು ಬಾಗಲಕೋಟೆ ಹಾಯಸ್ಕೂಲಿನಲ್ಲಿ ಕಲಿಯುವ ಹುನಗುಂದ, ಇಲಕಲ್ಲ, ಅಮೀನಗಡ, ಕಮತಗಿ ಶಿರೂರಗಳ ಬಡವಿದ್ಯಾರ್ಥಿಗಳಿಗೆ ಅವರವರ ಮನೆಯವರು ಕೊಡುತ್ತಿರುವ ಬುತ್ತಿ ಡಬ್ಬಿಗಳನ್ನು ಪುಕ್ಕಟೆ ತೆಗೆದುಕೊಂಡುಹೋಗಿ ಮುಟ್ಟಿಸುವ ಪುಣ್ಯದಕಾರ್ಯ ಮಾಡುತ್ತಿರುವದು ಅನುಕರಣೀಯವಾಗಿದೆ.

## ಉತ್ತರ ಕನ್ನಡ

ಸಿರಸಿಯ ಕಿರಿಯರ ಕೂಟದ ಪರವಾಗಿ ಸಣ್ಣ ಕತೆಗಳ ಸ್ಪರ್ಧೆಯೊಂದನ್ನು ಏರ್ಪಡಿಸಲಾಗಿದೆ. ಕನ್ನಡಿಗರೆಲ್ಲರೂ ಇದರಲ್ಲಿ ಭಾಗವಹಿಸಬಹುದು. ಕತೆಯು ಸ್ವತಂತ್ರ ಮತ್ತು ಸಾಮಾಜಿಕವಿರಬೇಕು. ಫೂಲ್ಸ್‌ಕ್ಯಾಪ ಕಾಗದದ ಐದುಪುಟಗಳಿಗೆ ಮಿಕ್ಕಕೂಡದು. ಮೊದಲ ಬಹುಮಾನ ಐದು ರೂ. ಗಳು, ಎರಡನೇ ಬಹುಮಾನ ೩ ರೂ. ಗಳು. ಕತೆಗಳನ್ನು ೨೫ ನೆಯ ತಾರೀಕಿನೊಳಗಾಗಿ ನಾಡಿಗ ಗಲ್ಲಿ, ಶಿರಸಿ ಇವರಿಗೆ ಕಳುಹಬೇಕು.

ರೈತರು ಸ್ವಸಂತೋಷದಿಂದ ಸರಕಾರಕ್ಕೆ ಭತ್ತ ಮಾರಬೇಕೆಂಬ ಧೋರಣವನ್ನು ಸರಕಾರವು ಇಟ್ಟುಕೊಂಡಿದ್ದರಿಂದ ಸರಕಾರಕ್ಕೆ ಭತ್ತ ದೊರೆಯುವದು ಕಠಿಣವಾಯಿತು. ಆದ್ದರಿಂದ ಇಂತಿಷ್ಟು ಭತ್ತ ಇಲ್ಲವೆ ಅಕ್ಕಿಯನ್ನು ಸರಕಾರಕ್ಕೆ ಮಾರಬೇಕು ಎಂಬ ಧೋರಣವನ್ನು ಮುಂದಿನ ಸುಗ್ಗಿಯ ಕಾಲಕ್ಕೆ ಜಾರಿಯಲ್ಲಿ ತರಬೇಕೆಂದು ಜಿಲ್ಲಾ ಆಹಾರ ಸಮಿತಿಯ ಸಭೆಯು ಕಾರವಾರದಲ್ಲಿ ಸೇರಿದಾಗ ಸರಕಾರಕ್ಕೆ ಸೂಚಿಸಿದೆ.

ಕಾರವಾರ ಕಿಸಾನ ಸಭಾ ಮುಖಂಡರಾದ ಜನಾಬ್ ಸೈಯದ ಹಮೀದ ಸಾಹೇಬರನ್ನು ಕಾರವಾರ ಪೋಲೀಸರು ಸಾರ್ವಜನಿಕ ಸಂರಕ್ಷಣ ಕಾಯದೆಯನ್ವಯ ೨೬ ನೇ ತಾರೀಖಿಗೆ ಬಂಧಿಸಿದ್ದಾರೆ.

ಕಾರವಾರ ಜಿಲ್ಲಾ ತಾಲೂಕ ಪಗಾರ ಸಿಪಾಯರ ಸಭೆಯು ಕಾರವಾರದಲ್ಲಿ ಈಸ್ಟಾಳಕರ ವಕೀಲರ ಅಧ್ಯಕ್ಷತೆಯಲ್ಲಿ ಸಭೆಸೇರಿ ತಮಗೆ ೩೫—೧—೪೦—೩—೨—೫೫ ರೂ. ಗಳಸಂಬಳ ಪ್ರಮಾಣ ದೊರೆಯಬೇಕು. ಪ್ರವಾಸಭತ್ತೆಯೆಂದು ೧೨ ರಿಂದ ೧೫ ರೂ. ಗಳನ್ನು ಕೊಡಬೇಕು. ನಗರವಾಸದ ಭತ್ತೆ, ಮಲೇರಿಯದ ಭತ್ತೆಗಳನ್ನು ಕೊಡಬೇಕು. ಹಣವನ್ನು ಹೊತ್ತುಕೊಂಡು ಅಪಾಯದ ಮಾರ್ಗದಲ್ಲಿ ಸಂಚರಿಸಬೇಕಾಗುವದರಿಂದ ಸರಕಾರವು ಅವರಿಗೆ ಒಂಟಿ ಬಾರಿನ ಬಂದೂಕು ಕೊಡಬೇಕು— ಎಂದು ಮುಂತಾಗಿ ತಮ್ಮ ಬೇಡಿಕೆಗಳನ್ನು ಸರಕಾರಕ್ಕೆ ತಿಳಿಸಿತು.

ಹುಲೇಕಲ್ ಗ್ರಾಮದಲ್ಲಿ ತಾ. ೧೫-೮-೪೭ ನೆ ದಿವಸ ಅಲ್ಲಿಯ ಕನ್ನಡ ಶಾಲಾ ಬಾಲಕ ಬಾಲಿಕೆಯರು, ಶಿಕ್ಷಕರು, ಊರವರು ಕೂಡಿ ಮುಂಜಾನೆ ಪ್ರಭಾತಫೇರಿ ತೆಗೆದು ಶಾಲಾ ಅಂಗಣದಲ್ಲಿ ನಿಲ್ಲಿಸಿದ ಕಂಬಕ್ಕೆ ರಾಷ್ಟ್ರ ಧ್ವಜಾರೋಹಣ ವಂದನೆಗಳನ್ನು ಸಮರ್ಪಿಸಿದರು. ಆ ಕಾಲಕ್ಕೆ ನಮ್ಮ ರಾಷ್ಟ್ರ ಧ್ವಜದ ಮಹತ್ವವನ್ನು ಪ್ರಾಮುಖ್ಯವಾಗಿ ವಿದ್ಯಾರ್ಥಿಗಳಿಗೆ ಹೇಳಲಾಯಿತು.

ಶಾಲೆಯಲ್ಲಿ ಮಧ್ಯಾಹ್ನ! ಶ್ರೀ ದುರ್ಗಪ್ಪಾ ದಾಸೈನ ಇವರ ಅಧ್ಯಕ್ಷತೆಯಲ್ಲಿ ಆಟಪಾಟಗಳ ಸ್ಪರ್ಧೆ ನಡೆದು ಯಶಸ್ವಿಯಾದವರಿಗೆ ಇನಾಮು ಕೊಡಲಾಯಿತು. ಶ್ರೀ ನಾಗೇಶರಾವ ಪಡುಕೋಣ ಇವರು ಶಾಲೆಯ ಬಡ ಹುಡುಗರಿಗೆ ಪಾಟಿಗಳನ್ನು ಹಂಚಿದರು. ಕಾಂಗ್ರೆಸ ಕಮಿಟಿಯಿಂದ ಖಾದಿ ಟೊಪ್ಪಿಗೆ, ವಸ್ತ್ರಗಳು ಕೊಡಲ್ಪಟ್ಟವು.

ಫಿರೋದ ರಾಜೇಸಾಬರು ಅಗಸ್ಟ ೧೮ಕ್ಕೆ ಮಾಡಿದ ರಾಜಕೀಯ ಸುಧಾರಣೆಗಳ ಪ್ರಕಾರ ಶ್ರೀಗಳಾದ ಪ. ಬಿ. ಪಣಿಕನೀಸ (ಮುಖ್ಯ ಮಂತ್ರಿ) ಡಿ. ಬಿ. ಪೋಕನೀಸ, ಎಸ್. ಎಲ್. ಲಿಮಯೆ, ಎಸ್. ಎಸ್. ನಾಳಂಬೆಯವರನ್ನು ಮಂತ್ರಿಗಳೆಂದು ನೇಮಿಸಿಕೊಂಡಿದ್ದಾರೆ.

---

ಬಾಗಲಕೋಟೆಯಲ್ಲಿ ಸಪ್ಟಂಬರ ಅರಳ್ಳೆ ಕೆ. ಪಿ. ಸಿ. ಸಿ. ಕೌನ್ಸಿಲ ಮತ್ತು ಅ. ಕ. ಏ. ಸಂಘದ ಕಾರ್ಯಕಾರೀಮಂಡಳದ ಅವಸರದ ಸಭೆಯು ಅಂದು ರಾತ್ರಿ ಒಂಬತ್ತು ಗಂಟೆಗೆ ಸೇರಿ ಅ. ಕ. ಏ. ಸಂಘವನ್ನು ಮುಂದೆ ನಡೆಸುವ ಬಗ್ಗೆ ಸಾಮಾನ್ಯ ಸಭೆಗೆ ಕರಡು ಒಪ್ಪಿಸುವ ಮತ್ತು ಉಪಾಧ್ಯಕ್ಷರೂ ಕಾರ್ಯದರ್ಶಿಗಳೂ ತಮ್ಮನ್ನು ಕೂಡಲೆ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡ ವಿಷಯಗಳನ್ನು ಚರ್ಚಿಸಲಾಗಿದೆ.

## ಬಳ್ಳಾರಿ

ಹೊಸಪೇಟೆಯಲ್ಲಿ ನಗರ ಸಭೆಯ ಚುನಾವಣೆಯನ್ನು ಸ್ಪರ್ಧೆಯಿಲ್ಲದೆ ಜರುಗಿಸುವ ಉದ್ದೇಶದಿಂದ ಅಗಸ್ಟ ೨೪ ಕ್ಕೆ ಕೊಟ್ಟೂರ ಸ್ವಾಮಿ ಮಠದಲ್ಲಿ ಪುರಪ್ರಮುಖರ ಸಭೆ ಸೇರಿ ಯೋಗ್ಯ ಹುರಿಯಾಳುಗಳನ್ನು ನಿರ್ಧರಿಸಲು ಒಂದೊಂದು ವಾರ್ಡಿಗೆ ಒಬ್ಬೊಬ್ಬರಂತೆ ೧೫ ಜನರ ಸಮಿತಿ ರಚಿಸಲಾಯಿತು.

ಆಲೂರ ತಾಲೂಕು ಹೊಳಲಗುಂದಿಯಲ್ಲಿ ಜರುಗಲಿರುವ ಬಳ್ಳಾರಿ ಜಿಲ್ಲಾ ಎರಡನೇ ಕರ್ನಾಟಕ ಏಕೀಕರಣ ಪರಿಷತ್ತನ್ನು ಉದ್ಘಾಟಿಸಲು ಶ್ರೀ ಅಂದಾನೆಪ್ಪ ದೊಡ್ಡಮೇಟಿ ಎಂ. ಎಲ್. ಎ. ಅವರು ಒಪ್ಪಿಕೊಂಡಿದ್ದಾರೆ.

ಉರುವಕೊಂಡ ಜಹಾಗೀರ ಗ್ರಾಮದಲ್ಲಿ ಇದೇ ಅಗಸ್ಟ ೨೦ ನೇ ತಾರೀಖಿನಿಂದ ಒಂದು ತಿಂಗಳ ವರೆಗೆ ಕನ್ನಡ ಸ್ವರಾಜ್ಯ ಭವನದಲ್ಲಿ ವ್ಯಾಖ್ಯಾನ ರೂಪದಲ್ಲಿ ಜ್ಞಾನ ಸತ್ರವನ್ನು ಏರ್ಪಡಿಸಲಾಗಿದ್ದು ಸುತ್ತಲಿನ ಹಳ್ಳಿಗಳ ರೈತರು ಲಾಭ ಪಡೆಯುತ್ತಿದ್ದಾರೆ. ಇಲ್ಲಿ ಇದಕ್ಕಾಗಿ ೨೦೦ ಜನರಿಗೆ ಊಟದ ಸೌಕರ್ಯವೂ ಇದೆ.

---

## ಆತ್ಮನಿರೀಕ್ಷಣೆಯ ಸ್ಪಷ್ಟೀಕರಣ

( ೬ ನೇ ಪುಟದಿಂದ )

ಯಿಂದ ಕೇವಲ ಹಳೆಯದಕ್ಕೇ ಅಂಟಿಕೊಳ್ಳದೆ ಹೊಸ ಬೆಳಗಿನ ಕಡೆ, ಇದೀಗ ದೊರೆತ ಭಾರತ ಸ್ವಾತಂತ್ರ್ಯವು ದಿವ್ಯವೂ ಭವ್ಯವೂ ಆಗುವುದರ ಕಡೆಗೆ, ಮುನ್ನಡೆ ಇಡಲಿ ಎಂದು ನನ್ನ ಬಿನ್ನಹ.

ಈ ದೃಷ್ಟಿಯಲ್ಲಿ ವಿಚಾರಿಸುವಾದ ನನಗೆ ಶ್ರೀ ಭಕ್ತಿಭಂಡಾರಿ ಬಸವಣ್ಣನವರೊಬ್ಬರೇ ಅಲ್ಲ. ಶ್ರೀ ಶಂಕರ, ಮಧ್ವ, ರಾಮಾನುಜ ಇತ್ಯಾದಿ ತತ್ವವಿದರೂ ಅಷ್ಟೆ. ಅವರಲ್ಲಿ ನಮ್ಮ ಆದರವನ್ನು ಇಡುವ, ಭಕ್ತಿಯ, ಕೃತಜ್ಞತೆಯ ವಂದನೆಗಳನ್ನೂ ಅರ್ಪಿಸುವ. ಆದರೆ ಅವರ ವಿಚಾರ ಸರಣಿ ಇಂದಿನ ಯುಗಕ್ಕೆ ಸರಿಹೋಗುವುದಿಲ್ಲವಾದಕಾರಣ ಇಂದಿಗೆ ಬೇಕಾದ ಹೊಸ ಧರ್ಮವನ್ನು ಕಂಡುಕೊಳ್ಳುವ.

೧೨ನೆಯ ಶತಮಾನದಿಂದ ಈಚೆ, ಅದಕ್ಕೂ ಹಿಂದೆಯೂ ನಮ್ಮಿಂದ ತಪ್ಪುಗಳು ಆಗುತ್ತಿದ್ದು ಅವುಗಳನ್ನು ನಾವು ಕಂಡು ತಿದ್ದಿಕೊಳ್ಳಲೇಬೇಕು. 'ಕರ್ನಾಟಕದ ಮೂರು ಚಕ್ರಗಳು' ಎಂಬುವದರಲ್ಲಿ ಪಂಪ—ಕುಮಾರವ್ಯಾಸರ ತಪ್ಪನ್ನು ಎತ್ತಿತೋರಿಸ್ದಕ್ಕೆ ಅನೇಕರಿಗೆ ಕಳವಳವಾಯ್ತು. [illegible] ೧೨ನೆಯ ಶತಮಾನದವನು.

ಶ್ರೀ ಶಂಕರಾಚಾರ್ಯರಿಗೆ [illegible] ಘಟನೆಗಳ ಹಿನ್ನೆಲೆ [illegible] ಅವರು [illegible] ಕಾಲಕ್ಕೆ [illegible]! ಇದರಿಂದ ನಮ್ಮ [illegible] ದೋಷವು [illegible], ಅದರ [illegible] ಮಗಳನ್ನು ನಾವು ಈಗ ಅನುಭವಿಸುತ್ತಿದ್ದೇವೆ.

೧೩ನೆಯ ಶತಮಾನದಿಂದ ಇದೇ [illegible] ನಮ್ಮ ನಾಡಿನ [illegible]. ಈ [illegible] ಘಟನೆಯು [illegible] ವಿಜಯನಗರವು ಕೊನೆಯ ಭಾಗ್ಯಜ್ಯೋತಿಯಲ್ಲವಾದರೆ ಮತ್ತೇನು? ಆದಾದ ಬಳಿಕ [illegible] ದೊಡ್ಡ [illegible] ಯಾವುವು ಉದಯಿಸಿದವು? ಸತ್ಯವು ಕಹಿಯಾಗಿರಬಹುದು. ಅದನ್ನು ಒಪ್ಪಿಕೊಳ್ಳಲೇ ಬೇಕಲ್ಲವೆ? [illegible] ಹೊನ್ನಿಂದು ನಾವು ಹೇಳಿದರೆ ಲೋಕವು ಅದಕ್ಕೆ ಬೆಲೆಕೊಡಬೇಕೆ?

೧೨ನೆಯ ಶತಮಾನದಿಂದ ಮುಂದೆ ಎಂದೊಡನೆ ಶ್ರೀ ಬಸವಣ್ಣನವರನ್ನು [illegible] ನೆಂದು ಶ್ರೀ ಕರ್ಕಿಯವರಿಗೆ ಸಂದೇಹ ಹುಟ್ಟಿಗಿದೆ. ಆದರೆ ಶ್ರೀ ಮಧ್ವಾಚಾರ್ಯರು, ಶ್ರೀ ರಾಮಾನುಜಾಚಾರ್ಯರು ಕಲೆದೋರಿದ್ದು ಆ ಬಳಿಕವೆ! ಆದಕಾರಣ ಶ್ರೀ ಕರ್ಕಿಯವರಿಗೆ [illegible] ಸಂದೇಹವುಂಟಾಗಿದ್ದರೆ ಅದು ಅವರ ದೃಷ್ಟಿದೋಷವೆಂದೇ ಹೇಳಬೇಕಾಗುವದು.

([illegible] ಅದರಪ್ರಕಾರ [illegible] ಲೇಖದ ಸಾತ್ವಿಕತೆಯು ಬೆಳಕಿಗೆ ಬದ್ದಹಾಗಾಯ್ತು. ಹಳೆಯ ಸಂಪ್ರದಾಯ [illegible] ಪೂರ್ವಾಚಾರ್ಯರ [illegible] ಬದಿಗಿಟ್ಟು ಇಂದಿನ [illegible] ಬುದ್ಧಿಯಿಂದ [illegible] ವಿಶಾಲಭಾವನೆಯಿಂದ [illegible] ನ್ಯಾಯವಾದ [illegible] ಮುಂದೆ [illegible] ವಿಷಯಗಳಿಗಾಗಿ [illegible] ದುಸ್ತ್ರಾಟ [illegible] —ಸಂ)




## ಮುಂಬಯಿ

ಪಂಜಾಬ ಮತ್ತು ಬಂಗಾಲಗಳಲ್ಲಿ ಜಾತೀಯ ದಂಗೆ ಪ್ರಾರಂಭವಾದದ್ದರ ಪರಿಣಾಮವಾಗಿ ಮುಂಬಯಿಯಲ್ಲಿಯೂ ಎರಡನೆ ತಾರೀಖಿಗೆ ಮಾಹಿಮ್ಮ, ಪರೇಳ, ಕಾಳಾಚೌಕಿ ಪ್ರದೇಶಗಳಲ್ಲಿ ಇರಿತದ ಪ್ರಕಾರಗಳು ಸಂಭವಿಸಿದೆ. ಗಲಭೆ ಹಬ್ಬದಂತೆ ತಡೆಯಲು ಕರ್ಫ್ಯೂ ಆಜ್ಞೆಯನ್ನು ಜಾರಿ ಮಾಡಲಾಗಿದೆ. ಇರಿತಕ್ಕೆ ಗುರಿಯಾಗಿ ೭ ಜನರು ಮಡಿದಿರುವರು.

ಸಂಬಳ ಸಮಿತಿಯ ಸೂಚನೆಗಳನ್ನು ನಿಷೇಧಿಸಲು ಮುಂಬಯಿ ಅಂಚೆ ಪೇದೆಗಳು ೩ನೇ ತಾರೀಖಿಗೆ ಒಂದು ದಿನದ ಸಂಪು ಹೂಡಿದ್ದರಿಂದ ಜನರಿಗೆ ಸ್ವಲ್ಪ ತೊಂದರೆಯಾಯಿತು.

ಮುಂಬಯಿ ಶಾಸನಸಭೆ ಸೇರಿದಾಗ ಹರಿಜನರ ದೇವಾಲಯ ಪ್ರವೇಶ ಮಸೂದೆಗೆ ನಿಷೇಧ ಪ್ರದರ್ಶಿಸಲು ವರ್ಣಾಶ್ರಮ ಸ್ವರಾಜ್ಯ ಸಂಘದವರು ಇದೇ ೧೧ನೇ ತಾರೀಖಿಗೆ ಕೌನ್ಸಿಲ ಭವನಕ್ಕೆ ಹೌಡು ತೆಗೆದುಕೊಂಡು ಹೋಗಲಿದ್ದಾರೆ.

ದಲಿತ ವರ್ಗದವರಿಗೆ ಪ್ರತ್ಯೇಕ ಮತದಾರ ಸಂಘಗಳು ದೊರೆಯದಿದ್ದರೆ ಅವರು ಪ್ರತ್ಯಕ್ಷ ಹೋರಾಟವನ್ನು ಪ್ರಾರಂಭಿಸುವರೆಂದು ವಡಾಲಾದಲ್ಲಿ ೩೧ನೇ ತಾರೀಖಿಗೆ ಸೇರಿದ್ದ ಅವರ ಸಭೆಯಲ್ಲಿ ನಿರ್ಧರಿಸಲಾಯಿತು. ಹೋರಾಟದ ಸ್ವರೂಪವನ್ನು ಕ್ರಿಯಾ ಸಮಿತಿಯು ನಿರ್ಧರಿಸುವದು.

ಪಂಜಾಬದ ನಿರಾಶ್ರಿತರು ಯುಕ್ತಪ್ರಾಂತದತ್ತ ಬಂದು ತುಂಬುತ್ತಿರುವದರಿಂದ ಸರಕಾರಕ್ಕೆ ಅವರ ಯೋಗಕ್ಷೇಮ ನೋಡಿಕೊಳ್ಳಲು ಅನುವಾಗಬೇಕೆಂದು ಹಿಂದೂ ಮಹಾಸಭೆಯು ಅಲ್ಲಿಯ ಹೋರಾಟವನ್ನು ನಿಲ್ಲಿಸಬೇಕೆ ಎಂಬುದನ್ನು ಚರ್ಚಿಸಲು ಅದರ ಕಾರ್ಯಸಮಿತಿಯು ಬರುವ ವಾರ ದಿಲ್ಲಿಯಲ್ಲಿ ಸೇರುವದು ಎಂದು ಶ್ರೀ ಭೋಪಟಕರರು ಹೇಳಿದರು.

## ಮದ್ರಾಸ

ಮದ್ರಾಸ ಪ್ರಾಂತದ ಆಹಾರ ಪರಿಸ್ಥಿತಿಯು ಬಿಕ್ಕಟ್ಟಿನದಾಗಿದೆ. ದಿನಾಲು ನಮಗೆ ೫೦೦೦ ಟನ್ ಅಕ್ಕಿ ಬೇಕಾಗುತ್ತದೆ. ಕೇಂದ್ರ ಸರಕಾರವು ೧೪೦೦ ಟನ್ ಅಕ್ಕಿ ಕೊಡಲು ಒಪ್ಪಿದೆ. ಇಷ್ಟರಿಂದಲೇ ಆಹಾರ ಪರಿಸ್ಥಿತಿಯೇನೂ ಸುಧಾರಿಸಲಾರದು. ಸಾರ್ವಜನಿಕರೂ ಅಧಿಕಾರಿಗಳೂ ಸಹಕಾರದಿಂದ ಈ ಪರಿಸ್ಥಿತಿಯನ್ನು ಎದುರಿಸಿ ಪ್ರಾಂತವನ್ನು ಉಳಿಸಿಕೊಳ್ಳಬೇಕೆಂದು ಮುಖ್ಯಮಂತ್ರಿಗಳು ಒಂದು ಪ್ರಕಟನೆ ಹೊರಡಿಸಿದ್ದಾರೆ.

## ಮಧ್ಯಪ್ರಾಂತ

ಅ. ಭಾ. ಸಾಮ್ಯವಾದೀ ಪಕ್ಷದ ಧೋರಣೆಯನ್ನು ಮುಂಬಯಿಯಲ್ಲಿ ಸೇರಲಿರುವ ಅ.ಭಾ. ಕಾಂಗ್ರೆಸ ಸಮಿತಿಯ ಅಧಿವೇಶನದಲ್ಲಿ ನಿರ್ಧರಿಸಲಾಗುವದು. ಇದಕ್ಕೆ ಕಾಂಗ್ರೆಸಿನ ಮನ್ನಣೆ ದೊರೆಯದಿದ್ದರೆ ಸಾಮ್ಯವಾದಿಗಳು ಕಾಂಗ್ರೆಸಿನಿಂದ ಹೊರಬೀಳಬೇಕಾಗುವದೆಂದು ಡಾ. ಲೋಹಿಯಾರು ನಾಗಪುರದಲ್ಲಿ ಹೇಳಿದರು.

ಪಾಕಿಸ್ತಾನದಲ್ಲಿರುವ ಸಾಮ್ಯವಾದೀ ಶಾಖೆಗಳು ತಮ್ಮ ಧೋರಣೆಯನ್ನು ನಿರ್ಧರಿಸಲು ಸ್ವತಂತ್ರವಿವೆಂದು ಡಾ. ಲೋಹಿಯಾರು ಹೇಳಿದ್ದಾರೆ.

## ದಿಲ್ಲಿ

ಭಾರತದಲ್ಲಿಯ ಈಗಿದ್ದ ಆಹಾರ ಸಂಗ್ರಹವು ವಿಶೇಷ ಪ್ರಸಂಗಗಳಿಗಾಗಿ ಕಾಯ್ದಿಟ್ಟ ಆಹಾರ ಧಾನ್ಯವು ಈಗ ಭರದಿಂದ ತೀರುತ್ತ ನಡೆದಿರುವದರಿಂದ ಡಾ. ರಾಜೇಂದ್ರಪ್ರಸಾದರಿಗೆ ಬಹಳ ಚಿಂತೆಯಾಗಿದೆ. ಅಕ್ಟೋಬರ ಒಂದನೇ ತಾರೀಖಿಗೆ ಕೊರತೆ ಪ್ರದೇಶದಲ್ಲಿ ಕೇವಲ ೧೫ ದಿವಸಗಳ ವರೆಗೆ ಸಾಕಾಗುವಷ್ಟು ಆಹಾರ ಧಾನ್ಯ ಉಳಿಯುವದು.

ಗೊಂಡಾಲ ಮಹಾರಾಜರು ನೌಖಾಲಿಯ ನಿರಾಶ್ರಿತರಿಗಾಗಿ ಮಹಾತ್ಮರಿಗೆ ಒಂದು ಲಕ್ಷ ರೂ ಗಳನ್ನು ಕೊಟ್ಟಿದ್ದಾರೆ.

ಅಮೇರಿಕೆಯಲ್ಲಿ ಭಾರತದ ರಾಯಭಾರಿಗಳಾಗಿರುವ ಶ್ರೀ ಅಸಫ ಅಲ್ಲಿಯವರು ಈ ವಾರದಲ್ಲಿ ಭಾರತಕ್ಕೆ ಬರಲಿದ್ದಾರೆ. ಅವರಿಗೆ ಕೇಂದ್ರ ಸರಕಾರದಲ್ಲಿ ಮಂತ್ರಿಪದ ದೊರೆವ ಸಂಭವವಿದೆ.

## ಪೂರ್ವ ಪಂಜಾಬ

ದಂಗೆಯ ಪರಿಸ್ಥಿತಿಯು ಪೂರ್ವ ಪಂಜಾಬದಲ್ಲಿ ಸುಧಾರಿಸುತ್ತ ನಡೆದಿದೆ. ಪಂ. ನೆಹರೂ, ಲಿಯಾಕತ ಅಲಿಖಾನ, ಸರದಾರ ನಿಶ್ತಾರ ಮತ್ತು ಸರದಾರ ಬಲದೇವಸಿಂಗರು ಗಲಭೆಯ ಪ್ರದೇಶಗಳಲ್ಲಿ ಸಂಚರಿಸಿದ ನಂತರ ಜಲಂಧರದಲ್ಲಿ ಒಟ್ಟುಗೂಡಿದರು.

ಅಮೃತಸರ, ಜಲಂಧರಗಳಲ್ಲಿ ಪೇಟೆಯ ವ್ಯವಹಾರವು ಎಂದಿನಂತೆ ಪ್ರಾರಂಭವಾಗಿದೆ. ಈ ಎರಡು ಜಿಲ್ಲೆಗಳಲ್ಲಲ್ಲದೆ ಗುರುದಾಸಪುರ ಜಿಲ್ಲೆಯಲ್ಲಿಯೂ ಶಾಂತವಾತಾವರಣವಿದೆ. ಆದರೆ ರ್ಯಾಡಕ್ಲಿಫ ತೀರ್ಪಿನಂತೆ ಪೂರ್ವಪಂಜಾಬಕ್ಕೆ ದೊರೆತ ಹತ್ತು ಹಳ್ಳಿಗಳಲ್ಲಿಯ ಹಿಂದೂ-ಶೀಖರನ್ನು ಮುಸ್ಲಿಂರು ಹೊಡೆದೋಡಿಸಿ ಅವನ್ನು ಆಕ್ರಮಿಸಿಕೊಂಡಿದ್ದಾರೆ. ಅಲ್ಲಿಂದ ನಿರಾಶ್ರಿತರು ಪಾರಾಗಿ ಬರುವಾಗ ಅವರಿಗೆ ರಾವಿ ನದಿದಾಟಲು ಪೂಲನ್ನು ಉಪಯೋಗಿಸಗೊಡಲಿಲ್ಲ. ಅವರು ತೆಪ್ಪಗಳಲ್ಲಿ ನದಿಯನ್ನು ದಾಟಿಬಂದರು ಎಂದು ಸರದಾರ ಬಲದೇವಸಿಂಗರ ಹೇಳಿಕೆಯಿದೆ.

ಪೂರ್ವ ಪಂಜಾಬದಲ್ಲಿ ಈಗ ದಂಗೆ ಇಳಿಮುಖವಾಗಿರುವದರಿಂದ ಅದನ್ನೆದುರಿಸುವ ಚಿಂತೆಗಿಂತ ನಿರಾಶ್ರಿತರ ಯೋಗಕ್ಷೇಮದ ಚಿಂತೆಯು ಹೆಚ್ಚಾಗಿದೆ. ಹೊಸ ಸರಕಾರವು ಆಡಳಿತೆಯ ಸೌಕರ್ಯಗಳು ವಿಶೇಷವಿಲ್ಲದಿದ್ದರೂ ತನ್ನ ಕಾರ್ಯವನ್ನು ಸಮಾಧಾನಕರವಾಗಿ ಸಾಗಿಸಿದೆ.

ಪೂರ್ವ ಪಂಜಾಬದಲ್ಲಿಯ ಸೇನೆಯು ದಿಲ್ಲಿ ಮುಖ್ಯ ಠಾಣ್ಯದಿಂದ ಅಪ್ಪಣೆಪಡೆದು ನಿರಾಶ್ರಿತರಿಗೆ ನೆರವಾಗುವ ಕಾರ್ಯ ಸಾಗಿಸಲು ವಿಳಂಬವಾಗುವದೆಂದು ಆ ಸೈನ್ಯವನ್ನು ದಿಲ್ಲಿ ಸೈನ್ಯದಿಂದ ಪ್ರತ್ಯೇಕಿಸಿ ಮೇ. ಜ. ರೀಜರ ಅಧಿಪತ್ಯದಲ್ಲಿ ಲಾಹೋರದಲ್ಲಿ ಇಡಲಾಗಿದೆ.

## ಪಶ್ಚಿಮ ಬಂಗಾಲ

ಮಹಾತ್ಮಾ ಗಾಂಧೀಯವರು ಇದೇ ಎರಡನೇ ತಾರೀಖಿಗೆ ನೌಖಾಲಿಗೆ ಸುಹ್ರವರ್ದಿಯೊಡನೆ ತೆರಳಬೇಕೆಂದು ನಿರ್ಧರಿಸಿದ್ದರು. ಆದರೆ ಒಂದನೇ ತಾರೀಖಿಗೆ ಕಲಕತ್ತೆಯಲ್ಲಿ ಅಕಸ್ಮಾತ್ತಾಗಿ ಜಾತೀಯ ದಂಗೆ ಪ್ರಾರಂಭವಾದ್ದರಿಂದ ಮಹಾತ್ಮರು ತಮ್ಮ ನೌಖಾಲಿ ಪ್ರಯಾಣವನ್ನು ರದ್ದುಗೊಳಿಸಿ ಕಲಕತ್ತೆಯ ಜನರಲ್ಲಿ ವಿವೇಕ ಜಾಗೃತವಾಗುವ ವರೆಗೆ ಉಪವಾಸವನ್ನು ಕೈಕೊಂಡಿದ್ದಾರೆ. ಕೇವಲ ನೀರು, ಉಪ್ಪು, ಸೋಡಾಪುಡಿ ಇಷ್ಟನ್ನೇ ಸೇವಿಸುವರು.

ಮಹಾತ್ಮರಿಗ ೭೮ ವರ್ಷದವರಿದ್ದು ಈ ಉಪವಾಸದಿಂದ ಅವರ ಮೇಲೆ ಅನಿಷ್ಟಪರಿಣಾಮವಾಗದಿರದು. ಅವರ ಪ್ರಾಣರಕ್ಷಿಸುವ ಹೊಣೆ ಕಲಕತ್ತೆಯ ಜನರದಾಗಿದೆ. ಈ ಮಹಾ ವಿಭೂತಿಯು ಕಲಕತ್ತೆಯಲ್ಲಿ ದೇಹತ್ಯಾಗ ಮಾಡಿದರೆ ಬಂಗಾಲದ ಮುಖಕ್ಕೆ ಕಪ್ಪು ಬಳಿದಂತಾಗುವದು. ಅದ್ದರಿಂದ ಕಲಕತ್ತೆಯ ಜನರು ಬುಧವಾರ ೩ನೇ ತಾರೀಖಿಗೆ ಶಾಂತಿಯನ್ನು ಸ್ಥಾಪಿಸಿ ಮಹಾತ್ಮರ ಪ್ರಾಣ ಉಳಿಸಬೇಕೆಂದು ಗವರ್ನರ ರಾಜಗೋಪಾಲಾಚಾರ್ಯರು ಒಂದು ಪ್ರಕಟನೆ ಹೊರಡಿಸಿದ್ದಾರೆ.

ಮುಖ್ಯ ಮಂತ್ರಿ ಡಾ. ಘೋಷರೂ ಒಂದು ಪ್ರಕಟನೆ ಹೊರಡಿಸಿ ಈ ಜನರಿಗೆ ಎಚ್ಚರಿಕೆ ಕೊಟ್ಟು ಕೊಟ್ಟು ಸಾಕಾಯಿತು. ಇನ್ನೂ ಉಗ್ರ ಉಪಾಯಗಳನ್ನು ಕೈಕೊಂಡು ಅವರನ್ನು ನಿಗ್ರಹಿಸಲಾಗುವದು ಎಂದು ಗರ್ಜಿಸಿದ್ದಾರೆ.

ಪಶ್ಚಿಮ ಬಂಗಾಲವು ಹಿಂದುಸ್ತಾನ ಒಕ್ಕೂಟದ ವೇಳೆಯನ್ನು ಸ್ವೀಕರಿಸಿ ತನ್ನ ಪ್ರಾಂತದಲ್ಲಿಯ ವೇಳೆಯನ್ನು ಒಂದು ತಾಸು ಹಿಂದಕ್ಕೆ ಸರಿಸಿದೆ. ಇದು ವರೆಗೆ ಬಂಗಾಲದ ವೇಳೆಯು ಒಂದು ತಾಸು ಮುಂದೆ ಇರುತ್ತಿತ್ತು.

ಕಾಶ್ಮೀರ ಸಂಸ್ಥಾನದಲ್ಲಿ ಪುನಃ ಪುಂಡಾಟಿಕೆ ಪ್ರಾರಂಭವಾದ್ದರಿಂದ ಅದನ್ನು ಹತ್ತಿಕ್ಕಲು ಕಾಶ್ಮೀರ ಮಹಾರಾಜರು, ಒಂದು ಸುಗ್ರೀವಾಜ್ಞೆ ಹೊರಡಿಸಿ ವಿತ್ತ ಪ್ರಾಣಗಳಿಗೆ ಅಘಾತವನ್ನುಂಟುಮಾಡುವ ಪುಂಡರನ್ನ ಗುಂಡಿಕ್ಕಿ ಕೊಲ್ಲಲು ಸೈನಿಕರಿಗೆ ಅಧಿಕಾರ ಕೊಟ್ಟಿದ್ದಾರೆ.

## ನ್ಯಾ. ಮೂ. ರಂಗಾಚಾರ್ಯ ಜಹಾಗೀರದಾರರು



ಮುಂಬಯಿಯ ಸುಪ್ರಸಿದ್ಧ ಹಾಯಕೋರ್ಟ ಅಡ್ವೋಕೇಟರಾದ ಶ್ರೀ ಜಹಾಗೀರದಾರ ರಂಗಾಚಾರ್ಯರು ಹೈಕೋರ್ಟಿನ ನ್ಯಾಯಮೂರ್ತಿ ಪಟ್ಟವನ್ನೇರಿದುದು ಕನ್ನಡಿಗರಿಗೆಲ್ಲ ಅಭಿಮಾನದ ಮಾತು. ಕಾಂಗ್ರೆಸ ಚಳವಳಿಗೆ ಸಹಾನುಭೂತಿಯನ್ನು ತೋರುತ್ತಿದ್ದ ಇವರು ಬ್ರಿಟಿಶ ಸರಕಾರದ ಕೋಪಕ್ಕೆ ಪಾತ್ರರಾಗಿದ್ದರು ಆದರೆ ೧೯೩೭ರಲ್ಲಿ ಕಾಂಗ್ರೆಸ ಮಂತ್ರಿಮಂಡಳವು ಸ್ಥಾಪಿತವಾದ ಮರುವರುಷವೇ ಅವರಿಗೆ ಸರಕಾರೀ ವಕೀಲ ಪದವಿ ದೊರೆಯಿತು. ೧೯೪೨ರಲ್ಲಿ ಪುನಃ ಆಂದೋಲನ ಪ್ರಾರಂಭವಾದ ಕೂಡಲೆ ಅವರು ಸರಕಾರೀ ವಕೀಲಗಿರಿಗೆ ತಿಲಾಂಜಲಿಯಿತ್ತರು. ಶ್ರೀ ಜಹಾಗೀರದಾರರಂಥ ಅಚ್ಚಕನ್ನಡಿಗರಿಗೆ ಸ್ವತಂತ್ರ ಹಿಂದುಸ್ಥಾನದ ಆರಂಭದಲ್ಲಿ ಮುಂಬಯಿ ಹಾಯಕೋರ್ಟಿನ ನ್ಯಾಯಮೂರ್ತಿಸ್ಥಾನಕ್ಕೇರುವ ಪ್ರಥಮ ಸುಯೋಗವು ದೊರೆತಿರುವದು. ಪರಮಾತ್ಮನು ಅವರಿಗೆ ದೀರ್ಘಾಯುರಾರೋಗ್ಯಗಳನ್ನು ದಯಪಾಲಿಸಿ ಅವರಿಂದ ಕನ್ನಡದ ಸೇವೆ ಇನ್ನಷ್ಟು ನಡೆಯುವಂತೆ ಪ್ರೇರೇಪಿಸಲಿ.

# ಪಾಕಿಸ್ತಾನ

## ಪಶ್ಚಿಮ ಪಂಜಾಬ

ಪಶ್ಚಿಮ ಪಂಜಾಬದಲ್ಲಿಯ ಪರಿಸ್ಥಿತಿಯನ್ನು ಕಣ್ಣಾರೆ ಕಾಣುವದಕ್ಕಾಗಿ ಪಂ. ನೆಹರೂರು ಲಿಯಾಕತಅಲಿಖಾನರೊಡನೆ ಸಂಚರಿಸುತ್ತಿರುವಾಗ ಕಂಡ ದೃಶ್ಯಗಳನ್ನು ಕಂಡು ಅವರ ಹೃದಯ ಕರಗಿ ನೀರಾಯಿತು. ಹೋದ ಹೋದಲ್ಲೆಲ್ಲ ಶೀಖರು ಹಿಂದುಗಳೂ ತಮ್ಮ ಗೋಳನ್ನು ಪಂ. ಜವಾಹರಲಾಲರಿಗೆ ನಿವೇದಿಸುತ್ತಿದ್ದರು. ಈ ದಂಗೆಯಲ್ಲಿ ಪುಂಡರು ಹೆಚ್ಚಾಗಿ ಸೇರಿರುವದೆನ್ನುವದಕ್ಕಿಂತ ಮುಸ್ಲಿಂ ಲೀಗಿನ ನ್ಯಾಶನಲ ಗಾರ್ಡ್ಸದವರೂ ಪೋಲೀಸರೂ ಹೆಚ್ಚಾಗಿ ತಮ್ಮ ಕೈವಾಡವನ್ನು ತೋರುತ್ತಿದ್ದಾರೆಂಬುದು ಪಂ. ನೆಹರೂರ ಪ್ರತ್ಯಕ್ಷಕ್ಕೆ ಬಂದಿತು.

ಹಿಂದುಸ್ತಾನಕ್ಕೆ ವರ್ಗಾಯಿಸಲ್ಪಟ್ಟ ಹಿಂದೂ ಶೀಖರಿಗೆ ಪಶ್ಚಿಮ ಪಂಜಾಬದಿಂದ ಹೊರಟು ಹೋಗಲು ಯಾವಸೌಕರ್ಯವೂ ಇಲ್ಲದಂತಾಗಿದೆ. ಇವರಿಗೆ ಪಾಕಿಸ್ತಾನ ಸರಕಾರದ ರಕ್ಷಣೆಯೂ ದೊರೆಯುತ್ತಿಲ್ಲ. ಹೀಗಾಗಿ ಇವರ ಗೋಳು ಹೇಳತೀರದು.

ಇನ್ನೂ ಉದಾಹರಣೆಗಾಗಿ ಎಂದರೆ ಶೇಖುಪುರ ಒಂದರಲ್ಲಿಯೆ ೧೫ ಸಾವಿರ ಮುಸ್ಲಿಮೇತರರನ್ನು ನಿರ್ನಾಮ ಮಾಡಲಾಗಿದೆಯಂತೆ. ಪಂ. ನೆಹರೂರು ಈ ಪಟ್ಟಣಕ್ಕೆ ಭೆಟ್ಟಿ ಕೊಟ್ಟಾಗ ಅಲ್ಲಿಯ ಮುಸ್ಲಿಂರು ಪಂ. ನೆಹರೂರ ಕಾರನ್ನು ನಿಲ್ಲಿಸಿ "ಈ ಯುದ್ಧವನ್ನು ನಿಲ್ಲಿಸಿ ಬಿಡಿ, ನಮಗೆ ಬೇಕಾಗಿಲ್ಲ"ಎಂದು ಕೇಳಿದರು. ಕೂಡಲೆ ಪಂ. ನೆಹರೂರು ಕೇಳಿದ "ನಾಚಿಕೆ ಬರುವದಿಲ್ಲವೆ? ವಿವೇಕವನ್ನೆಲ್ಲ ಕಳೆದುಕೊಂಡಿರುವಿರಾ? ಈ ಮನೆಗಳೂ ಹೆಣಗಳೂ ಏನನ್ನು ನಿರ್ದೇಶಿಸುತ್ತವೆ? ಈ ಯುದ್ಧವನ್ನು ಯಾರು ಮಾಡುತ್ತಿರುವರು?" ಎಂದು ಅರ್ಭಟಿಸಿದರು.

ಪಶ್ಚಿಮ ಪಂಜಾಬದಲ್ಲಿಯ ಮುಸ್ಲಿಮೇತರ ನಿರಾಶ್ರಿತರನ್ನು ವಿಮಾನದಿಂದಾದರೂ ಪಾರುಮಾಡುವದಾಗಿ ಪಂ. ನೆಹರೂರು ಆಶ್ವಾಸನ ಕೊಟ್ಟಿದ್ದಾರೆ.

## ಸಿಂಧ

ಪಾಕಿಸ್ತಾನದ ನೌಕರಿಯಲ್ಲಿ ಸೇರುವ ಬಗ್ಗೆ ಹೆಸರು ಕೊಟ್ಟ ಹಿಂದುಸ್ತಾನದ ಎಷ್ಟೋ ಮುಸಲ್ಮಾನ ಅಧಿಕಾರಿಗಳೂ ಇತರ ನೌಕರರೂ ಪಾಕಿಸ್ತಾನಕ್ಕೆ ಬಂದ ನಂತರ ಅಲ್ಲಿ ನೌಕರಿ ಸಿಗದೆ [illegible]ಗಾಗಿದ್ದಾರೆ. ಉಮೇದವಾರರಿಗಿಂತ ನೌಕರಿಗಳ ಸಂಖ್ಯೆ ಬಹಳ ಕಡಿಮೆ ಇದೆ ಎಂದು ಕರಾಚಿಯ ಸುದ್ದಿ ಇದೆ.

## ಹೈದರಾಬಾದ ಸ್ವಾತಂತ್ರ್ಯಕ್ಕೆ ಮನ್ನಣೆಯಿಲ್ಲ

### ದಿಲ್ಲಿ ರಾಯಭಾರದ ಉದ್ದೇಶವೇನು?

ಬ್ರಿಟಿಶ ಶಾಸನಸಭೆಯಲ್ಲಿಯೆ ಹೈದರಾಬಾದಕ್ಕೆ ಸ್ಥಾನ ದೊರೆಕಿಸಲು ನಿಜಾಮರು ನಡೆಸಿದ ಪ್ರಯತ್ನಗಳೆಲ್ಲ ವ್ಯರ್ಥವಾಗಲು ಅವರ ರಾಯಭಾರಿ ಸರ್ ವಾಲ್ಟರ ಮಾಂಕ್ಟನರು ಹಿಂದುಸ್ತಾನ ಸರಕಾರದೊಡನೆ ಮಾತುಕತೆ ನಡೆಸಲು ದಿಲ್ಲಿಗೆ ಹೋಗಿರುವರು. ಆದರೆ ಹಿಂದುಸ್ತಾನ ಸರಕಾರವು ಹೈದರಾಬಾದ ಸ್ವಾತಂತ್ರ್ಯವನ್ನು ಮನ್ನಿಸುವದಿಲ್ಲ. ಮತ್ತು ಆ ಸಂಸ್ಥಾನದೊಡನೆ ಒಡಂಬಡಿಕೆಯನ್ನು ಮಾಡಿಕೊಳ್ಳುವದಿಲ್ಲೆಂದು ತಿಳಿಯುತ್ತದೆ.

ಹೈದರಾಬಾದವು ಹಿಂದುಸ್ತಾನದಲ್ಲಿ ಸೇರಬೇಕಾದರೆ ಹೆಚ್ಚಿನ ಸೌಕರ್ಯಗಳನ್ನು ಕೇಳುತ್ತಿದೆ. ಆದರೆ ಇದಂತೂ ಸಾಧ್ಯವಿಲ್ಲ. ಪ್ರವೇಶ ಪತ್ರಕ್ಕೆ ನಿಜಾಮರು ಸಹಿ ಹಾಕದೆ ಇದ್ದರೆ ಅವರೊಡನೆ ಒಪ್ಪಂದ ಮಾಡಿಕೊಳ್ಳುವ ಪ್ರಶ್ನೆಯೇ ಏಳಲಿಕ್ಕಿಲ್ಲ.

### ರಾಷ್ಟ್ರಧ್ವಜಕ್ಕೆ ಅಪಮಾನ

ಹೈದರಾಬಾದ ಸಂಸ್ಥಾನದಲ್ಲಿ ಖಮ್ಮಂಪೇಟ ಮುಂತಾದ ಹಳ್ಳಿಗಳಲ್ಲಿಯ ಖಾಸಗೀ … ಗಳ ಮೇಲೆ ಇದ್ದ ರಾಷ್ಟ್ರಧ್ವಜವನ್ನು ಪೋಲೀಸರು ಕಿತ್ತೊಗೆದು ಅದಕ್ಕೆ ಅಪಮಾನ ಮಾಡಿದರೆಂದು ಅಲ್ಲಿಯವರು ಪಂ. ನೆಹರೂ ಮತ್ತು ಸರದಾರ ತಿಳಿಸಿದ್ದರು. ರಾಷ್ಟ್ರಧ್ವಜಕ್ಕೆ ಅಪಮಾನವಾದ ಸಂಗತಿ ಸುಳ್ಳು ಎಂದು ನಿಜಾಮ ಸರಕಾರವು ಪ್ರಕಟನೆ ಹೊರಡಿಸಿತು.

ಈಗ ಈ ವಿವಾದ ಬೆಳೆಯುತ್ತ ಹೋ… ಹಿಂದುಸ್ತಾನ ಸರಕಾರದವರು ನಿಜಾಮ… ಒಂದು ಪತ್ರ ಬರೆದು "ಹೈದರಾಬಾದ ಸಂಸ್ಥಾನದಲ್ಲಿ ಪರರಾಷ್ಟ್ರಧ್ವಜ ಹಾರಿಸುವದು ಅಪರಾಧವೆಂದು ಸಾರಿರುವಿರಿ ಆದರೆ ನೀವು ಹಿಂದುಸ್ತಾನದ ಧ್ವಜವನ್ನು ಪರರಾಷ್ಟ್ರ ಧ್ವಜವೆಂದು ಪರಿಗಣಿಸುವಿರಾ? ಹಿಂದುಸಸ್ತಾನ ಸರಕಾರ… ಸಂಸ್ಥಾನ ಶಾಖೆಯೊಡನೆ ಈ ಬಗ್ಗೆ ಮಾತುಕತೆ ನಡೆಸದೆ ಇಂಥ ಆಜ್ಞೆ ಹೊರಡಿಸಿದ್ದು ಅನುಚಿತವೆಂದು ತಿಳಿಸಿದೆ.

### ಸತ್ಯಾಗ್ರಹದ ಮುನ್ನಡೆ

ಹೈದರಾಬಾದದಲ್ಲಿ ನಿಜಾಮರ ಇತ್ತೀ… ಆಡಳಿತೆಯ ಧೋರಣದಿಂದ ತಮಗೆ … ತೊಂದರೆಯಾಗಿದೆಂದು ಸುರಪುರದ ರಾ… ಪುತ್ರರು ಸರದಾರ ಪಟೇಲರಲ್ಲಿ ದೂರಿಕೊಂಡಿದ್ದಾರೆ.

ವರಂಗಲ ಜಿಲ್ಲೆಯ ಫರೀಶಾಲ ತಾಲೂ…ದಲ್ಲಿ ಮುಸಲ್ಮಾನರು ಹೈದರಾಬಾದ ಧ್ವಜವನ್ನು ಹಿಡಿದುಕೊಂಡು ಮದ್ದುಗುಂಡುಗಳಿಂದ ಸುಸಜ್ಜಿತರಾಗಿ ಮೆರವಣಿಗೆ ತೆಗೆದು ಹಿಂದುಗಳು ಹೈದರಾಬಾದ ಧ್ವಜವನ್ನು ಹಾರಿಸಬೇಕೆಂದು ಒತ್ತಾಯಪಡಿಸಿದರು. ಅದು ಸಾಧ್ಯವಾಗಲಿಲ್ಲ. ಹಿಂದುಗಳು ಅಲ್ಲಿ ಶ್ರೀ ಚಂದ್ರರಾಯರ …ದಿಂದ ಹಿಂದುಸ್ತಾನ ರಾಷ್ಟ್ರ ಧ್ವಜವನ್ನು ಹಾ…ದರು. ಮುಸ್ಲಿಂರು ಆ ನಂತರ ಅವರನ್ನು ಬಂದೂಕಿನಿಂದ ಹೆದರಿಸಿದರು.

ಕೊಪ್ಪಳ ಜಿಲ್ಲೆಯ ಕಾತರಕಿಯಲ್ಲಿ … ಕೇಸರಿ ಜಯರಾಮಾಚಾರ್ಯರನ್ನು … ಕೊಪ್ಪಳಕ್ಕೆ ಕರೆದೊಯ್ಯಲಾಯಿತು. … ವಕೀಲರಾದ ಭೀಮಾಚಾರ್ಯ ಚಳಗೇರಿ … ೩॥ ತಿಂಗಳ, ಗಂಗಾವತಿಯ … ವಕೀಲ, ರಾಘವೇಂದ್ರರಾವ ಗಂ…ರಿಗೆ ನಾಲ್ಕು ನಾಲ್ಕು ತಿಂಗಳ ಶಿಕ್ಷೆ ವಿಧಿ…

ಸಪ್ಟೆಂಬರ ಎರಡನೇ ತಾರೀಖಿಗೆ ಹೈದ…ಬಾದದಲ್ಲಿ ಧ್ವಜ ದಿನವನ್ನು ಆಚರಿಸಲಾಯಿ… ಬೆರುವಾಡದಲ್ಲಿ ಹಿಂದೀ ರಾಷ್ಟ್ರಧ್ವಜ… ಹಚ್ಚಿಕೊಂಡು ಬಂದ ರೇಲ್ವೆ ಗಾಡಿಯು… ಗೆರಾ ರೇಲ್ವೆ ನಿಲ್ದಾಣವನ್ನು ಪ್ರವೇಶಿ… ಕೂಡಲೆ ನಿಜಾಮ ಪೋಲೀಸರು ಆ ಧ್ವಜವನ್ನು ಕಿತ್ತೊಗೆದರು.

## ಗಡಿನಾಡು

ಹಜಾರಾ ಜಿಲ್ಲೆಯಲ್ಲಿ ಜಾತೀಯ ಗ… ಪ್ರಾರಂಭವಾಗಿದೆ. ಮುಖ್ಯಮಂತ್ರಿ ಖಾ… ಖಾನರು ಆ ಪ್ರದೇಶವನ್ನು ಸಂದರ್ಶಿ… ಅಲ್ಲಿಯ ಪರಿಸ್ಥಿತಿ ಸ್ವಲ್ಪ ಹತೋಟಿಗೆ ಬಂ…ದಾಗಿಯೂ ಅಬೋಟಾಬಾದದಲ್ಲಿ … ಇನ್ನೂ ಜಾಗ್ರತೆ ವಹಿಸಬೇಕಾಗಿದೆಂದೂ ಮ… ಮಂತ್ರಿಗಳು ಹೇಳಿದರು.

ಗಡಿನಾಡ ಪ್ರಾಂತದ ಮಂತ್ರಿಗಳು … ಸರಕಾರದ ಶಾಖೆಗಳನ್ನು ಪುನಃ ಹಂಚ…ಬ್ಬಾರೆಂದು ತಿಳಿಯುತ್ತದೆ.

# ನಾಲ್ಕು ಮಾತು — ರಂಗನಾಥ ದಿವಾಕರ

## ಪಂಜಾಬ

ರಕ್ತಮಯ ಯಾದವೀ ಕಲಹವಾಗಬಾರದು, ಅದರೂ ಆ ಸಮಯದಲ್ಲಿ ಬ್ರಿಟಿಶರು ಇಲ್ಲಿ ಇರಬಾರದು, ಬ್ರಿಟಿಶರ ಕರಿಗಾಲು ಇಲ್ಲಿಂದ ಕೂಡಲೆ ಕಿತ್ತಬೇಕು, ಈ ಉದ್ದೇಶಗಳನ್ನಿಟ್ಟುಕೊಂಡು ಕಾಂಗ್ರೆಸ್ಸಿನ ಮುಖಂಡರು ಪಾಕಿಸ್ತಾನಕ್ಕೆ ಒಪ್ಪಿದರು. ಭೂಮಿ ಹೋದರೂ ರಕ್ತ ಚೆಲ್ಲಲಿಲ್ಲ, ಎಂಬ ಸಮಾಧಾನ ದೊರೆತೀತು ಎಂದು ಹಲವರಿಗೆ ಎನಿಸಿತ್ತು. ನನಗೆ ಹಾಗೆ ಎನಿಸಿರಲಿಲ್ಲ. ಪಾಕಿಸ್ತಾನದ ನಿರ್ಮಾಣವು ಹಿಂದು-ಮುಸಲ್ಮಾನ ಅಥವಾ ಜಾತೀಯ ಪ್ರಶ್ನೆಯ ಬಿಡುಗಡೆಯಲ್ಲ ಎಂದೇ ಅನೇಕರಂತೆ ನನಗಾದರೂ ಎನಿಸುತಿತ್ತು. ಅದರಂತೆಯೇ ಆಯಿತು. ಬ್ರಿಟಿಶರು ಹೋದರು ಆದರೆ ರಕ್ತಪಾತ ತಪ್ಪಲಿಲ್ಲ. ಪಾಕಿಸ್ತಾನ ಕೊಡದಿದ್ದರೆ ಕದಾಚಿತ್ ರಕ್ತಪಾತದ ಪ್ರಮಾಣವು ಇದಕ್ಕೂ ಹೆಚ್ಚು ಆಗುತಿತ್ತು, ಇಷ್ಟೇ ಅಲ್ಲ, ಅದು ಅಖಿಲ ಹಿಂದುಸ್ತಾನ ವ್ಯಾಪಿಯಾಗುತ್ತಿತ್ತು. ಈಗ ಆದ ರಕ್ತಪಾತವೇನೂ ಕಡಿಮೆಯಾಗಲಿಲ್ಲ. ರಕ್ತಪಾತಕ್ಕಿಂತ ವಿತ್ತಪಾತವು (ವಿತ್ತನಾಶವು) ಹೆಚ್ಚು ಆಗಿದೆ. ಎಲ್ಲಕ್ಕೂ ಘೋರತರವಾದ ಹಾನಿಯೆಂದರೆ ಬಲವಂತದಿಂದ ಧರ್ಮಾಂತರ ಹಾಗೂ ಸ್ತ್ರೀಯರ ಮೇಲೆ ಬಲಾತ್ಕಾರ ಹಾಗೂ ಬಲವಂತದಿಂದ ಅವರ ಅಪಹರಣ ಹಾಗೂ ವಿವಾಹ. ಈ ಕ್ಷಣದವರೆಗೆ ಕೊಲ್ಲಲಾದವರ ಸಂಖ್ಯೆ ಒಂದು ಲಕ್ಷಕ್ಕೆ ಕಡಿಮೆ ಇರಲಿಕ್ಕಿಲ್ಲ. ವಿತ್ತಹಾನಿಯು ಕನಿಷ್ಠ ೧೦—೧೫ ಕೋಟಿಗೆ ಮಿಕ್ಕಿದೆ. ಯುದ್ಧದಿಂದ ಇದಕ್ಕೂ ಹೆಚ್ಚಿನ ಹಾನಿ ಏನಾಗಬಲ್ಲದು? ಮೇಲಾಗಿ ಇನ್ನು ಎಲ್ಲವೂ ಕೊನೆಗೊಂಡಿದೆ ಎಂದು ಹೇಳಲಾಗುವದಿಲ್ಲ. ಮತ್ತೆ ಯಾವಾಗ ಭುಗಿಲ್ ಎಂದು ದ್ವೇಷಾಗ್ನಿ ಏಳುವದೋ ಹೇಳಲಾಗುವದಿಲ್ಲ. ಲಾಹೋರ, ಅಮೃತಸರ ಮುಂತಾದ ಪಟ್ಟಣಗಳಲ್ಲಿ ಆದ ಹಾನಿಯನ್ನು ತುಂಬಬೇಕಾದರೆ ಹತ್ತೆಂಟು ವರುಷಗಳಾದರೂ ಬೇಕು.

x x x

ಬ್ರಿಟಿಶರು ಇದ್ದಾಗ ಕೂಡ ಜಾತೀಯ ದಂಗೆಗಳು ಅನೇಕ ಕಡೆಗೆ ಆದವು. ಆದರೆ ಈ ಪ್ರಮಾಣದ ಮೇಲೆ ಎಂದೂ ಆಗಲಿಲ್ಲ. ಪಂಜಾಬದಲ್ಲಿ ನಡೆದ ಹತ್ಯಾಕಾಂಡವನ್ನು ನೋಡಿದರೆ ಬಂಗಾಲದಲ್ಲಿಯ ಹಿಂಸಾಚಾರವು ಏನೂ ಅಲ್ಲ ಎಂದು ಹೇಳಬಹುದು. ರೂಪಾಯಿಯಲ್ಲಿ ನಾಲ್ಕಾಣೆ ಸಹ ಅಲ್ಲ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಹೀಗೆ ಆಗಲು ಕಾರಣವೇನು? ನನಗೆ ತಿಳಿದ ಮಟ್ಟಿಗೆ ಎರಡು ಮುಖ್ಯ ಕಾರಣಗಳು. ಬ್ರಿಟಿಶರು ಭೇದನೀತಿಯ ಮೂಲಕ ಆಳುತಿದ್ದರೂ ಹಿಂದು-ಮುಸಲ್ಮಾನರಲ್ಲಿ ಕಾಯಂ ಹೊಡೆದಾಟ ಇರಬೇಕೆಂದು ಅವರು ಎಣಿಸಿದ್ದರೂ ಸಮಾಜವು ವಿಸ್ಕಲಿತವಾಗಿ ವ್ಯವಹಾರವು ಕೆಟ್ಟಾಗುವಷ್ಟು ಗೊಂದಲವು ಅವರಿಗೆ ಬೇಕಾಗಿರಲಿಲ್ಲ. ಅದುದರಿಂದ ಅವರು ಸಕಾಲದಲ್ಲಿಯೆ ಅಂಥ ಜಾತೀಯ ದಂಗೆಗಳನ್ನು ನಿಲ್ಲಿಸಿಬಿಡುತ್ತಿದ್ದರು. ಅವರು ಹಿಂದುಗಳೂ ಅಲ್ಲ ಮುಸಲ್ಮಾನರೂ ಅಲ್ಲ ಆದುದರಿಂದ ಇಂಥ ಮಾತುಗಳಲ್ಲಿ ಅವರು ತಕ್ಕಮಟ್ಟಿಗೆ ನಿಷ್ಪಕ್ಷಪಾತದಿಂದ ನಡೆಯುತ್ತಿದ್ದರೆಂದು ಹೇಳಬಹುದು. ಅವರು ಇಬ್ಬರಿಗೂ ಬೇಕಾಗುವಂತೆ ನಡೆದುಕೊಳ್ಳಬೇಕಾಗುತ್ತಿತ್ತು. ಎರಡನೆ ಕಾರಣವೇನೆಂದರೆ ಹಿಂದು ಮುಸಲ್ಮಾನರಲ್ಲದ ಬ್ರಿಟಿಶ್ ಅಥವಾ ಗುರಖಾ ಸೈನ್ಯವನ್ನು ಅವರು ಉಪಯೋಗಿಸುತ್ತಿದ್ದರು. ಇದಲ್ಲದೆ ಒಟ್ಟಿಗೆ ಅವರ ಬಿಗುವು ಹಾಗೂ ಶಿಸ್ತು ನಮ್ಮ ಅಧಿಕಾರಿಗಳ ಹಾಗೂ ಮ್ಯಾಜಿಸ್ಟ್ರೇಟ ಮುಂತಾದವರ ಬಿಗುವಿನಕಿಂತ ಹೆಚ್ಚು ಎಂಬಲ್ಲಿ ಸಂಶಯವಿಲ್ಲ.

x x x

ಪಂಜಾಬದಲ್ಲಿ ಇಂಥ ದೊಡ್ಡ ಪ್ರಮಾಣದ ಮೇಲೆ ಹತ್ಯಾಕಾಂಡ ನಡೆಯಲು ಮೂರು ನಾಲ್ಕು ಕಾರಣಗಳು. ಅಲ್ಲಿ ೯೩ ನೆ ಕಲಮಿನ ರಾಜ್ಯವು ಈ ಮುಂಚೆ ೭-೮ ತಿಂಗಳು ನಡೆಯುತ್ತ ಬಂದಿತು. ಆ ಕಾಲದಲ್ಲಿ ಸರಕಾರ ಹಾಗೂ ಜನತೆ ಇವರ ಸಂಬಂಧವೆ ತಪ್ಪಿಹೋಯಿತು. ದೇಶದ ತುಂಬ ದೊಂಬಿಗಳಾಗಿದ್ದರೂ ಖಿಜರ ಹಯಾತಖಾನರ ಆಡಳಿತದಲ್ಲಿ ಎಲ್ಲೆಲ್ಲಿಯೂ ಒಂದು ಸಹ ದೊಂಬಿ ಆಗಿರಲಿಲ್ಲ. ಆದರೆ ಲೀಗಿನವರು ಅವರ ಆಡಳಿತವನ್ನು ಕಿತ್ತಿಹಾಕಲು ಕಾರಣರಾದರು. ಮುಂದೆ ಬಂದುದು ೯೩ ಕಲಮಿನ ಆಳಿಕೆ. ಎರಡನೆಯ ಕಾರಣವೆಂದರೆ ಗಡಿ ರಕ್ಷಕ ಸೈನ್ಯವು ತನ್ನ ಕರ್ತವ್ಯವನ್ನು ಚೆನ್ನಾಗಿ ಮಾಡಲಿಲ್ಲ. ಆದುದರಿಂದ ಅದನ್ನು ಈಗ ಕಳ್ಳಿಬಿಡುವ (೨೯ ಅಗಸ್ಟ ನಿರ್ಣಯ) ಪ್ರಸಂಗವು ಬಂದುಬಿಟ್ಟಿತು. ಮೂರನೆಯ ಕಾರಣವೇನೆಂದರೆ ಪೋಲೀಸ ಹಾಗೂ ಸೈನ್ಯ ಪಡೆಯಲ್ಲಿರುವವರು ಆಯಾ ಜಾತಿಯವರ ಪಕ್ಷಪಾತದಿಂದ ನಡೆದರು. ಇಷ್ಟೇ ಅಲ್ಲ. ಪ್ರತ್ಯಕ್ಷ ಕೊಲೆ ಸುಲಿಗೆಗಳನ್ನು ನಡೆಸಿದರು. ಲಾಹೋರದಲ್ಲಿಯಂತೂ ಇಂಥ ಮಾತುಗಳು ಅನೇಕ ಸಾರೆ ಆದವು. ಯಾರನ್ನವಲಂಬಿಸಿ ಶಾಂತಿ ಸಂರಕ್ಷಣೆ ಮಾಡಬೇಕೆಂದು ಸರಕಾರದವರು ಹವಣಿಸಿದರೋ ಅವರೇ ಹೀಗೆ ಮಾಡಿದ ಬಳಿಕ ಮುಂದೆ ಗತಿ ಏನು? ಬೇಲಿಯೆ ಎದ್ದು ಹೊಲ ಮೇಯ್ದಂತೆ. ಇನ್ನು ಒಂದು ಹೆಚ್ಚಿನ ಕಾರಣವೇನೆಂದರೆ, ಪಂಜಾಬ ಇದು ಎಲ್ಲಕ್ಕೂ ಹೆಚ್ಚು ಸೈನಿಕರನ್ನು ಕೊಟ್ಟ ಪ್ರಾಂತ. ಸೈನ್ಯದಿಂದ ನಿವೃತ್ತರಾದ ಲಕ್ಷಾಂತರ ಸಿಪಾಯರು ಅಲ್ಲಿರುವರು. ಅವರಲ್ಲಿ ಅನೇಕರು ತಮ್ಮ ಹಳೆಯ ಶಸ್ತ್ರಾಸ್ತ್ರಗಳನ್ನು ಹಿಡಿದು ಹತ್ಯಾಕಾಂಡಕ್ಕೆ ನಿಂತುಬಿಟ್ಟರು. ಈ ಎಲ್ಲ ಕಾರಣಗಳ ಮೂಲಕ ಪಂಜಾಬದಲ್ಲಿ ನ ಭೂತೋ ನ ಭವಿಷ್ಯತಿ ಎಂಬಂಥ ಜಾತೀಯ ಹತ್ಯೆ ನಡೆದು ಬಿಟ್ಟಿತು. ಶಿವಾಜಿ, ಔರಂಗಜೇಬರ ಕಾಲದಲ್ಲಿ ಸಹ ಇಷ್ಟು ದೊಡ್ಡ ಪ್ರಮಾಣದಲ್ಲಿ ಕೊಲೆ ಸುಲಿಗೆಗಳು ನಡೆದವೊ ಇಲ್ಲವೊ ಎಂಬದನ್ನು ಹೇಳುವದು ಕಠಿಣ.

x x x

ಇನ್ನೂ ಈ ಹತ್ಯಾಕಾಂಡದ ಕೊನೆಯಾಯಿತು ಎಂದು ಹೇಳಲು ಬರುವಂತಿಲ್ಲ. ಆದರೆ ಪಾಕಿಸ್ತಾನ ಹಾಗೂ ಇಂಡಿಯಾ ಸರಕಾರ ಹೀಗೆ ಇಬ್ಬರೂ ಒಕ್ಕಟ್ಟಿಗೆ ಕೂಡಿ ಮೊನ್ನೆ ೨೯ ನೆ ತಾರೀಖಿನ ದಿವಸ ಗಡಿ ರಕ್ಷಾ ದಳದ ವಿಸರ್ಜನೆ ಮಾಡಿಬಿಟ್ಟರು. ಸಂರಕ್ಷಣ ಹಾಗೂ ಅದೇ ರೀತಿ ನಿರಾಶ್ರಿತರ ಪ್ರಶ್ನೆಯನ್ನು ಎರಡೂ ಸರಕಾರದವರು ಸಹಕಾರದಿಂದ ಬಿಡಿಸಬೇಕೆಂದು ನಿರ್ಣಯಿಸಿರುವರು. ಆ ಪ್ರಕಾರ ತಮ್ಮ ತಮ್ಮ ಸೈನ್ಯಗಳಿಗೆ ಅಪ್ಪಣೆ ಕೊಟ್ಟು ಬಿಟ್ಟಿದ್ದಾರೆ.

x x x

ಟೀಕೆ ಮಾಡುವವರಿಗೆ ಬೇಕಾದಾಗ ಬೇಕಾದಷ್ಟು ಅಸ್ಪದವಿದ್ದೇ ಇರುವದು. ಇಂಥ ಗಲಭೆಗಳು ನಡೆದಾಗಂತೂ ಅಂಥ ಟೀಕೆಗೆ ಇನ್ನೂ ಹೆಚ್ಚು ಅಸ್ಪದವಿರುವದು. ಆದರೆ ಬರೀ ಟೀಕೆ ಮಾಡುತ್ತ ಕೂಡುವದರಿಂದ ಈ ಗಲಭೆಗಳು ಅಥವಾ ಅವುಗಳ ಮೂಲಕ ಉಂಟಾದ ಭಯಂಕರ ಪರಿಸ್ಥಿತಿ ಇವು ಸುಧಾರಿಸಲಾರವು. ನಿಜವಾಗಿ ನೋಡಿದರೆ ಈ ಸಮಯದಲ್ಲಿ ಪ್ರತಿಯೊಬ್ಬ ನಾಗರಿಕನ ಕರ್ತವ್ಯವೇನೆಂದರೆ ಉಭಯ ಸರಕಾರದವರು ಕೈಕೊಂಡ ಶಾಂತಿ ಸ್ಥಾಪನೆಯ ಕಾರ್ಯದಲ್ಲಿ ಮನಸಾ ಸಹಾಯ ಸಹಕಾರಗಳನ್ನು ನೀಡುವದು. ಅದು ತಮ್ಮಿಂದ ಆಗದೆ ಹೋಗುತಿದ್ದರೆ ಕನಿಷ್ಠ ಪಕ್ಷದಲ್ಲಿ ಸುಮ್ಮನೆ ಕುಳಿತು ಶಾಂತಿ ಸ್ಥಾಪನೆಗಾಗಿ ಪರಮಾತ್ಮನ ಪ್ರಾರ್ಥನೆ ಮಾಡಬೇಕು. ಬುದ್ಧಿಭೇದಕಾರಕ ಟೀಕೆ ಮಾಡುತ್ತ ಕೂಡುವದು ಈಗ ಅತೀವ ವಿಘಾತಕ.

## ಬಂಗಾಲ

ಪಂಜಾಬದ ಪರಿಸ್ಥಿತಿ ಎಷ್ಟು ಕೆಡುತ್ತ ಹೋಗಿದೆಯೊ ಅಷ್ಟು ಬಂಗಾಲದ ಪರಿಸ್ಥಿತಿ ಸುಧಾರಿಸುತ್ತ ಹೋಗಿದೆ. ಇದೊಂದು ಚಮತ್ಕಾರವೇ ಆಯಿತೋ ಏನೋ ಎಂಬಂತೆ ಆಗಿ ಬಿಟ್ಟಿದೆ. ಆದರೆ ಪ್ರಾರಂಭವಾದುದು ಕಲಕತ್ತೆಯಲ್ಲಿ ಹಾಗು ನವಖಾಲಿಯಲ್ಲಿ ಎಂಬುದನ್ನು ನಾವು ಮರೆಯಕೂಡದು. ಹೋದ ವರುಷದ ಅಗಸ್ಟ ೧೬ ನೇ ತಾರೀಖನ್ನು ಯಾರೂ ಮರೆಯುವಂತಿಲ್ಲ. ಏಕೆಂದರೆ ಅದೇ ದಿನ ಕಲ್ಕತ್ತೆಯಲ್ಲಿ ಹತ್ಯಾಕಾಂಡಕ್ಕೆ ಪ್ರಥಮತಃ ಪ್ರಾರಂಭವಾಯಿತು. ಆದರೆ ಈಗ ಅಲ್ಲಿ ನಡೆದ ಸಂಗತಿಗಳನ್ನು ನೋಡಿದರೆ ಬಂಗಾಲವು ಪಂಜಾಬಕ್ಕೆ ಹಾಗೂ ಇಡೀ ಹಿಂದುಸ್ತಾನಕ್ಕೆ ಪಾಠ ಕಲಿಸಬಹುದೋ ಏನೋ ಎಂಬಂತೆ ನಡೆದಿದೆ. ಇಷ್ಟೇ ಅಲ್ಲ, ಪೂರ್ವ ಬಂಗಾಲದ ಮಂತ್ರಿಗಳಾದ ನಾಝಿಮುದ್ದೀನರು ಸಮಿಶ್ರ ಮಂತ್ರಿಮಂಡಲವನ್ನು ಸ್ಥಾಪಿಸಬೇಕೆಂದು ಪ್ರಯತ್ನ ಪಡುತಲಿದ್ದಾರೆ. ಪಶ್ಚಿಮ ಬಂಗಾಲದವರೂ ಆ ಮಾತಿಗೆ ಒಪ್ಪಿದರೆ ಮಾತ್ರ ಅಂಥ ಮಂತ್ರಿಮಂಡಲಗಳು ಅಸ್ತಿತ್ವದಲ್ಲಿ ಬರಲು ಶಕ್ಯವಾಗುವದು. ಪೂರ್ವ ಹಾಗು ಪಶ್ಚಿಮ ಬಂಗಾಲವು ಈ ಪ್ರಕಾರ ಬಾಂಧವ್ಯದಿಂದ ಹಾಗು ಸಹಕಾರದಿಂದ ನಡೆಯಲೊಪ್ಪಿಕೊಂಡು ಹಾಗೆ ಪ್ರತ್ಯಕ್ಷ ನಡೆದರೆ ಪಾಕಿಸ್ತಾನದಿಂದ ಉಂಟಾದ ಅನೇಕ ಪ್ರಶ್ನೆಗಳು ತಮ್ಮಿಂದ ತಾವೆ ಪರಿಹಾರವಾಗುವವು.

x x x

ಗಡಿನಿರ್ಣಯ ಸಮಿತಿಯವರು ಮಾಡಿದ ನಿರ್ಣಯಗಳು ಪೂರ್ವ ಪಶ್ಚಿಮ ಬಂಗಾಲದ ಮುಖಂಡರಿಗೆ ಸಮ್ಮತವಾಗಿಲ್ಲ. ಮೊದಲೇ ಕೈಕಟ್ಟಿಕೊಂಡದ್ದರಿಂದ ಅವರು ಈಗ ಸುಮ್ಮನಿರಬೇಕಾಗಿದೆ ಹೊರತು ಆ ನಿರ್ಣಯ ಕೊನೆಯವರೆಗೆ ಸಮ್ಮತವಾದೀತೆಂದು ಹೇಳಲಿಕ್ಕಾಗುವದಿಲ್ಲ. ಉದಾಹರಣಾರ್ಥವಾಗಿ ಮುರ್ಶಿದಾಬಾದ ಜಿಲ್ಲೆಯಲ್ಲಿ ೧೦೦ ಕ್ಕೆ ೬೫ ರಷ್ಟು ಮುಸಲ್ಮಾನರಿದ್ದರೂ ಅದು ಈಗ ಪಶ್ಚಿಮ ಬಂಗಾಲಕ್ಕೆ ಜೋಡಿಸಲಾಗಿದೆ. ಅದೇ ರೀತಿ ಖುಲ್ನಾ ಜಿಲ್ಲೆಯಲ್ಲಿ ೧೦೦ ಕ್ಕೆ ೬೦ ರಷ್ಟು ಹಿಂದುಗಳಿದ್ದರೂ ಅದು ಪೂರ್ವ ಬಂಗಾಲದಲ್ಲಿ ಬಿದ್ದಿದೆ. ಚಿತಗಾಂಗ ಜಿಲ್ಲೆಯಲ್ಲಿ ಕಾಡು ಜನರ ಸಂಖ್ಯೆ ಲಕ್ಷಾಂತರವಿರುವದು. ಅವರು ಸಾಮಾನ್ಯತಃ ಹಿಂದುಗಳಿಗೆ ಹೊಂದಿಕೊಂಡು ಇರತಕ್ಕವರು. ಆದರೆ ಅವರೆಲ್ಲ ಪೂರ್ವ ಬಂಗಾಲದಲ್ಲಿ ಈಗ ಸೇರಿಸಲ್ಪಟ್ಟಿದ್ದಾರೆ. ಜಲ್ಪಾಯಗುರಿ ಹಾಗು ದೀನಾಜಪುರ ಜಿಲ್ಲೆಗಳು ಪಶ್ಚಿಮ ಬಂಗಾಲಕ್ಕೆ ಸೇರಿಸಲಾಗಿದ್ದರೂ ಪಶ್ಚಿಮ ಬಂಗಾಲದವರು ಅಲ್ಲಿಗೆ ಹೋಗಬೇಕಾದರೆ ಬಿಹಾರದೊಳಗಿಂದ ಇಲ್ಲವೆ ಪಾಕಿಸ್ತಾನದ ಭಾಗವಾದ ಪೂರ್ವ ಬಂಗಾಲದೊಳಗಿಂದ ಹಾಯಬೇಕಾಗುವದು. ಈ ಎಲ್ಲ ಮಾತುಗಳನ್ನು ಸರಿಪಡಿಸಬೇಕಾದರೆ ಪೂರ್ವ ಪಶ್ಚಿಮ ಬಂಗಾಲಗಳ ಪರಸ್ಪರ ವಿಚಾರವಿನಿಮಯ ಸಮ್ಮತಿ ಸಹಕಾರಗಳಿಂದಲೇ ಆಗಬೇಕಾಗುವದು. ಹೀಗೆ ಪ್ರಾರಂಭವಾದ ಸಹಕಾರವು ವ್ಯಾಪಾರ, ಉದ್ಯೋಗ ಮುಂತಾದ ಕ್ಷೇತ್ರಗಳಲ್ಲಿಯೂ ಪ್ರಾರಂಭವಾದರೆ ಪೂರ್ವ ಹಾಗು ಪಶ್ಚಿಮ ಬಂಗಾಲಗಳು ಪ್ರತ್ಯೇಕ ಪರಸ್ಪರ ವಿರುದ್ಧ ರಾಷ್ಟ್ರಗಳು ಎಂದು ಅನ್ನಲು ಅಸ್ಪದವೇ ಉಳಿಯಲಿಕ್ಕಿಲ್ಲ.

## ಗಡಿನಾಡು

ಗಡಿನಾಡಿನ ಪರಿಸ್ಥಿತಿ ಈ ಹೊತ್ತು ಸರಿಯಾಗಿ ಏನಿದೆ, ನಾಳೆ ಏನು ಆಗಬಹುದು ಇದನ್ನು ಹೇಳುವದು ಬಹಳ ಕಠಿಣವಾಗಿ ಬಿಟ್ಟಿದೆ. ಗಡಿನಾಡ ಗಾಂಧಿಯೆನಿಸುವ ಅಬ್ದುಲ ಗಫರಖಾನರ ಅನುಯಾಯಿಗಳು ಇನ್ನು ಪಠಾಣಿಸ್ಥಾನದ ಸ್ಥಾಪನೆಗಾಗಿ ಪ್ರಯತ್ನ ಮಾಡುತಕ್ಕವರು ಎಂಬುದು ಸ್ಪಷ್ಟವಿದೆ. ಪಠಾಣಿಸ್ಥಾನವನ್ನು ಸ್ಥಾಪಿಸಕೂಡದೆಂದು ಲೀಗಿನವರು ಹಟ ಹಿಡಿಯುವರು ಎಂಬುದಾದರೂ ಅಷ್ಟೇ ಸ್ಪಷ್ಟವಿದೆ. ಅಂದ ಬಳಿಕ ಅಲ್ಲಿ ತಿಕ್ಕಾಟವಾಗಿ ಆ ತಿಕ್ಕಾಟವು ರಕ್ತಪಾತದಲ್ಲಿ ಪರಿಣಮಿಸಲು ತಡವಾಗಲಿಕ್ಕಿಲ್ಲ. ಅದನ್ನು ತಪ್ಪಿಸಬೇಕೆಂದು ಪಾಕಿಸ್ತಾನ ಸರಕಾರದವರು ಪ್ರಯತ್ನ ಮಾಡುವದು ಸ್ವಾಭಾವಿಕ. ಆದರೆ ಅದು ಎಷ್ಟರಮಟ್ಟಿಗೆ ಸಾಧಿಸುವದೋ ಹೇಳಲಿಕ್ಕಾಗುವದಿಲ್ಲ. ಪಠಾಣರು ಬಹಳ ಹಟಮಾರಿ ಜನರು. ಮೇಲಾಗಿ ಅಫಗಾನಿಸ್ತಾನವು ಪಠಾಣರನ್ನು ತಮ್ಮ ಕಡೆಗೆ ಎಳೆದುಕೊಳ್ಳಬೇಕೆಂದು ಹೊಂಚು ಹಾಕಿ ಕುಳಿತಿದೆ. ಪಠಾಣರು ಹಾಗು ಅಫಗಾನಿಸ್ತಾನದವರು ಒಂದೇ ಜಾತಿಯವರು ಇರುವದರಿಂದ ಅವರಲ್ಲಿ ಸ್ನೇಹಭಾವವು ಬೆಳೆಯಲು ಹೆಚ್ಚು ತಡವಾಗಲಿಕ್ಕಿಲ್ಲ. ಹಾಗೆ ಆದ ಪಕ್ಷದಲ್ಲಿ ಹಿಂದುಸ್ತಾನದವರು ಹಾಗು ಪಾಕಿಸ್ತಾನದವರು ಇಬ್ಬರೂ ತಮ್ಮ ಸಂರಕ್ಷಣೆ ಹಾದಿಯನ್ನು ಕಂಡುಕೊಳ್ಳಬೇಕಾದೀತು. ಅತ್ತ ದುರ್ಲಕ್ಷ್ಯ ಮಾಡಿ ನಡೆಯಲಿಕ್ಕಿಲ್ಲ. ಇನ್ನು ಆ ವಿಷಯದಲ್ಲಿ ಹಿಂದುಸ್ತಾನ ಪಾಕಿಸ್ತಾನಗಳು ಪರಸ್ಪರ ಸಹಕರಿಸಲು ಅವಶ್ಯವಿದೆ. ಇಲ್ಲವೆ ಹೋದರೆ ಇಬ್ಬರಿಗೂ ಅದರಿಂದ ಭಯವಿದೆ.

x x x

ಇವೆಲ್ಲ ಪ್ರಶ್ನೆಗಳು ಪಾಕಿಸ್ತಾನ ಕೊಟ್ಟ ಬಳಿಕವೇ ಉತ್ಪನ್ನವಾದುವುಗಳು. ಇವಲ್ಲದೆ ಇನ್ನು ಅನೇಕ ಪ್ರಶ್ನೆಗಳು ತಲೆದೋರುತಿವೆ. ಅವುಗಳಲ್ಲಿ ಸದ್ಯಕ್ಕೆ ಮುಖ್ಯವಾದುದೆಂದರೆ ಲಕ್ಷಾಂತರ ಜನರು ತಮ್ಮ ಸರ್ವಸ್ವವನ್ನು ಪಶ್ಚಿಮ ಪಂಜಾಬದಲ್ಲಿ ಬಿಟ್ಟು ಅವರು ಪೂರ್ವ ಪಂಜಾಬಕ್ಕೆ ಬರಲು ಸಿದ್ಧವಾಗಿ ನಿಂತಿದ್ದಾರೆ. ಅವರಿಗೆ ತಮ್ಮ ಹೊಲಮನೆಗಳ ಪರಿವೆಯೇ ಇಲ್ಲ. ಉದಾಹರಣಾರ್ಥವಾಗಿ ಮಾಂಟಗೊಮೆರಿ ಎಂಬ ಪಶ್ಚಿಮ ಪಂಜಾಬದ ಒಂದು ಜಿಲ್ಲೆಯಿದೆ. ಅದನ್ನು ಈಗ ೫೦ ವರುಷದಿಂದ ಸೀಖ ಜನರು ದುಡಿದುಡಿದು ಸಮೃದ್ಧಗೊಳಿಸಿರುವರು. ಒಂದು ಎಕರೆಗೆ ಕನಿಷ್ಠ ರೂ. ೨೦೦೦ ಬೆಲೆ ಈಗ ಬರುತ್ತಿರುವದು. ಆದರೆ ಅಂಥದೆಲ್ಲವನ್ನು ಬಿಟ್ಟು ಅಲ್ಲಿಯ ಸೀಖರು ಪೂರ್ವ ಪಂಜಾಬದ ದಾರಿಯನ್ನು ಹಿಡಿದಿರುವರು. ಹೀಗೆ ಒಮ್ಮೆಲೆ ಲಕ್ಷಾಂತರ ಜನರು ಸ್ಥಳಾಂತರ ಮಾಡಿದರೆ ಅವರ ವ್ಯವಸ್ಥೆ ಇಡುವದು ಒಂದು ಘೋರತರವಾದ ಕಾರ್ಯವಾಗಿ ಬಿಡುವದು. ಹೇಳಲು ಕಾರಣವೇನೆಂದರೆ ಇನ್ನು ಇಂಥ ಎಷ್ಟು ಪ್ರಶ್ನೆಗಳು ಉದ್ಭೂತವಾಗುವವೋ ಹೇಳಲಿಕ್ಕಾಗುವದಿಲ್ಲ. ಇಂಥ ಪ್ರಶ್ನೆಗಳನ್ನು ವ್ಯಕ್ತಿಗಳು ಇಲ್ಲವೇ ಸಂಘಗಳು ಬಿಡಿಸುವದೂ ಸಾಧ್ಯವಿಲ್ಲ. ಸರಕಾರದವರೇ ಬಿಡಿಸಬೇಕಾಗುವದು. ಹಿಂದುಸ್ತಾನ ಸರಕಾರವು ಭದ್ರವಾಗಿ ಉಳಿದು ಬೆಳೆಯಬೇಕಾದರೆ ಇಂಥ ಪ್ರಶ್ನೆಗಳನ್ನು ಯೋಗ್ಯ ರೀತಿಯಿಂದ ಬಿಡಿಸಲೇಬೇಕು. ಅಂಥ ಕೆಲಸದಲ್ಲಿ ಜನತೆಯ ಸಹಕಾರವು ಅವಶ್ಯ ಬೇಕು.

## ಭಾರತ ಸಂಸ್ಥಾನಗಳು

ಕೊಚ್ಚಿ ಮಹಾರಾಜರು ತಮ್ಮ ಸಂಸ್ಥಾನದಲ್ಲಿ ಜವಾಬ್ದಾರ ರಾಜ್ಯ ಪದ್ಧತಿಯನ್ನು ಅಗಸ್ಟ ೨೯ ರಿಂದ ಪ್ರಾರಂಭಿಸಿದ್ದಾರೆ. ಶ್ರೀ ಪನ್ನಂಪಲ್ಲಿ ಗೋವಿಂದ ಮೇನನರನ್ನು ಮುಖ್ಯಮಂತ್ರಿಗಳನ್ನಾಗಿ ನೇಮಿಸಲಾಗಿದೆ. ಡಾ. ಎ. ಆರ್. ಕೆ. ನಾಯರ, ಶ್ರೀ ಸಿ. ಆರ್. ಈಯುಣ್ಣಿ ಇವರು ಮತ್ತು ಕೆ ಅಯ್ಯಪ್ಪನ ಅವರು ಮಂತ್ರಿಗಳಾಗಿದ್ದಾರೆ. ಮುಖ್ಯ ಮಂತ್ರಿಗಳಿಗೆ ಹಿಂದೀ ಒಕ್ಕೂಟದೊಡನೆ ಸಂಬಂಧ, ಶಿಕ್ಷಣ, ಆಡಳಿತ ಶಾಖೆಗಳು, ಡಾ. ಎ. ನಾಯರರಿಗೆ ಗೃಹ, ಕೃಷಿ, ಉದ್ಯೋಗ, ಸಾರ್ವಜನಿಕ ಆರೋಗ್ಯ ಮುಂತಾದ ಶಾಖೆಗಳು, ಶ್ರೀ ಈಯುಣ್ಣಿ ಅವರಿಗೆ ಆಹಾರ, ಕಂದಾಯ, ಒಕ್ಕಲತನ ಶಾಖೆಗಳು ಮತ್ತು ಕೆ. ಅಯ್ಯಪ್ಪನರಿಗೆ ಲೋಕೋಪಯೋಗಿ, ಸಾರಿಗೆ, ಸಂಪರ್ಕ, ನೀರಾವರಿ ಈ ರೀತಿ ಶಾಖೆಗಳನ್ನು ಹಂಚಿಕೊಡಲಾಗಿದೆ.

ಜುನಾಗಢ ಸಂಸ್ಥಾನವು ಪಾಕಿಸ್ತಾನದಲ್ಲಿ ಸೇರಿದರೂ ಅದರ ಒಳಾಡಳಿತೆಯಲ್ಲಿ ಯಾವ ಪ್ರಕಾರದ ವ್ಯತ್ಯಯ ಬಾರದಿರುವದರಿಂದ ತಮ್ಮ ಪ್ರಜೆಗಳು ಯಾವ ವಿಧವಾದ ಚಿಂತೆಗೊಳಗಾಗಬಾರದು. ಶಾಂತತೆಯನ್ನು ಕಾಯ್ದುಕೊಳ್ಳಬೇಕು ಎಂದು ಜುನಾಗಢದ ನವಾಬರು ಪ್ರಕಟನೆ ಹೊರಡಿಸಿದ್ದಾರೆ.

ಜಮಖಂಡಿಯ ಉದ್ದೇಶ ಮಹಲಿನ ವೃಕ್ಷದ ಮೇಲಿನ ಕಾವಿ ಧ್ವಜವನ್ನು ಕೆಲವು ಸ್ವಯಂಸೇವಕರು ಸ್ವಾತಂತ್ರ್ಯ ದಿನದಂದು ಕಿತ್ತು ಅಲ್ಲಿ ರಾಷ್ಟ್ರಧ್ವಜವನ್ನು ನೆಟ್ಟಿದ್ದರು. ಉದ್ದೇಶ ಸ್ವಾಮಿಗಳು ಖಂಡಿಸಿ ರಾಷ್ಟ್ರಧ್ವಜವು ತಮಗಾದರೂ ವಂದ್ಯವಿರುವದಾಗಿಯೂ ಧರ್ಮಧ್ವಜವಾದ ಕಾವೀ ಧ್ವಜದ ಜೊತೆಗೆ ರಾಷ್ಟ್ರಧ್ವಜವನ್ನು ಹಾರಿಸಲು ತಮ್ಮ ಆಕ್ಷೇಪವಿಲ್ಲವೆಂದೂ ಹೇಳಿ ತಮ್ಮ ಧ್ವಜವನ್ನು ಎಂದಿನಂತೆ ಹಾರಿಸಲು ಅವಕಾಶ ಮಾಡಿಕೊಡಬೇಕಾಗಿ ಪ್ರಜಾ ಪರಿಷತ್ತಿನ ಉಪಾಧ್ಯಕ್ಷರಾದ ಡಾ. ಪಾಲ್ಶೇಕರರಿಗೆ ಪತ್ರ ಬರೆದಿದ್ದಾರೆ.

ದಕ್ಷಿಣ ಸಂಸ್ಥಾನಗಳ ಒಕ್ಕೂಟದಲ್ಲಿ ಸೇರುವ ನರೇಂದ್ರರಿಗೆ ಖಾಸಗಿ ವೆಚ್ಚಕ್ಕೆಂದು ೧೯೪೬-೪೭ ರ ಹಿಂದಿನ ಮೂರು ವರ್ಷಗಳ ಸರಾಸರಿ ಆದಾಯ ತೆಗೆದು ಆ ಆದಾಯದ ಮೊದಲಿನ ೫ ಲಕ್ಷಕ್ಕೆ ನೂರಕ್ಕೆ ೧೦ ರಂತೆ ನಂತರದ ೫ ಲಕ್ಷಕ್ಕೆ ನೂರಕ್ಕೆ ೫ ರಂತೆ, ಮತ್ತು ೧೦ ಲಕ್ಷಕ್ಕಿಂತ ಅದಾಯ ಹೆಚ್ಚಾದರೆ ನೂರಕ್ಕೆ ೭॥ ಯಂತೆ ಕೊಡಲಾಗುವದು. ಆದರೆ ಈ ಹಣವು ಯಾವಾಗಲೂ ೫೦೦೦೦ ರೂ. ಗಳಿಗೆ ಮಿಕ್ಕಬಾರದು. ಈ ಹಣದ ಮೇಲೆ ಯಾವ ಕರವನ್ನೂ ಹೇರಬಾರದು ಎಂದು ಶ್ರೀ ಮುನಶಿಯವರು ಸೂಚಿಸಿದ್ದಾರೆ.

## ಬೆಳೆ ಇಲ್ಲವೆ ಅಳಿ

(೬ ನೇ ಪುಟದಿಂದ)

ಈ ಆರ್ಥಿಕ ಸಿಂಹಾವಲೋಕನವು, ಭಾರತದ ವಿಭಜನೆ ಮತ್ತು ದ್ವಾಲರಿನ ಕೊರತೆಯಿಂದ ಜಗತ್ತಿನಲ್ಲುಂಟಾದ ಆರ್ಥಿಕ ಬಿಕ್ಕಟ್ಟು ಇವುಗಳಿಂದಾಗಿ ನಿರಾಶಾದಾಯಕವೆಂದು ತೋರುತ್ತದೆ. ಸದ್ಯಕ್ಕೆ ಸರಕಾರವು ಪಂಜಾಬದ ದಂಗೆಯ ಪ್ರಶ್ನೆಯಲ್ಲಿ ತೊಡಗಿದ್ದರೂ, ಆರ್ಥಿಕ, ವಾಣಿಜ್ಯ, ಉದ್ಯೋಗ ಮುಂತಾದ ಖಾತೆಗಳ ಮಂತ್ರಿಗಳು ಈ ಬಿಕ್ಕಟ್ಟನ್ನು ಆಳವಾಗಿ ಅಭ್ಯಸಿಸಿ ಅವನ್ನು ಬಿಡಿಸಲು ಯೋಜನೆಗಳನ್ನು ಹಾಕುವದರಲ್ಲಿ ತೊಡಗಿ ಯಾವದೇ ಕೊನೆಯ ನಿರ್ಣಯವು ಇನ್ನು ತೆಗೆದುಕೊಳ್ಳಲ್ಪಡದಿದ್ದರೂ ಮಂತ್ರಿಗಳನ್ನೂ ಸರಕಾರೇತರರನ್ನೂ ಒಳಗೊಂಡ ಯೋಜನಾ ಸಮಿತಿಯೊಂದು ನೇಮಿಸಲ್ಪಡುವ ಸಂಭವವಿದೆ. ರಾಷ್ಟ್ರೀಯ ಯೋಜನಾ ಸಮಿತಿಯ ಧೀರ ಮುನ್ನರಾಗಿದ್ದ ಪಂ. ಜವಾಹರಲಾಲರೇ ಈ ಸಮಿತಿಯ ಪ್ರಮುಖರಾಗಬಹುದು.

(ಸಂಗ್ರಹೀತ)

## ಬೆಂಗಳೂರು—ಮೈಸೂರು

ರಾಜ್ಯಾಂಗ ಸುಧಾರಣೆಯ ಬಗ್ಗೆ ತಮ್ಮ ವರದಿಯನ್ನು ಶ್ರೀಮನ್ಮಹಾರಾಜರವರಿಗೆ ಈ ತಿಂಗಳಲ್ಲಿ ಸಲ್ಲಿಸುವುದಾಗಿಯೂ ಅಕ್ಟೋಬರಿನ ಕೊನೆಗೆ ಆ ವರದಿಯ ಫಲಿತಾಂಶ ಹೊರಬೀಳುವುದಾಗಿಯೂ ದಿವಾನರು ಅಗಸ್ಟ ೩೦ ರಲ್ಲಿ ಒಂದು ಘೋಷಣೆ ಹೊರಡಿಸಿದರು.

ರಾಜಕೀಯ ಸುಧಾರಣೆಗಳ ಬಗ್ಗೆ ತಾವು ಸಲಹೆ ಮಾಡಲು ತಡವಾದುದಕ್ಕೆ ಕಾರಣ ಕೊಟ್ಟು ಇನ್ನಷ್ಟು ಕಾಲಾವಕಾಶಬೇಕೆಂದು ಕೇಳಿಕೊಳ್ಳುವ ಪ್ರಯತ್ನವೇ ದಿವಾನರ ಇಂದಿನ ಹೇಳಿಕೆಯ ಸಾರಾಂಶ. ಅವರ ಈ ಹೇಳಿಕೆ ಬಲ ಪಂಕ್ತಿಯಾಘಾತ ನಡಂತಿದೆ. ಯಾರಿಗೂ ಇದರಿಂದ ತೃಪ್ತಿಯಾಗುವಂತಿಲ್ಲ—ಎಂದು ಮೈಸೂರು ಕಾಂಗ್ರೆಸ್ ಪ್ರಧಾನಕಾರ್ಯದರ್ಶಿಗಳಾದ ಶ್ರೀ ಎ. ಜಿ. ರಾಮಚಂದ್ರರಾಯರು ಪತ್ರಿಕೆಗಳಿಗೆ ಕೊಟ್ಟ ಹೇಳಿಕೆಯಲ್ಲಿ ಉಲ್ಲೇಖಿಸಿದ್ದಾರೆ.

ಬೆಂಗಳೂರು ಸ್ಟೇಟ್ ಬಿ. ಡಿವಿಜನ್ ಲೀಗ್‌ನಲ್ಲಿ ಚೆಕ್‌ಮ್ಯಾಟರ್ಸ್ ಕ್ರಿಕೆಟ್ ಕ್ಲಬ್ಬಿನವರು ಟೆಕ್ನಲಾಜಿಕಲ್ ಇನ್ಸ್ಟಿಟ್ಯೂಟಿನವರನ್ನು ಅಗಸ್ಟ ೨೫ ರಲ್ಲಿ ಸೆಂಟ್ರಲ್ ಕಾಲೇಜ್ ಹೊಸ ಮೈದಾನದಲ್ಲಿ ಅವು ೮ ವಿಕೆಟ್ಟುಗಳಿಂದ ಸೋಲಿಸಿದರು.

ಬೆಂಗಳೂರು ವಾಣೀವಿಲಾಸ ಇನ್‌ಸ್ಟಿಟ್ಯೂಟ್ ಹಿಂದೀ ಛಾತ್ರ ಸಂಘದ ೫ ನೆಯ ವರ್ಷದ ಪ್ರಾರಂಭೋತ್ಸವವು ಅಗಸ್ಟ ೨೫ ರಲ್ಲಿ ಬೆಂಗಳೂರಿನ ವಿದ್ಯಾಧಿಕಾರಿಗಳಾದ ಶ್ರೀ ಎ. ಸಿ. ದೇವೇಗೌಡರ ಅಧ್ಯಕ್ಷತೆಯಲ್ಲಿ ನೆರವೇರಿತು.

ಮೈಸೂರು ಶಸ್ತ್ರಾಸ್ತ್ರ ಕಾಯದೆಯಲ್ಲಿ ಸೆಪ್ಟಂಬರ್ ೧೫ ರಿಂದ ಅಪ್ಪಣೆಯಿಲ್ಲದೆ ಕತ್ತಿ, ಕಲ್ಲು, ಕಠಾರಿ, ಭರ್ಜಿ, ಬಿಲ್ಲು ಬಾಣಗಳನ್ನು ಹಿಡಿದುಕೊಂಡು ಓಡಾಡಿದರೆ ೩ ವರ್ಷ ಶಿಕ್ಷೆ ಇಲ್ಲವೆ ದಂಡ ಅಥವಾ ಎರಡೂ ವಿಧಿಸಲಾಗುವುದೆಂದು ತಿದ್ದುಪಡಿ ಮಾಡಲಾಗಿದೆ.

ಮೈಸೂರಲ್ಲಿ ಉಗ್ರಗಲಭೆಗಳು ಮತ್ತು ಶಾಸನ ವಿರುದ್ಧ ಕಾರ್ಯಕ್ರಮಗಳು ನಡೆಯುವದಾದರೆ ಅವುಗಳನ್ನು ತಡೆಗಟ್ಟಿ ಶಾಂತಿ ಪಾಲನಮಾಡುವುದಕ್ಕಾಗಿ ಮೈಸೂರು ಸರಕಾರದವರು ಕ್ರಿಮಿನಲ್‌ಲಾ ಅಮೆಂಡ್‌ಮೆಂಟ್ ಕಾಯದೆಯನ್ನು ಆಚರಣೆಗೆ ತಂದಿದ್ದಾರೆ.

'ತಾಯಿನಾಡು' ದಿನ ಪತ್ರಿಕೆಯು ಮೇಲೆ ಸತ್ಯಾಗ್ರಹ ಸಂಬಂಧದ ಸುದ್ದಿಗಳನ್ನು ಪರಿಶೀಲನೆಗೆ ಒಪ್ಪಿಸಬೇಕೆಂದು ನಿರ್ಬಂಧ ಹೇರಲಾದ್ದರಿಂದ ಅದರ ನಿಷೇಧಾರ್ಥವಾಗಿ ಅದು ಪ್ರಕಟನೆ ನಿಲ್ಲಿಸಲು ನಿರ್ಣಯಿಸಿದೆ. ಇದರಂತೆ 'ಡೇಲಿ ನ್ಯೂಸ್' ಇಂಗ್ಲಿಷ್ ದಿನಪತ್ರಿಕೆಯೂ "ಪೌರವಾಣಿ" ಎಂಬ ಕಾಂಗ್ರೆಸ್ ತೀವ್ರ ಪಕ್ಷದ ಪತ್ರಿಕೆಯೂ ಪ್ರಕಟನೆ ನಿಲ್ಲಿಸಲು ನಿರ್ಧರಿಸಿವೆ.

ಕ್ಯಾತ್ಸಂದ್ರದಲ್ಲಿ ಬೆಂಗಳೂರಿಂದ ಬರುತ್ತಿದ್ದ ಶೀಂದಿ ಲಾರಿಯನ್ನು ನಿಲ್ಲಿಸಿ ಪೀಪಾಯಿಗಳನ್ನು ನಾಶಮಾಡಿದ ಆರೋಪದ ಮೇಲೆ ಶ್ರೀಗಳಾದ ಗುಬ್ಬಣ್ಣ, ಗುಂಡೂರಾವ್, ದಾಸಪ್ಪ, ಹನುಮಂತಯ್ಯ, ಕೃಷ್ಣಯ್ಯಂಗಾರ, ಪುಟ್ಟರಾಮಯ್ಯ ಮೊದಲಾದವರ ಬಂಧನವಾದ ಸುದ್ದಿಯಿದೆ.

ಮೈಸೂರು ಸಂಸ್ಥಾನದ ಮುಸ್ಲಿಂ ಲೀಗ್ ಕಾರ್ಯಕಾರಿ ಸಮಿತಿಯು ಅಗಸ್ಟ ೨೯ ರಲ್ಲಿ ಶ್ರೀ ಮಹಮ್ಮದ ಶರೀಫರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ದೇಶದಲ್ಲಿ ಆಹಾರ ಪರಿಸ್ಥಿತಿ ವಿಷಮವಾಗಿರುವದರಿಂದ ಕಾಂಗ್ರೆಸ್ಸು ಸತ್ಯಾಗ್ರಹ ಮುಂದುವರಿಸಬೇಕೆಂದು ಪ್ರಾರ್ಥಿಸುವ ನಿರ್ಣಯ ಅಂಗೀಕೃತವಾಯಿತೆಂದೂ ಸತ್ಯಾಗ್ರಹದ ಬಗ್ಗೆ ಮುಸ್ಲಿಮರು ತಾಟಸ್ಥ್ಯದಿಂದಿರಲು ತೀರ್ಮಾನವಾಯಿತೆಂದೂ ಗೊತ್ತಾಗಿದೆ.

ಸಂಸ್ಥಾನದ ಎಲ್ಲ ಜಿಲ್ಲೆಗಳಲ್ಲಿ ವಾಹನ ಸಂಚಾರದ ಬಗ್ಗೆ ಸಲಹೆ ಕೊಡಲು ಸಮಿತಿಗಳನ್ನು ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. ಅಲ್ಲದೆ, ಆಯಾ ಜಿಲ್ಲೆಯ ಎಕ್ಸಿಕ್ಯುಟಿವ್ ಎಂಜಿನಿಯರೂ ಡಿಸ್ಟ್ರಿಕ್ಟ್ ಜಿಲ್ಲಾ ಟ್ರಾಫಿಕ್ ಸೂಪರಿಂಟೆಂಡೆಂಟರೂ ಅಧಿಕಾರಿ ಸದಸ್ಯರಾಗಿರುವರು.

ಬೆಂಗಳೂರು ನಗರದಲ್ಲಿ ಜಾಡಮಾಲಿಗಳೆಲ್ಲರೂ ಮುಳಸೀ ಕೋಟೆಯ ಮೈದಾನದಲ್ಲಿ ಅಗಸ್ಟ ೩೬ ರಲ್ಲಿ ಸಭೆಸೇರಿ ತಮ್ಮದೊಂದು ಸಂಘ ಸ್ಥಾಪಿಸಿಕೊಂಡದ್ದಲ್ಲದೆ ಈಗ ಹೂಡಿರುವ ಮುಷ್ಕರದ ಬಗ್ಗೆ ಅಧ್ಯಕ್ಷರೂ ಕಾರ್ಯದರ್ಶಿಗಳೂ ಸರಕಾರದೊಡನೆ ಸಂಧಾನ ನಡೆಸಬೇಕೆಂದು ತೀರ್ಮಾನಿಸಿದರು.

ಮೈಸೂರು ಸರಕಾರದ ರೇಶಿಮೆ ಶಾಖೆಯ ಮುಖ್ಯಾಧಿಕಾರಿಗಳಾಗಿದ್ದು ಇತ್ತೀಚೆಗೆ ರೇಶಿಮೆ ಸಂಶೋಧನೆಯ ಸಂಸ್ಥೆಗೆ ಮುಖ್ಯಾಧಿಕಾರಿಗಳಾಗಿ ವರ್ಗವಾಗಿದ್ದ ಶ್ರೀ ಎಚ್. ಎಸ್. ಗೋವಿಂದರಾಯರು ಕಳೆದ ಕೆಲವು ತಿಂಗಳುಗಳಿಂದ ಕಾಹಿಲೆಯಲ್ಲಿದ್ದು ಅಗಸ್ಟ ೨೬ ರಲ್ಲಿ ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ನಿಧನ ಹೊಂದಿದರು.

ವಿಶ್ವೇಶ್ವರಪುರದಲ್ಲಿ ಮಳೆಯ ಬೆಸೆಯಿಂದ ಒಂದು ಮನೆಯ ಪ್ರಾಕಾರ ಕುಸಿದುಬಿದ್ದು ಅದರಿಂದ ಗಾಯಹೊಂದಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದ ಶ್ರೀ ನರಸಿಂಹನಾಯುಡು ಎಂಬವರು ಅಗಸ್ಟ ೨೫ ರಲ್ಲಿ ಮೃತಪಟ್ಟರು.

ಅಗಸ್ಟ ೨೫-೨೬ ರಲ್ಲಿ ಮೈಸೂರು ಜಿಲ್ಲಾಧಿಕಾರಿಗಳು ಹಲವು ಪುರ ಪ್ರಮುಖರನ್ನೂ ವರ್ತಕರನ್ನೂ ಕರೆಸಿಕೊಂಡು ಕಾಂಗ್ರೆಸ್ಸಿನ ಸತ್ಯಾಗ್ರಹದ ಸಂದರ್ಭದಲ್ಲಿ ಅಂಗಡಿಗಳನ್ನು ಮುಚ್ಚಬಾರದೆಂದೂ ಹಾಗೆ ಮುಚ್ಚಿದಲ್ಲಿ ಪುಂಡ ಪೋಕರಿಗಳು ಅಂಗಡಿಗಳನ್ನು ಲೂಟಿ ಮಾಡಬಹುದೆಂದೂ ಹೇಳಿದುದಾಗಿ ಗೊತ್ತಾಗಿದೆ.

ಔಷಧಿಗಳ ಮೇಲಿನ ನಿಯಂತ್ರಣಾಜ್ಞೆಯನ್ನು ೧೯೪೭ ನೆಯ ಎಪ್ರಿಲ್ ೨೬ ರಿಂದ ರದ್ದು ಮಾಡಲಾಗಿದೆಯಾದರೂ ಮಕ್ಕಳಿಗೆ ಬೇಕಾದ ಗ್ಲೂಕೋಸ್ ದಿ ಮುಂತಾದ ಆಹಾರ ಸಂಬಂಧ ಪದಾರ್ಥಗಳನ್ನು ಅಧಿಕ ಲಾಭಕ್ಕೆ ಮಾರದಂತೆ ತಡೆಗಟ್ಟುವ ಶಾಸನವು ಅನ್ವಯಿಸುವುದೆಂದು ಸರಕಾರ ಪ್ರಕಟಿಸಿದೆ.

ಕರಾಚಿಯ ಡಾ. ಚೋಯಿಥರಾಮ ಗಿಡ್ವಾನಿಯವರು ಒಂದನೇ ತಾರೀಖಿಗೆ ಕ್ವೆಟ್ಟಾಕ್ಕೆ ಭೆಟ್ಟಿಕೊಟ್ಟು ನಿರಾಶ್ರಿತರ ಶಿಬಿರಗಳನ್ನು ಸಂದರ್ಶಿಸಿ ಶಿಸ್ತನ್ನು ಕಾಯ್ದುಕೊಳ್ಳಬೇಕೆಂದು ಅವರಿಗೆ ಹೇಳಿ ನಿರಾಶ್ರಿತರ ಸ್ಥಳಾಂತರದ ವ್ಯವಸ್ಥೆಯ ಬಗ್ಗೆ ಸರ್ ಜೊಫ್ರೀಯವರೊಡನೆ ಚರ್ಚಿಸಿದರು.

ಈ ಪತ್ರಿಕೆಯು ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ 'ಲೋಕಶಿಕ್ಷಣ ಟ್ರಸ್ಟ' ದ ಪರವಾಗಿ ಹ. ರಾ. ಪುರೋಹಿತರಿಂದ ಮುದ್ರಿತವಾಗಿ ಪ್ರಕಟವಾಯಿತು.




### ಮುಂಬಯಿ ಶೇರಪೇಟೆ

ಸೆಪ್ಟಂಬರ ೨— ಇಂದು ಮುಂಬಯಿ ಶೇರಪೇಟೆಯು ಅನಧಿಕೃತವಾಗಿ ಮುಚ್ಚಲ್ಪಟ್ಟಿತ್ತು. ಮಹಾತ್ಮರ ಉಪವಾಸದ ಬಗ್ಗೆ ಸಹಾನುಭೂತಿ ತೋರುವ ಸಲುವಾಗಿ ಸದಸ್ಯರು ಕೆಲಸಕ್ಕೆ ಹೋಗಲಿಲ್ಲ.

ಖಾಸಗಿ ಧಾರಣೆಗಳು ಸ್ವಲ್ಪ ಇಳಿತಾಯವಲ್ಲೆ ಇದ್ದವು. ಟಾಟಾ ಸ್ಟೀಲ ಡಿಫರ್ಡ್ ಮೊದಲು ರೂಪಾಯಿ ೧೮೦೫ ರಲ್ಲಿದ್ದು ಅನಂತರ ೧೮೨೦ ಕ್ಕೇರಿತು. ಇಂಡಿಯನ್ ಆಯರ್ನ್ ರೂಪಾಯಿ ೩೩-೮-೦ ಯಲ್ಲಿತ್ತು. ಇಂಡಿಯಾ ಸ್ಟೀಂ ಶಿಪ್ ರೂ. ೧೪-೪-೦ ಯಲ್ಲಿಯೂ ಇಂಡಿಯನ್ ಶುಗರ್ ರೂ. ೨—೨—೬ ರಲ್ಲೂ ಡಾಲ್ಮಿಯಾ ಜೈನ್ ಏರ್ ವೇಸ್ ರೂ. ೬ ಕ್ಕಿಂತ ಹೆಚ್ಚಾಗಿಯೂ ಬಾಂಬೆ ಡಾಯಿಂಗ್ ರೂ ೧೦೦೦ ದಲ್ಲೂ ಇದ್ದವು.

ಸೆಕ್ಯುರಿಟಿ ಮಾರ್ಕೆಟ್ಟು ಸ್ಥಿತ್ಯಂತರ ಹೊಂದದೆ ಹಾಗೇ ಇತ್ತು. ೧೯೪೬ ರ ೩% ಪರಿವರ್ತನೀಯ ಸಾಲ ರೂ. ೧೦೦—೧೪—೦ ಯಲ್ಲೂ ೩% ಮ್ಯುನಿಸಿಪಲ್ ಸಾಲ ಹಾಗೇ ರೂ. ೧೦೦-೧೫-೦ ರಲ್ಲಿತ್ತು. ಪುನಃ ಮಾರ್ಕೆಟ್ಟು ಸೆಪ್ಟಂಬರ ಐದರಲ್ಲಿ ತೆರೆಯುವುದು.

### ಚಿನ್ನ—ಬೆಳ್ಳಿ

ಖಾಸಗಿ ವ್ಯವಹಾರದಲ್ಲಿ ಸಟ್ಟಾಫಟ್ಟೆಯ ಪ್ರಗತಿಪರ ಭಾಗದಲ್ಲಿ ಮೇಲಿನಂತೆ ಮಹಾತ್ಮರ ಉಪವಾಸದಿಂದ ಇಳಿಮುಖವುಂಟಾಯಿತು. ಅಲ್ಲಿ ಇಲ್ಲಿ ಕೆಲ ಕಡೆ ಕೊಡುಕೊಳ್ಳು ನಡೆದಿತ್ತು. ಮುನ್ನೋಟದ ಗಟ್ಟಿ ಹಿಡಿತದ ದೆಸೆಯಿಂದ ಚಿನ್ನದ ಬೆಲೆಯೇರಿತು. ಆದರೆ ಬೆಳ್ಳಿಯದು ಇಳಿಂವತಾಯಿತು. ಗಟ್ಟಿದ ಕಡೆಯ ಹೇಳಿಕೆ ನಿರಾಶಾದಾಯಕವಿದ್ದು ಕೊಳ್ಳುವುದಕ್ಕಿಂತ ಮಾರಲು ಬರುವುದು ಹೆಚ್ಚಾಗಿತ್ತು.

ಫಾರ್ವರ್ಡ ಚಿನ್ನ ೧೧೧—೧೦—೦ ರಿಂದ ೧೧೧-೬-೦ ರ ನಡುವೆ ಓಲಾಡಿತು. ಫಾರ್ವರ್ಡ ಬೆಳ್ಳಿ ೧೭೩—೨—೦ ರಲ್ಲಿ ಪ್ರಾರಂಭವಾಗಿ ೧೭೨—೪—೦ ಕ್ಕಿಳಿಯಿತು.

ಅಧಿಕೃತ ಕ್ಲೋಸಿಂಗ್‌ದರ ಹೊಸ ಬಂಗಾರ ರೂ. ೧೧೧—೧೪—೦, ರೆಡಿಗಿನಿ ೭೪—೪—೦ ರೆಡಿ ಬೆಳ್ಳಿ (೯೯೯) ರೂ. ೧೭೫, ರೆಡಿ ಬೆಳ್ಳಿ (೯೯೬) ರೂ. ೧೭೪—೯—೦

ಅಡ್ಜಸ್ಟಮೆಂಟ್ ದರ: ಚಿನ್ನ ೧೧೧—೬—೦, ಬೆಳ್ಳಿ ರೂ. ೧೭೪-೫-೦

### ಅರಳೆ

ಮೇಲಿನಂತೆ ಇಲ್ಲಾದರೂ ಗಾಂಧೀಜಿಯ ಉಪವಾಸಕ್ಕೆ ಸಹಾನುಭೂತಿ ತೋರಿ ವ್ಯವಹಾರ ನಿಲ್ಲಿಸಲ್ಪಟ್ಟಿತ್ತು. ಹೊಸ ಕಾಂಟ್ರಾಕ್ಟಿನ ಬಗ್ಗೆ ನಿರ್ಧಾರ ತೆಗೆದುಕೊಂಡಿಲ್ಲ. ಖಾಸಗಿ ವ್ಯವಹಾರದಲ್ಲಿ ಸ್ಯಾಟಲ್‌ಮೆಂಟ್ ದರ ರೂ. ೪೫೬-೮-೦ ಇತ್ತು.

### ಸಾಂಗಲಿ ಪೇಟೆ

| | |
|---|---|
| ಅರಿಷಣ ಹೇರು | ೧೧೦-೧೧೨ |
| ಮೆಣಸಿನಕಾಯಿ ಹೇರು ,, | ೮೦-೧೦೦ |
| ಶೇಂಗಾ ಖಂಡಿ | ೧೨೮— |

### ಶಿವಮೊಗ್ಗೆ ಅಡಿಕೆ

| | |
|---|---|
| ದೇಶಾವರ ನಂ ೧ ಮಣ ೧ಕ್ಕೆ | ೫೨-೫೫ |
| ,, ,, ೨ | ೪೮-೫೨ |
| ,, ,, ೩ | ೪೬-೪೮ |
| ರಾಜಾಅಲವು | ೪೭-೫೨ |
| ನುಲಿ | ೪೪—೫೦ |
| ಬೆಟ್ಟೆ ವಂತಿ | ೩೨-೩೪ |
| ಬೆಟ್ಟೆ | ೨೮-೩೦ |

### ಹುಬ್ಬಳ್ಳಿ

| | |
|---|---|
| ಹೊಸ ಜಯವಂತ ಹತ್ತಿ ನಂ. ೧ | ೨೬೦-೨೭೦ |
| „ ನಂ. ೨ | ೨೪೦-೨೪೫ |
| „ ನಂ. ೩ | ೨೨೦-೨೩೦ |
| ಹಳೇ ಜಯವಂತ ಹತ್ತಿ | ೨೭೫-೨೯೦ |
| ಜಿನ ಹೊಸದು | ೧೭೦-೧೮೩ |
| ಜಿನ ಹಳೇದು | ೧೯೦-೨೦೦ |
| ಡಬಲರೋಲ | ೧೬೫-೧೭೫ |
| ಸಾಜಿನ | ೧೬೦-೧೭೦ |

### ಕೊಡಗು

ಕೂಡ್ಲಿಪಾಟ ಗ್ರಾಮದಲ್ಲಿ ತಾ ೧೫-೮-೪೭ನೆ ಶುಕ್ರವಾರ ಸ್ವಾತಂತ್ರ್ಯ ವಿಜಯೋತ್ಸವ ನೆರವೇರಿತು. ಅಂದು ಮುಂಜಾನೆ ಪ್ರಭಾತಫೇರಿ ಗಂಟೆ ೯-೩೦ಕ್ಕೆ ಧ್ವಜಾರೋಹಣ (ಇಲ್ಲಿಯ ಪೋಲೀಸ ಹೆಡ್ ಕಾನಸ್ಟೇಬಲರವರಿಂದ) ೩೧ ಕುಶಾಲು ತೋಪು. ನಂತರ ೬ ಜೋಡಿ ಎತ್ತುಗಳಿಂದ ಶೃಂಗರಿಸಲ್ಪಟ್ಟ ರಥದಲ್ಲಿ ಮುಖಂಡರ ಫೋಟೋ ಮೆರವಣಿಗೆ ಮತ್ತು ೨೦ ಕುದುರೆಗಳಿಗೆ ಅಲಂಕರಿಸಲ್ಪಟ್ಟು ಧ್ವಜ ಮೆರವಣಿಗೆ ಸಾಯಂಕಾಲ ಭಾಷಣ ಶ್ರೀ ಎ ಆರ್ ಮಹಾಂತಪ್ಪ ಬಿ ಎ ಬಿ ಟಿ ರವರಿಂದ ಮತ್ತು ಪ್ರತಿಜ್ಞಾಪತ್ರ ಓದಿ ಅಂಗೀಕರಿಸುವಿಕೆ, ನಂತರ ಸಿಹಿ ಹಂಚುವಿಕೆ. ಬಡ ಜನರಿಗೆ ಶ್ರೀ ಕೆ. ಎಸ್. ಗುರುಲಿಂಗಪ್ಪನವರ ಉದಾರ ಸಹಾಯದಿಂದ ಅನ್ನದಾನ. ರಾತ್ರಿ ದೀಪೋತ್ಸವ ಈ ರೀತಿ ನಡದದ್ದಲ್ಲದೆ ಹಿಂದೂ ಮುಸ್ಲಿಮರು ಸೌಹಾರ್ದಭಾವದಿಂದ ವಿಜೃಂಭಣೆಯಿಂದ ನಡೆಸಿದರು.

ಶನಿವಾರಸಂತೆ ಗ್ರಾಮದಲ್ಲಿ ತಾ. ೧೫ ಶುಕ್ರವಾರ ಸ್ವಾತಂತ್ರ್ಯೋತ್ಸವ ನೆರವೇರಿತು. ಪ್ರಾತಃಕಾಲ ಪ್ರಭಾತಫೇರಿ ಗಂಟೆ ೯—೩೦ಕ್ಕೆ ಧ್ವಜಾರೋಹಣ ಹಿರಿಯ ಕಾಂಗ್ರೆಸ ಕೆಲಸಗಾರರಲ್ಲೊಬ್ಬರಾದ ಬಿ. ಮಾದಯ್ಯನವರಿಂದ ನಂತರ ಅಧಿಕಾರಿಗಳಿಂದ ಧ್ವಜವಂದನೆ. ಪಾಟೆಯ ಮನೆ ಮನೆಗಳೂ ತಳಿರುತೋರಣಗಳಿಂದ ಶೃಂಗರಿಸಲ್ಪಟ್ಟಿತ್ತು. ಪಾಟೆಯ ಬೀದಿಗಳಲ್ಲಿ ಮುಖಂಡರ ಫೋಟೊ ೭ ಜೋಡಿ ಎತ್ತುಗಳಿಂದ ಶೃಂಗರಿಸಲ್ಪಟ್ಟು ಗಾಡಿಯಲ್ಲಿ ಮೆರವಣಿಗೆ. ಶ್ರೀ ಎಚ್. ಎಂ. ಪುಟ್ಟಣ್ಣನವರ ಅಧ್ಯಕ್ಷತೆಯಲ್ಲಿ ಭಾಷಣ. ಕಾಂಗ್ರೆಸ ಅಡಹಾಕ್ ಕಮೀಟಿಯವರಿಂದ ಕಳುಹಲ್ಪಟ್ಟ ಶ್ರೀ ಎ. ಜಿ. ಅಯ್ಯಪ್ಪನವರಿಂದ ಭಾಷಣ. ರು. ಪೂ. ಕಾಂಗ್ರೆಸ ಕೆಲಸಗಾರರಲ್ಲೊಬ್ಬರಾದ ಶ್ರೀ ಎನ್. ಕೃಷ್ಣಮೂರ್ತಿಯವರಿಂದ ಪ್ರಮಾಣಪತ್ರಿಕೆ ಓದಿ ಅಂಗೀಕರಿಸುವಿಕೆ. ಮುಂತಾದ ಹಲವು ಕಾರ್ಯಕ್ರಮಗಳು ನೆರವೇರಿತು.

ಪೇಟೆಯ ಮಧ್ಯದಲ್ಲಿರುವ ಮಸೀತಿ ಮುಂದೆ ಓಲಗ (ವಾದ್ಯ) ಮಾಡಿಕೊಂಡು ಹೋಗಬಾರದೆಂದು ಮುಸಲ್ಮಾನರ ನಿರ್ಬಂಧ. ಇದಕ್ಕಾಗಿ ಹಿಂದೂ ಮುಸಲ್ಮಾನರಿಗೆ ಕಲಹವಾಗಲಿತ್ತು. ದೈವವಶಾತ್ ಯಾವ ಗಲಭೆಯೂ ಆಗಲಿಲ್ಲ.

ಇದೇ ರೀತಿ ಈ ನಾಡಿಗೆ ಸೇರಿದ ನಿಡ್ತ ಗ್ರಾಮದಲ್ಲಿಯು ಅತಿ ವಿಜೃಂಭಣೆಯಿಂದ ಸ್ವಾತಂತ್ರ್ಯ ವಿಜಯೋತ್ಸವ ನೆರವೇರಿತೆಂದು ಸುದ್ದಿಗಾರರಾದ ಎನ್. ಸಿ. ಮೂರ್ತಿಯವರು ತಿಳಿಸುತ್ತಾರೆ.

## ಮೈಸೂರಲ್ಲಿ ಸತ್ಯಾಗ್ರಹ ಪ್ರಚಂಡ ಹರತಾಳ ಹಾಗೂ ಮೆರವಣಿಗೆ

ಕಾಂಗ್ರೆಸ್ ಸತ್ಯಾಗ್ರಹ ಚಳವಳದ ಮೊದಲನೆಯ ಸರ್ವಾಧಿಕಾರಿಗಳಾದ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ತಾ. ೧ ರಲ್ಲಿ ಬೆಂಗಳೂರಲ್ಲಿ ನೆರೆದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತ ಮೈಸೂರ ಸಂಸ್ಥಾನ ಕಾಂಗ್ರೆಸ್ಸು ಸಂಸ್ಥಾನದ ಪ್ರತಿಯೊಂದು ಮೂಲೆಯಿಂದ ಮೈಸೂರ ಅರಮನೆಗೆ ನೂರಾರು ಸತ್ಯಾಗ್ರಹ ತಂಡಗಳನ್ನು ಕಳುಹುವದೆಂದೂ ಈ ತಂಡಗಳು ಸೆಪ್ಟಂಬರ ೪ನೆಯ ತಾರೀಕಿಗೆ ಕಾಲ್ನಡೆಯಿಂದ ತಮ್ಮ ತಮ್ಮ ಸ್ಥಳಗಳಿಂದ ಹೊರಟು ಹಳ್ಳಿಗರಲ್ಲಿ ಜಾಗೃತಿ ಉಂಟುಮಾಡುತ್ತ ಸಪ್ಟಂಬರ ೧೧ಕ್ಕೆ ಅರಮನೆ ಮುಟ್ಟುವದೆಂದೂ ಸಪ್ಟಂಬರ ೧೪ಕ್ಕೆ ಮಹಾರಾಜರ ಅರಮನೆ ಎದುರಿಗೆ ಪ್ರಚಂಡ ಮತಪ್ರದರ್ಶನ ನಡೆಯುವದೆಂದೂ ಘೋಷಿಸಿದರು.

ಹೊಣೆಗಾರ ಸರಕಾರ ಸ್ಥಾಪಿತವಾಗಬೇಕೆಂದು ಜನಾಭಿಪ್ರಾಯ ಸೂಚಿಸುವ ಸಲುವಾಗಿ ತಾ ೧ ರಲ್ಲಿ ಮೈಸೂರು ನಗರದಲ್ಲಿ ಮೈಸೂರ ಕಾಂಗ್ರೆಸ ಆಜ್ಞೆಯ ಮೇರೆಗೆ ಪ್ರಚಂಡ ಹರತಾಳ ಆಚರಿಸಲ್ಪಟ್ಟಿತು. ನಗರದ ಸಹಸ್ರಾರು ಅಂಗಡಿಗಳು ಮುಚ್ಚಿದ್ದವು. ಸುಬ್ಬರಾಯನ ಕೆರೆಯಲ್ಲಿ ಶ್ರೀ ಚೆನ್ನಯ್ಯನವರು ರಾಷ್ಟ್ರಧ್ವಜಾರೋಹಣ ಮಾಡಿದರು.

ಸಾವಿರಾರು ವಿದ್ಯಾರ್ಥಿಗಳು, ಕಾರಖಾನೆಯ ಕೆಲಸಗಾರರು ಮುಂತಾದವರಿಂದ ಕೂಡಿ ಹೊರಟ ಸಾರ್ವಜನಿಕ ಮೆರವಣಿಗೆ ಸುಮಾರು ಅರ್ಧ ಮೈಲುದ್ದವಿತ್ತು.

## ೮೪ ವರ್ಷದ ಉಮೇದುವಾರ

ಅ. ಸಂ. ಸಂಸ್ಥಾನದ ೧೯೪೮ ರಲ್ಲಿ ನಡೆವ ಅಧ್ಯಕ್ಷಪದದ ಚುನಾವಣೆಗೆ ಚಿಕಾಗೋದಿಂದ ಡಾ. ಜಾನ್ ಮ್ಯಾಕ್ಸವೆಲ್ ಎಂಬ ನಿಸರ್ಗ ಚಿಕಿತ್ಸಕರು ಸಸ್ಯಾಹಾರಿ ಪಕ್ಷದ ಪ್ರತಿನಿಧಿಯೆಂದು ಉಕ್ತಪಕ್ಷದ ಸಭೆ ಆರಿಸಿತು.

ಜಾನ್ ಮ್ಯಾಕ್ಸವೆಲ್ಲರ ವಯಸ್ಸು ೮೪. ಅವರ ಪಕ್ಷದ ಧ್ಯೇಯವೆಂದರೆ ಮಾಂಸಾಹಾರ ತ್ಯಾಗ. ಪ್ರಾಣಿಗಳ ಮಾಂಸ, ಮೀನು, ಕೋಳಿ ಯಾವುದೂ ಗ್ರಾಹ್ಯವಲ್ಲವೆಂದು ಆ ಪಂಥಮತ. ಜಾನ್ ಮ್ಯಾಕ್ಸವೆಲ್ಲರನ್ನು "ಸಸ್ಯಾಹಾರಿ ಪ್ರಪಂಚದ ದೊಡ್ಡ ಸ್ವಯಂಪ್ರಭರೆಂದು" ಕರೆಯುತ್ತಾರೆ.

ಅಮೇರಿಕದ ಸಸ್ಯಾಹಾರಿಗಳ ಅಧಿಕೃತ ಪ್ರಕಟನ ಶಾಖೆಯ ಸಹ ಸಂಪಾದಕರಾದ ಸೈಮನ್‌ಗೌಲ್ಡರು ಅಧ್ಯಕ್ಷಪದದಂತಹ ಅತ್ಯುನ್ನತ ಸ್ಥಾನಕ್ಕೆ ಡಾ. ಮ್ಯಾಕ್ಸವೆಲ್‌ರನ್ನು ಸೂಚಿಸಿದುದು ಸೋಜಿಗದ ಸಂಗತಿ.

ಹೆಸರನ್ನು ಸೂಚಿಸುವಾಗ ಶ್ರೀ ಗೌಲ್ಡರು ಸಸ್ಯಾಹಾರಿ ಪಕ್ಷದವರಿಗೆ ಚುನಾಯಿತರಾಗುವ ಭರವಸೆಯಿಲ್ಲೆಂದೂ ಆದರೂ ಆ ಮೂಲಕ ಮತದಾರರ ಲಕ್ಷ್ಯವನ್ನು ಮಾಂಸೇತರಾಹಾರದತ್ತ ಸೆಳೆಯಲನುಕೂಲವಾಗುವುದೆಂದೂ ಹೇಳಿದರು. ಸಸ್ಯಾಹಾರಿ ಪಕ್ಷಕ್ಕೆ ಚುನಾವಣೆಯಲ್ಲಿ ೫೦,೦೦,೦೦೦ ಮತಗಳು ಸಿಗಬಹುದೆಂದು ಊಹಿಸಲಾಗಿದೆ.

ಮೇಲಿನ ಸಂಖ್ಯೆಯಲ್ಲಿ ೩೦,೦೦,೦೦೦ ಅಮೇರಿಕದ ಸಸ್ಯಾಹಾರಿಗಳ ಮತಗಳು. ಉಳಿದವು ಮದ್ಯಪಾನ ನಿರೋಧಕರಿಂದ, ಪೃಥಕ್ಕರಣ ವಿರೋಧಿಗಳಿಂದ ಮತ್ತು ಧೂಮಪಾನ ವಿರೋಧಿಗಳಿಂದ ಬರಬೇಕಾಗಿದೆಯಂತೆ.

## ದೃಶ್ಯ ೧

[ಗಜೇಂದ್ರ ಮೋಕ್ಷವನ್ನು ಘಂಟಾಘೋಷವಾಗಿ ಅನ್ನುತ್ತ ಕೈಯಲ್ಲಿ ಹೂ-ಕಾಳಸಿ ಬುಟ್ಟಿಯನ್ನು ಹಿಡಿದುಕೊಂಡು ಹಜಾಮ ಸಮೇತರಾಗಿ ಪೆನ್‌ಶನ್ ಪದ್ಮನಾಭರಾಯರು ಮನೆಗೆ ಬರುತ್ತಾರೆ.]

ಪದ್ಮನಾಭರಾಯರು:— ಶ್ಯಾಮು ಶ್ಯಾಮು ಶ್ಯಾಮು...... ಮುಶ್ಯಾ...... ಇನ್ನೂ ಮಲಗಿಯ್ಯಾ (ತಿರಸ್ಕಾರದಿಂದ ಗೋಣು ಹಾಕುತ್ತ) ಏನು! ಈಗಿನ ಹುಡುಗರು!

(ಶ್ಯಾಮು ರಗ್ಗಿನಲ್ಲಿಯೇ ಮಿಸುಕಾಡುತ್ತ)

ಶ್ಯಾಮು:— ಏನ...... ಶ್ರಾಸಪಾ...... ನಿಂದು.

ಪ:— ಬಿಸಿಲು ಬಂದೆಬ್ಬಿಸಿದ್ರೂ ಎಳಬಾರದೇ

ಶ್ಯಾ— ಬಿಸಿಲು ಬಂದು ಎಬ್ಬಿಸಿದ್ರ ಏಳೊ ದಿವಸಾ ಹೋದವು. ಪರತ ಬರದ್ಹಾಂಗ ಹೋದವು. ಹಾಸಗೀ ಚಹಾ ಬಂದು ಎಬ್ಬಿಸಿದ್ರ ಏಳೋದು.

ಪ— ಹಾಸಗೀ ಚಹಾ ಬರಲಿಕ್ಕೆ ಇದೇನು ಮನಿನೋ ಬೋರ್ಡಿಂಗ ಆ್ಯಂಡ ಲಾಜಿಂಗ ಹೌಸೋ?

ಶ್ಯಾ— ಹಜಾಮನ್ನ ತಂದು ಮನಿ ಒಯ್ದು ಸಲೂನ ಮಾಡಿಬಿಟ್ಟೇದಿ ಮತ್ತ ನನಗ ಬೋರ್ಡಿಂಗೆಂತ ಲಾಜಿಂಗ ಅಂತ...... ಮನಿ ಮನೀನ ಉಳಿಬೇಕಂತ ಸಲೂನ ನಿರ್ಮಾಣಸ್ಯಾವ.

ಪ— ಯಾರಿದ್ದಿರೊ? ಕೇಶವಾ ನಾರಾಯಣಾ ಮಾಧವಾ ಗೋವಿಂದಾ ಯಾರಾರೆ ಮುಂಡಾ ಮೋಚಗೊಳಿಸಲಿಕ್ಕೆ ಇಷ್ಟು ನೀರು ತಂದು ಬಡಿ.

ಶ್ಯಾ— ಎಳೋ ಹೊತ್ತಾತಂತ! ಬಾಜೂದ ಕೋಮಲ ವಿಲಾಸದಾಗ ಇನ್ನೂ ದೋಸಿ ಹಂಚ ಸಹಿತ ಹಾಕಿಲ್ಲಾ, ಕಪ್ಪು ಬಸಿ ಕಡಕಡಾಟ ಸುರುವಾಗಿಲ್ಲಾ ಎಳೋ ಹೊತ್ತಾತಂತ!

ಪ— ಎಲಾ, ನೀರು ತಂದ್ರೆನೊ? ನೀನೇ ತಗೊಂಡು ಬರಬಾರದೇ

ಶಾಮಲಾಬಾಯಿ (ಪದ್ಮನಾಭರಾಯರ ಹೆಂಡತಿ)— ಅಲ್ಲಾ ಅಂದೆ. ಮುಂಡಾಮೋಚಗೋಳಿಕ್ಕೆ ನಾ ನೀರು ತರಬೇಕೇ ಖರಾಲ್ಲಾ ಅಂದ್ರ ನಾ ಹ್ಯಾಂಗ ತರಬೇಕು, ನೀರೇ. ಎಳೋ ಶ್ಯಾಮು ಇವತ್ತ ಹುಡಗಿನ ತೋರಸಲಿಕ್ಕೆ ಬರತಾರಂತ ಪತ್ರ ಬಂದದ, ಬಂದಗಿಂದಾರೇಳು?

ಶ್ಯಾ— ಯಾಕ ಆ ಹುಡಿಗ್ಗಿ ಏನಾಗೇದ? ನಾ ಏನು, ಪ್ರಸಿದ್ಧ ಡಾಕ್ಟರೇ ವೈದ್ಯನೇ ನನಗ್ಯಾಕ ಹುಡುಗಿನ್ನ ತೋರಸಲಿಕ್ಕೆ ಬರತಾರ.

ಪ— ಆಗತಾನ ಚತುರ್ಭುಜಾ...... ಚತುಷ್ಪಾದ ಆಗತಾನ ಬರಬರುತ್ತ ಇವಗ್ಯಾತಕ್ಕ ಕನ್ಯಾ! ಎನೋ ದ್ವೈವಿಕ್ತಂತ ಯುದ್ಧದಲ್ಲಿ ಅರವರ್ಷ ಕೆಲಸ ಮಾಡಿ ಬಂದಾನ. ಇನ್ನೊಂದು ಯುದ್ಧಾ ಸುರುವಾಗೋತನಕಾ ಕೆಲಸಿಲ್ಲಾ ಬೊಗಸಿ ಇಲ್ಲಾ.

ಶ್ಯಾಮಲಾಬಾಯಿ— ಕೆಲಸಾ ತಗೊಂಡು ಎನ ಮಾಡಬೇಕು. ನಮ್ಮ ಶ್ಯಾಮೂ ಕಾಮಾಗ್ಯಾನ. ಬೇಕಾದವರು ಕನ್ಯಾ ಕೊಡತಾರ.

ಪ— ನಾನೂ ಅದೇ ಅಂದೆ. ನಿನ್ನ ಶ್ಯಾಮೂ ಕಾಮಾಗಿಲ್ಲಾ ಇಗಂತೂ ರಿಕಾಮಾಗ್ಯಾವೆ ಅಂದೆ ಇವಗ್ಯಾತಕ್ಕ ಕನ್ಯಾ. ಒಂದು ಕೆಲಸಾ ಹುಡಕೋಣಾಗವಲ್ದು ಕೈಲಾಗದವಾ;

ಶ್ಯಾ— ಈ ಕರಳು ಕೊರಿಯೋ ಅಂಥಾ ಮಾತ್ಯಾತ್ರ ಆಡಬೇಡಾ, ನನಗೂ ತಿಳಿತದೇ ಅಷ್ಟು ಬುದ್ಧಿ ಇಲ್ಲಾ ಅನಬ್ಯಾಡಾ. ನಾನೂ ಉಡುಪಿ ರೆಸ್ಟೋರೆಂಟದಾಗಿ ದೋಸಿ ತಿಂದೇ ದೊಡ್ಡ ಕಾಗೇನಿ ತಿಳೀತ.

[ಪದ್ಮನಾಭರಾಯರು ಶೂನ್ಯ ದೃಷ್ಟಿಯಿಂದ ಶ್ಯಾಮಲಾ ಬಾಯಿಯನ್ನು ನೋಡುವರು]

ಕೈಲಾಗದವಾ ಅಂತ! ಕೈಲಾಗದವಾ ಅಂತಾ! ಎಲ್ಲಾ ಶುಭ ಕಾರ್ಯ ಕೈಲಾಗದವ ಕೈಮುಗುದತಿ ಸುರುವು ಮಾಡತೀರಿ ಜಗುಲಿ ಮಾಲಿಟ್ಟ ಪೂಜಿ ಮಾಡತೀರಿ.


ಪ— ಕೈಲಾಗದವನ್ನ ಯಾರು ಪೂಜಿ ಮಾಡತಿದ್ದಾರು?

ಶ್ಯಾ— ಗಣಪತಿನ್ನ ಪೂಜಿ ಮಾಡುವದಿಲ್ಲಾ ಮಂಗಲಮೂರ್ತಿ ಉರ್ಫ ಗಣಪತಿ ಯಾವ ಗ್ರಂಥ ಬರದಾನ? ಯಾವ ತತ್ವ ಹುಡುಕಿ ತಗೆದಾನ? ಯಾವ ಕಲಾಕೌಶಲ್ಯದಾಗ ಪ್ರವೀಣದ್ದಾನ? ನಿರುದ್ಯೋಗಿ ಅಗದಿ ಕೈಲಾಗದವ. ತನ್ನ ಲಗ್ನಾ ಸಹಿತ ಮಾಡಿಕೊಳ್ಳೊದಾಗಲಿಲ್ಲ; ತಲಿಮ್ಯಾಲೆ ಅಕ್ಕಿಕಾಳು ಹಾಕತೇವಿ. "ಪುರುಷಸ್ಯ ಭಾಗ್ಯಂ ದೇವೋನಜಾತಿ" ನನಗೂ ಗಣಪತಿಗೂ ಬಹಳ ಸಾಮ್ಯ, ಗಣಪತಿಹಾಂಗ ನನ್ನ ನಶೀಬಾ ಯಾವಾಗ ತೆರೆತದೊ ಯಾರು ಹೇಳಬಲ್ಲರು?

(ಶ್ಯಾಮುನನ್ನು ಪದ್ಮನಾಭರಾಯರು ಸಿಟ್ಟಿನಿಂದ ದಿಟ್ಟಿಸಿ ನೋಡುತ್ತಾ ಹಜಾಮನ ಮುಂದೆ ಕೂಡ್ರುವರು)

ಹಜಾಮ — ರಾಯರೇ ಈಗೀನ ಹುಡುಗರೆ ಹಾಂಗ. ದೊಡ್ಡ ರಘುನಾಥರಾಯರ ಮನ್ಯಾಗೂ ಹಂಗ ಅದ.

## ಚಿಕ್ಕ ಪ್ರಹಸನ



# ವರಭಿಕ್ಷಾಟನ

ಶ್ರೀ. ವೆಂಕಣ್ಣಾಚಾರ್ಯ ಪಪ್ಪು ಬಿ.ಎ.ಎಲ್‌ಎಲ್.ಬಿ.

ಪ— ಅವರ ಹೆಸರೇ ತಗೀಬಾರದು. ಯಾರ್‍ರೇ ಸಂಣರಾಯರ, ನನ್ನ ಮ್ಯಾಲೆ ಸಿಟ್ಟಿಆಗಬೇಕೇನು?

ಪ— ಇದರೆ ಫಾಯದೆ ತೀಕಂಗೊಂಡ್ಯಾ? ಹಜಾಮರು ಅಂದರ ಅಂತಾರೆ ರಾಷ್ಟ್ರೀಯರೇಡಿಯೋ! ಬೇಕಾದ್ದ ಸುದ್ದಿ ಹೇಳತಾರ. ನೀ ಆತು, ನಿನ್ನ ಕೆಲಸಾತು. ಮುಂದ ನೋಡಿ ಮಕಷ್ಟಾ ಮಾಡಬಾರದೇ. ಹಳೆಕಾಲದ ಹಜಾಮಾ ಅಂತ ಕರದ್ರ ಒಂದನೇ ನಂಬರ ಟಾಕಿ ಆಗಿಬಿಟ್ಟ!

ಶ್ಯಾ— ಅವ್ವಾ ನನಗ ಚಹಾ ತಂದು ಕೊಡಲಿಕ್ಯಾರ ಬರತದೋ ಎನ ಮಡಿನೊ? ಅದಕೂ ಚಹಾ ಮುಟ್ಟಲಿಕ್ಕ ಬರತದೊ ಇಲ್ಲೊ ಮಡಿಕಾಯಿದೆದ ಛನೇ ಕಲ್ಮಿನ ಪ್ರಕಾರ?

ಶ್ಯಾಮಲಾಬಾಯಿ— ಅಲ್ಲಾ ಮಡಿಲಿದ್ದಾಗ ಚಹಾ ಮುಟ್ಟಬೇಕ! ನನ್ನ ನಶೀಬಾ. ಇಂಥವರು ಹುಟ್ಟೀರೀ......

ಶ್ಯಾ— ಇಲ್ಲಾ ನೀವು ಮಡಿ ಬಡಕರು ಹುಟ್ಟೀ ವೇದಾಂತ ಹೇಳಿಕೋತ ವೇದ ಭೂಮಿನ ಕಳದ್ರಿ

ಪ— ಹಜಾಮನ ಮುಂದ ವೇದಾ ಅಂಬೊ ಶಬ್ದ ಉಚ್ಚಾರ ಮಾಡಬ್ಯಾಡ. ಹಜಾಮತಿ ನಡದ ಹೊತ್ತಿನ್ಯಾಗ ನನ್ನ ಬಾಯಿಂದ ಇನ್ನೊಮ್ಮೆ ಅದನ್ನ ಅನಸಬ್ಯಾಡಾ.

ಶ್ಯಾ— ಎನ ಮಡೀನಪಾ ಈಜನರಿಗೆ, ಇನ್ನೂ ಬುದ್ಧಿ ಬರವಲ್ಲದು. ಯಾವ ಹಿಂದು...ಹಿಂದು ಶಬ್ದ ಸಿಂಧು ನದಿಯಿಂದ ಬಂದದೊ ಅಂಥಾ ಮಂಗಳಾಷ್ಟಾಕದಾಗಿನ ಸಿಂಧೂ ನದೀನ ಪಾಕಿಸ್ತಾನ ಕೊಡಿತು. ಸಂಸ್ಕೃತಿ ಮಾಪನ ಯಂತ್ರದಂತಿದ್ದ ನಮ್ಮ ಸಂಸ್ಕೃತದಾಗ ಬರೆದ ಹಿಂದು ಕಾಯದೆ ಹಿಂದೂ ಮುಂದೂ ತಿಳಿದ್ಹಾಂಗ ಇಂಗ್ಲೀಷನ್ಯಾಗ ಬರದ್ರೂ, ಹರಿ ಬಳಿಯೂ ಜನರ್ನ ಅಂದರ ಹರಿಜನರ್ನ ಬಡ್ಯಾಗ ಹೋಗಸಿದ್ರೂ, ದುಃಶಾಸನಗಳನ್ನ ಪಾಸಮಾಡ್ಡಿ ದುಷ್ಟರ ಪರಿಪಾಲನ ಶಿಷ್ಟರ ಸಂಹಾರ ಮಾಡೂ ಅಂಥಾ ಸರಕಾರ ಬಂದ್ರೂ, ಇನ್ನೂ ಮಡಿಲಿದ್ದಾಗ ಚಹಾ ಮುಟ್ಟದಂಥಾ ಮಂದಿ ನಮ್ಮೊಳಗದ. ಹೇ ದೇವಾ, ಹೇ ಗಾಂಧೀ, ಹೇ ನೆಹರು, ಯಂಥಾ ಕಾಲಾ, ಲೀಲೆ ನಡಕೊತ ಬಂತಪಾ!

ಕಮಲಾಬಾಯಿ— (ಇಂದೂ ಯಾವದೂ ತಿಳಿಯದವಳಂತೆ) ನಿನಗ ಹಾಲಿನ ಪುಡಿ ಹಾಕಿದ ಚಹಾ ಸೇರತದೊ ಇಲ್ಲೊ? ನಮ್ಮ ಮನ್ಯಾಗ ಸಂಣ ಹುಡುಗರಿಲ್ಲಾ? ನಮಗ ಹಾಲಿನ ರೇಶನ್ ಸಿಗೊದುಲ್ಲಾ.

ಶ್ಯಾ— ಹಾಲಿನ ಪುಡಿಯಾಕ? ನಾಶಿ ಪುಡಿ ಹಾಕಿದ ಚಹಾ ತಗೊಂಡುಬಾ.

ಶಾಲಾಯತಸ್ಯೆಯಿನಮಃ— ಹಾಲಿನ ಪುಡಿ ಚಹಾ ಹ್ಯಾಂಗ ಕೊಡ್ಲಿ ಅಂತಿ ಚಿಂತಿಯಿಂದ ತಲಿಕೆರಕೊಬಾ ದ.

ಶ್ಯಾಮಲಾಬಾಯಿ— ತಲಿ ಕೆರಕೊಳ್ಳಿಕ್ಕೇನು, ಸುಟ್ಟ ರೇಶನ್‌ದಾಗ ಎಂಥಾ ಖೊಬ್ರಿ ಎಂಣಿ ಕೊಡತಾರೊ ಎನೊ? ತಲಿ ಕೆರದೂ, ಕೆರದೂ, ಸಾಕಾತು ಅವರ ಹೇನಾ ಹೋಗಲಿ.

ಶ್ಯಾ— ಹೇನಾ ಅಲ್ಲಾ ಅವ್ವಾ, ಲಂಚಾತಿಂದ ಹೇನಾ ಹೋದರ ತಾವ ಹಾದಿಗೆ ಬರತಾರ. ಪರಿಸ್ಥಿತಿ ಯಾಕ ಕೆಟ್ಟಿತು ಅಂತ ಜನರು ತಲಿ ಕೆರಕೋಳಿ ಅಂತ, ಖೊಬ್ಬರಿ ಎಣ್ಣಿ ಮಾಸಲೇದ ನಸಗುನ್ನಿ ಎಣ್ಣಿ ಕೊಡತಿರಬಹುದು.

ಶ್ಯಾಮಲಾಬಾಯಿ— ನಾಲ್ಕು ದೇಶಾತಿರಗಿ ಬಂದೀದಿ ಎನೇನು ಮಾತಾಡತೀಯೊ ಎನೊ, ನಮಗೇನು ಗೊತ್ತಾಗಬೇಕು? (ಒಳಗೆ ಹೋಗುವಳು)

ಪ— ಶ್ಯಾಮು ನಂದಾತು ಬಾ; ಇವತ್ತ ಕನ್ಯಾ ತೋರಸಲಿಕ್ಕೆ ಬರತಾರ.

ಶ್ಯಾ— ಜ, ಸಂಜಿಗೆ ಬರತಾರ ರಗಡ ಅವಕಾಶ ಅದ ೪—೫ಗಂಟೆಕ್ಕ ಮಾಡಿಕೋತೇನಿ.

ಪ.— ಅಲ್ಲೊ ಊಟ ಆದ ಮ್ಯಾಲೆ ಹಜಾಮತೇ

ಶ್ಯಾಮು:— ನನ್ನ ಮುಂಜಾವಿಗೆ ನಾನು ಗೋಧೂಳಿ ಮುಹೂರ್ತ ಇಟ್ಟೇನಿ.

ಪಃ— ಎನ ದಿವ್ಯ ಮಗಾ ಹುಟ್ಟಿದಿ!

ಗೋಧೂಳಿ ಮುಹೂರ್ತದ್ರ ನಿನ್ನ ಮುಂಜಿವಿ, ಇಕಾ ನೋಡು, ನನ್ನ ಅಪರೋಕ್ಷದಾಗ, ಆ ನಿಮ್ಮ ಮಂಗಲ ಕಾರ್ಯಾಲಯದಾಗ, ಅಂದರ ಸಲೂನದಾಗ ಆಗಲಿ.

x x x

## ದೃಶ್ಯ ೨

[ಕನ್ಯಾ ಪಿತಾ ವರಾಹಮೂರ್ತಿರಾಯರು ಬರುವರು. ಪಡಸಾಲೆ]

ಪದ್ಮನಾಭರಾವಃ— ಏನು ವರಾಹಮೂರ್ತಿರಾಯರ, ಬರ್ರಿ ಕೂಡ್ರಿ ನಮಸ್ಕಾರ ವರಹಮೂರ್ತರಾವ:— ಎಷ್ಟೊ ಆಗೆದ ವಳಗ "ಬರ್ರಿ ಕೂಡ್ರಿ ನಮಸ್ಕಾರ" ಅಂದೊ ಬೋರ್ಡ ತೂಗಹಾಕಿರತಾರ ಇದು ನಿಮ್ಮ ಸ್ವಾಗತಾ, ಮಾತಾಡೊ ಬೋರ್ಡ, ಆತು. ಇರ್ಲಿ, ರಾಯರ ನನ್ನ ಹೆಸರು ಹ್ಯಾಂಗ ಗೊತ್ತಾತು? ನಿಮಗೇನು ಮುಖ ಜ್ಯೋತಿಷ ಬರತದೊ?

ಪದ್ಮನಾಭರಾವ:— ಥೀ ಥೀ (ಸ್ವಲ್ಪ ಹೊತ್ತು ನಿಶ್ಶಬ್ದ)

ವರಾಹಮೂರ್ತಿರಾವ:— ಮತ್ತೇನು ರಾಯರ ಕಾಂಗ್ರೆಸ್ಸು ಮೌಂಟಬ್ಯಾಟನ್ ಸ್ಕೀಮು ಸ್ವೀಕರಿಸಲಿಕ್ಕೆ ಹೇಳಿ ಬಳ ಗೈರ ಮಾಡಿತು. ಇದೇ ಕಾಂಗ್ರೆಸ್ಸು ಅಖಂಡ ಹಿಂದುಸ್ತಾನದ ಗುರಿ ಇಟ್ಟ ಕ್ರಿಪ್ಸ ಪ್ಲಾನಿಗೆ ಮುಳಗೊ ಬ್ಯಾಂಕಿನ ಮ್ಯಾಲೆ ಕೊಟ್ಟ ಚೆಕ್ಕ ಅಂದಿತ್ತು.

ಪದ್ಮನಾಭರಾವ:— ಅರಾಜಕಾರಣಾ ಆ ಕಾಂಗ್ರೆಸ್ಸು. ಅವರ ಮಾತೇ ತಗಿಬ್ಯಾಡ್ರಿ. ಧರ್ಮ, ದೇಶಾ ಸಮಾಜಾ, ನೀತಿ, ವ್ಯವಹಾರಾ ಎಲ್ಲ ಕೆಟ್ಟು ಹಾಳಾಗಿ ಹಳ್ಳ ಕೂಡೂ ಅಂಥ ಕಾಯಿದೆ ಮಾಡಲಿಕ್ಕ ಹತ್ಯಾರ. ರಾಜಕಾರಣ ಇರ್ಲಿ; ನೀವು ಯಾತಕ್ಕ ಬಂದೀರಿ ಆ ವಿಷಯನೇ ಮೊದ್ಲ ಮುಗಸೋಣ, ಯಾಕ ಕನ್ಯಾನೆ ಕರಕೊಂಡು ಬಂದಿಲ್ಲ.

ವರಾಹಮೂರ್ತಿರಾವ— ಇಲ್ಲೇ ಧಾರವಾಡಕ್ಕ ಹೋಗ್ಯಾಳ ಹಂಗದಿಗ್ಗ ಹೋಗತೇವಿ. ನಾವೆಲ್ಲಾರೂ ಬಂದು ಪ್ಲಾಟಫಾರ್ಮಿನ ಮ್ಯಾಲೆ, ಚಹಾದ ಅಂಗಡ್ಯಾಗ, ನಾಟಕದಾಗ, ಸಿನೇಮಾದಾಗ ನಾವೇನು ಕನ್ಯಾ ನೋಡಿ ಕನ್ಯಾದ ಕೈ ಚಿಲದಾಗಅಥವಾ ಕರವಸ್ತ್ರದಾಗ ಬಾಳಿಹಂಣು ಉದಿ ತುಂಬಿ ಬರೊ ಅನರಲ್ಲಾ. ಬೆಕಾರ ಹುಡುಗನ್ನ ಕರಕೊಂಡು ಹೋಗ್ರಿ.

ವರಾಹಮೂರ್ತಿರಾವ— ಬೆಕಾರ ಹುಡುಗಾ! ಹುಡುಗಾ ಬೆಕಾರ!! ನಮ್ಮ ಭಾವಿ ಅಳಿಯಂದಿರಗೆ ಕೆಲಸ ಎನೂ ಇಲ್ಲಾ ಅನ್ರಿ. [ಶ್ಯಾಮಲಾಬಾಯಿ ಮುಂದೆ ಬಂದು ಪದ್ಮನಾಭರಾಯರನ್ನು ತಿರಸ್ಕಾರದಿಂದ ನೋಡಿ]

ಪದ್ಮನಾಭರಾಯ— ಇಕಾ ನೋಡ್ರಿ ನಮ್ಮ ಮನಿಯವರು ಬಂದರು; ಆ ವಿಷಯಾ ನನ್ನ ಕಿಂತಾ ಹೆಚ್ಚು ಗೊತ್ತದ. ಅವರಿಗೆ...

ಶ್ಯಾಮಲಾಬಾಯಿ.. [ಹುಸಿ ನಗೆಯಿಂದ] ಅವಗ ಮಿಲ್ಟ್ರಿ ಕೆಲಸಾ ಇತ್ತು. ಹುಡುಗ್ಗ ಕೆಲಸ ಕಾಣಾ ಇದಕಾತು. ಅವನ್ನ ಬಿಟ್ಟ ಬಾ... ನಮ್ಮ ಪೆನಶನ್‌ಗೇನ ಕಡಿಮಿ. ಪಮ್ಮ ಮುಖ... ಅವರಿಗಂತೂ, ಎಲ್ಲಾ ಸಾಹೇಬರ ಗುರ್ತ... ಇನ ಸೌತ್ರ ಕೊಡ್ರಿ ಅಂದರ ಸಾಕು.

[ಕನ್ಯಾ ಸುದಂತಾ ಪ್ರವೇಶಿಸುವಳು]

ವರಹಾಮೂರ್ತಿರಾವ.. ಎನ ಸುದಂತಾ... ಲೆ, ಬಂದು ಬಿಟ್ಟಿಯಲ್ಲಾ.

ಪದ್ಮನಾಭರಾಯ.. ಸುದಂತಾ ಅಂತ ಹೆಸರು ಇಡಲಿಕ್ಕೆ ನಿಮ್ಮ ಮನಿಯಾಗ್ಲಿ ಯಾರಾದರೂ ಸುಪ್ರಸಿದ್ಧ ದಂಟಿಸ್ಟ ಇದ್ದರೋ?

ವರಾಹಮೂರ್ತಿರಾವ.. ಇದೊಳ್ಳೆ ಮಜಾ ಪ್ರಶ್ನೆ. ಸುದಾಮಾ ಅಂತ ಹೆಸರಿದ್ದರ ಅವರ ಮನಿಯಾಗ್ಲಿ ಪ್ರಸಿದ್ಧ ಚಪ್ಪಲ್ ಮರ್ಚಂಟ್ ಸುಮೇಧಾ ಅಂತ ಇದ್ದರ ಅದು ಸ್ಟೇಶಾಲಿಸ್ಟ ಇರಬೇಕಂತ ತಿಳಿಯುಮದೇನು? ಒಳ್ಳೆ ತರ್ಕ.

ಪದ್ಮನಾಭರಾವ— ಇವಳೂಎನು ನಿಮ್ಮ ನಿವಾ ಹೇಚ್ಚು ಮಗಳು.

ಸುದಂತಾ.. ಹೌದು ನಾನೇ.

ಪದ್ಮನಾಭರಾವ.. ಅಬ್ಬಾ ನಿಮ್ಮ ಮಗಳು ಬಹಳ ದೀಟಾ, ಜಂಪಾ-ಹಿಟ್ಲರ ಅಂದರ ನೆಟ್ಟಗೆ. ಬರಬೇಡ್ರಿ.

ಶಾಮಲಾಬಾಯಿ— ಹುಡುಗೆಲ್ಲಾ ಚಲೋ ಇದ್ದಾಳ. ಒಂದ ಚೂರು ಹಲ್ಲ ಮುಂದ ಹಾದಾವ.

ಪದ್ಮನಾಭರಾವ—ದಂತಶಾಸ್ತ್ರ ಇಷ್ಟ ಮುಂದ ಹೋಗೇದಲ್ಲಾ ಇಗೇನು ಗಾಬರಿ, ಹಲ್ಲು ಅವನ್ನ ತಿದ್ದಲಿಕ್ಕೆ ಬರತದ ಅಷ್ಟ ಮಾಡಿಸಿ ಬಿಡ್ರಿ.

ವರಾಹಮೂರ್ತಿರಾವ:— ಹಾಸ್ಯಾಸ್ಪದ! ಮನಿಬಾಗಿಲಿಗೆ ಹಿಡಿಯುವರು ಅಲ್ಲೆ ಕಟಾಳಿ ಹಚ್ಚಿ ಕೊಡ್ರಿ. ಇಲ್ಲೆ ಕಟ್ಟಿ ಹಾಕಿಸಿಕೊಡ್ರಿ, ಅಂತ ಮಾಗಣಿಮಾಡಿದ್ಹಾಂಗ ಕನ್ಯಾದ ಹಲ್ಲ ಕೊರಸರಿ. ಅದು ರಕ್ತಿ, ಇದು ರಕ್ತಿ ಮಾಡಿ, ಎನಂಬೊ ಮಾತು? ಇದೆಲ್ಲಾ ಇನ್ನೊಂದು ಕಡೆ ತೋರಸಲಿಕ್ಕ ಹೋಗಿದೆ "ನಿಮ್ಮ ಹುಡಿಗ್ಗಿ ಮಕುಸ್ಸಾದ್ಹಾಂಗ ಕಾಣ್ಸತದ ಅದಕ ಆ ಹುಡುಗಿ ಜನನ ಮರಣ ಊತರಾ ಇದ್ದರ ತೋರಸರಿ" ಅಂತ ಕಾಯದೆಶೀರ ಹೇಳಿದರು. ಎನ್ರಿ ಮುಂದೇಣಾ ನಾವೇನು ಹೆಂಣು ಹಡದೇ ಇಲ್ಲ!

ಪದ್ಮನಾಭರಾವ:— ನಾವೆಷ್ಟ್ಯದ್ದ್ರಿ ಗಂಡಸಮು ಹೀಂಗ ಅಂದ ಮಾತ್ರಕ್ಕ ಸಿಟ್ಟಿಗೇಳಬೇಕೇನು? ಒಳ್ಳೆದು ನಿಮ್ಮ ಹುಡುಗಿ ಎನ ಕಲತಾಳ?

ವರಾಹಮೂರ್ತಿರಾವ:— ಇಂಟರ ಪ್ಯಾಸ ಮಾಡಿ ಬಿ. ಎ. ಓದತಾಳ.

ಪದ್ಮನಾಭರಾಯ:— ಭಾರಿ ಸುಶಿಕ್ಷಿತಳು. ರೇಶನ್ ಅಥವಾ ಸಪ್ಲಾಯ ಖಾತೆದಾಗ ಅರ್ಜ ಹಾಕಿದ್ದಳೇನು?.........

(ವರಾಹಮೂರ್ತಿ ರಾಯರು ಕಿಡಿಕಿಡಿ ಯಾಗುವರು. ಸುದಂತಾ ರಿಕ್ತದಾಚಕಡೆ ನೋಡುವಳು)

............ ವರಾಹಮೂರ್ತರಾಯರ ಒಂದ ಮಾತು, ಕೆಲಸ ಹೆಂಣು ಹುಡುಗೂರು ಸುರೇಳೀತ ಸಂಸಾರ ಮಾಡತಾರ ಅಂತ ತಿಳಿದೀರೇನು? ಹಾಗ ಮನಿಕೋಭಾಕ್ಕ ಹೆಂಡತಿ ಅಂತ ಆಗತಾರ. ನಾಳೆ ಕದಾಚಿತ ಹೀಂಗ ತಿಳೀರಿ ಮೂರನೇ ಮಹಾಯುದ್ಧದ ಪಾಂಚ ಜನ್ಯ ಅಟು—ಆಗಬಿಡ್ರಿ ಆ ಮಾತ ಬ್ಯಾರೆ—ಈ ಕೆಲಸ ಹೆಂಗಸರು ಎನಿಸ್ಯಾರಲ್ಲಾ ಇವರೆಲ್ಲಾ ಧರಾ ಧರಾ ರೇಶನ್ ಆಫೀಸು W A C ಇವನ್ನೆಲ್ಲಾ ತುಂಬಲಿಕ್ಕೆ ಹತ್ಯಾರ. ಪಾಪ! ಗಂಡಿಂದಿರ ಸ್ಥಿತಿ ಎನಾಗತದ ಗೊತ್ತ, ಕೃಷ್ಣಾ ಮಥುರಾದಾಗಾಗಲೀ ಕೆಲವು ಸಂಶೋಧಕರ ಪ್ರಕಾರ ದ್ವಾರಕಾದಾಗಾಗಲೀ, ಕೊಳಲು ಊದಿದ ಕೂಡ್ಲೆ ಅಷ್ಟಿ ಗುಡುದಿರ ಸ್ಥಿತಿ ಹ್ಯಾಂಗ ಆಗತಿತ್ತೊ ಹಾಂಗ ಆಗತದ. ಅಷ್ಟೇ ಕೆಲಸ ಹೆಂಗಸರು ರೇಲ್ವೆ ಗಾಡ್ಯಾಗ ಹೊರಗಿನ ತಟ್ಟ್ಯಾಗ ಸಹಿತ ಕುಡ್ರೊದುಲ್ಲಾ. ಅಬಲೆಯರು ಇಷ್ಟು ಪ್ರಬಲರಾಗತಾರ. ನಮ್ಮಲ್ಲಿ ಹಳೆ ಸಂಪ್ರದಾಯ..................

ವರಾಹಮೂರ್ತಿರಾವ — ತಿಳಿತು, ಬಿಡ್ರಿ ಹೆಣ್ಣು ಹಡಿಯೋದ ಒಂದು ತಪ್ಪು. ಲಗ್ನಾಮಾಡಿಕೊಂಡ ಹುಡುಗರ್ನ ಕೇಳಿದ್ರೆ ಜಂಟಿ ಕ್ರಮುಖಾ ವಾಕ್ಯಕ್ಕ ಕಂಡಾ ಇದ್ದ ಹುಡಿಗಿ ಬೇಕು ಅಂತಾರ. ಹುಡುಗನ ತಂದಿ ಲಕ್ಷ್ಯವರದಕ್ಷಿಣೆ ಕಡೆ; ತಾಯಿದು ದೊಡ್ಡ ಮನೆತನದ ಕಡೆ ಈ ತ್ರಿವೇಣಿ ಸಂಗಮ ಹ್ಯಾಂಗ ಆಗಬೇಕು? ಇನ್ನ ಹುಡುಗನ್ನ ನೋಡಿದ್ರೆ, ವಾರೆಕ್ರಾಪಿನ ಹುಡುಗಾ "ಕಿಲ್ಪನ್ ಹೊಟ್ಟೆ ಬೆಲ್ಪನ್ ಬಟ್ಟೆ" ಮ್ಯಾಲೆ ಸಂತ ಶಿಕ್ಷಣ ವಿಧಿಗಳ ಧಕ್ಕೆ ಇದ... ಸದ್ಯದಕ್ಕ ಹುಡುಗಾ.........ಪದ ನಾವು... ನಮ್ಮ ಹುಡುಗಾ ಹಾಂಗ ಇಲ್ಲೇ.........

ಸುದಂತಾ — ಎನ ಹಾಂಗಿಲ್ಲೇ...ನಮ್ಮ ತಂದಿ ದರ್ಶನಾ ಮಾಡಿದ ವರನ ಕಾರ್ಯಕ್ರಮ ನಿಮ್ಮ.........

ವರಾಹಮೂರ್ತಿರಾವ......ಮಗಾ... ಗಾಡೂ......ಜಯ ಅಲ್ಲಿಗ್ ನಿಶೆಂಬಣ್! ಮುಂದಿನ ದುನಿಗೆ ಹೋಗೊಣಾ ಪಲಾನ್ ಬೇಟಾ ಅಂತ.

## ಬೆಂಗಳೂರು—ಮೈಸೂರು

ರಾಜ್ಯಾಂಗ ಸುಧಾರಣೆಯ ಬಗ್ಗೆ ತಮ್ಮ ವರದಿಯನ್ನು ಶ್ರೀಮನ್ಮಹಾರಾಜರವರಿಗೆ ಈ ತಿಂಗಳಲ್ಲಿ ಸಲ್ಲಿಸುವುದಾಗಿಯೂ ಅಕ್ಟೋಬರಿನ ಹೊತ್ತಿಗೆ ಆ ವರದಿಯ ಫಲಿತಾಂಶ ಹೊರಬೀಳುವುದಾಗಿಯೂ ದಿವಾನರು ಅಗಸ್ಟ ೩೦ ರಲ್ಲಿ ಒಂದು ಘೋಷಣೆ ಹೊರಡಿಸಿದರು.

ರಾಜಕೀಯ ಸುಧಾರಣೆಗಳ ಬಗ್ಗೆ ನಾವು ಸಲಹೆ ಮಾಡಲು ತಡಮಾಡುವದಕ್ಕೆ ಕಾರಣ ಕೊಟ್ಟು ಇನ್ನಷ್ಟು ಕಾಲಾವಕಾಶಬೇಕೆಂದು ಕೇಳಿಕೊಳ್ಳುವ ಪ್ರಯತ್ನವೇ ದಿವಾನರ ಇಂದಿನ ಹೇಳಿಕೆಯ ಸಾರಾಂಶ. ಅವರ ಈ ಹೇಳಿಕೆ ಬಲ ಪಂಚಕಾಕಸ್ನಾನದಂತಿದೆ. ಯಾರಿಗೂ ಇದರಿಂದ ತೃಪ್ತಿಯಾಗುವಂತಿಲ್ಲ—ಎಂದು ಮೈಸೂರು ಕಾಂಗ್ರೆಸ್ ಪ್ರಧಾನಕಾರ್ಯದರ್ಶಿಗಳಾದ ಶ್ರೀ ಎ. ಜಿ. ರಾಮಚಂದ್ರರಾಯರು ಪತ್ರಿಕೆಗಳಿಗೆ ಕೊಟ್ಟ ಹೇಳಿಕೆಯಲ್ಲಿ ಉಲ್ಲೇಖಿಸಿದ್ದಾರೆ.

ಬೆಂಗಳೂರು ಸ್ಟೇಟ್ ಬಿ. ಡಿವಿಜನ್ ಲೀಗ್ ದಲ್ಲಿ ಹೆಡ್‌ಕ್ವಾರ್ಟರ್ಸ್ ಕ್ರಿಕೆಟ್ ಕ್ಲಬ್ಬಿನವರು ಟೆಕ್ನಾಲಾಜಿಕಲ್ ಇನ್ಸ್ಟಿಟ್ಯೂಟಿನವರನ್ನು ಅಗಸ್ಟ ೨೫ ರಲ್ಲಿ ಸೆಂಟ್ರಲ್ ಕಾಲೇಜ್ ಹೊಸ ಮೈದಾನದಲ್ಲಿ ಆಡಿ ೮ ವಿಕೆಟ್ಟುಗಳಿಂದ ಸೋಲಿಸಿದರು.

ಬೆಂಗಳೂರು ವಾಣೀವಿಲಾಸ ಇನ್‌ಸ್ಟಿಟ್ಯೂಟ್ ಹಿಂದೀ ಛಾತ್ರ ಸಂಘದ ೫ ನೆಯ ವರ್ಷದ ಪ್ರಾರಂಭೋತ್ಸವವು ಅಗಸ್ಟ ೨೫ ರಲ್ಲಿ ಬೆಂಗಳೂರಿನ ವಿದ್ಯಾಧಿಕಾರಿಗಳಾದ ಶ್ರೀ ಎ. ಸಿ. ದೇವೇಗೌಡರ ಅಧ್ಯಕ್ಷತೆಯಲ್ಲಿ ನೆರವೇರಿತು.

ಮೈಸೂರು ಶಸ್ತ್ರಾಸ್ತ್ರ ಕಾಯದೆಯಲ್ಲಿ ಸೆಪ್ಟೆಂಬರ್ ೧೫ ರಿಂದ ಅಪ್ಪಣೆಯಿಲ್ಲದೆ ಕತ್ತಿ, ಕಲ್ಲು, ಕಠಾರಿ, ಭರ್ಚಿ, ಬಿಲ್ಲು ಬಾಣಗಳನ್ನು ಹಿಡಿದುಕೊಂಡು ಓಡಾಡಿದರೆ ೩ ವರ್ಷ ಶಿಕ್ಷೆ ಇಲ್ಲವೆ ದಂಡ ಅಥವಾ ಎರಡೂ ವಿಧಿಸಲಾಗುವುದೆಂದು ತಿದ್ದುಪಡಿ ಮಾಡಲಾಗಿದೆ.

ಮೈಸೂರಲ್ಲಿ ಉಗ್ರಗಲಭೆಗಳು ಮತ್ತು ಶಾಸನ ವಿರುದ್ಧ ಕಾರ್ಯಕ್ರಮಗಳು ನಡೆಯುವದಾದರೆ ಅವುಗಳನ್ನು ತಡೆಗಟ್ಟಿ ಶಾಂತಿ ಪಾಲನಮಾಡುವುದಕ್ಕಾಗಿ ಮೈಸೂರು ಸರಕಾರದವರು ಕ್ರಿಮಿನಲ್‌ಲಾ ಅಮೆಂಡ್‌ಮೆಂಟ್ ಕಾಯದೆಯನ್ನು ಆಚರಣೆಗೆ ತಂದಿದ್ದಾರೆ.

'ತಾಯಿನಾಡು' ದಿನ ಪತ್ರಿಕೆಯು ಮೇಲೆ ಸತ್ಯಾಗ್ರಹ ಸಂಬಂಧದ ಸುದ್ದಿಗಳನ್ನು ಪರಿಶೀಲನೆಗೆ ಒಪ್ಪಿಸಬೇಕೆಂದು ನಿರ್ಬಂಧ ಹೇರಲಾದ್ದರಿಂದ ಅದರ ಪ್ರತೀಭಾರ್ಥವಾಗಿ ಅದು ಪ್ರಕಟನೆ ನಿಲ್ಲಿಸಲು ನಿರ್ಣಯಿಸಿದೆ. ಇದರಂತೆ 'ಡೇಲಿ ನ್ಯೂಸ್' ಇಂಗ್ಲಿಷ್ ದಿನಪತ್ರಿಕೆಯೂ "ವೀರವಾಣಿ" ಎಂಬ ಕಾಂಗ್ರೆಸ್ ತೀವ್ರ ಪಕ್ಷದ ಪತ್ರಿಕೆಯೂ ಪ್ರಕಟನೆ ನಿಲ್ಲಿಸಲು ನಿರ್ಧರಿಸಿವೆ.

ಕ್ಯಾತ್ಸಂದ್ರದಲ್ಲಿ ಬೆಂಗಳೂರಿಂದ ಬರುತ್ತಿದ್ದ ಸೇಂದಿ ಲಾರಿಯನ್ನು ನಿಲ್ಲಿಸಿ ಸೀಸಾಯಿಗಳನ್ನು ನಾಶಮಾಡಿದ ಆರೋಪದ ಮೇಲೆ ಶ್ರೀಗಳಾದ ಗುಬ್ಬಣ್ಣ, ಗುಂಡೂರಾವ್, ದಾಸಪ್ಪ, ಹನುಮಂತಯ್ಯ, ಕೃಷ್ಣಯ್ಯಂಗಾರ, ಪುಟ್ಟರಾಮಯ್ಯ ಮೊದಲಾದವರ ಬಂಧನವಾದ ಸುದ್ದಿಯಿದೆ.

ಮೈಸೂರು ಸಂಸ್ಥಾನದ ಮುಸ್ಲಿಂ ಲೀಗ್ ಕಾರ್ಯಕಾರಿ ಸಮಿತಿಯು ಅಗಸ್ಟ ೨೯ ರಲ್ಲಿ ಶ್ರೀ ಮಹಮ್ಮದ ಶರೀಫರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ದೇಶದಲ್ಲಿ ಆಹಾರ ಪರಿಸ್ಥಿತಿ ವಿಷಮವಾಗಿರುವದರಿಂದ ಕಾಂಗ್ರೆಸ್ಸು ಸತ್ಯಾಗ್ರಹ ಮುಂದುವರಿಸಬೇಕೆಂದು ಪ್ರಾರ್ಥಿಸುವ ನಿರ್ಣಯ ಅಂಗೀಕೃತವಾಯಿತೆಂತಲೂ ಸತ್ಯಾಗ್ರಹದ ಬಗ್ಗೆ ಮುಸ್ಲಿಮರು ತಾಟಸ್ಥ್ಯದಿಂದಿರಲು ತೀರ್ಮಾನವಾಯಿತೆಂತಲೂ ಗೊತ್ತಾಗಿದೆ.

ಸಂಸ್ಥಾನದ ಎಲ್ಲ ಜಿಲ್ಲೆಗಳಲ್ಲಿ ವಾಹನ ಸಂಚಾರದ ಬಗ್ಗೆ ಸಲಹೆ ಕೊಡಲು ಸಮಿತಿಗಳನ್ನು ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. ಅಲ್ಲದೆ, ಆಯಾ ಜಿಲ್ಲೆಯ ಎಕ್ಸಿಕ್ಯೂಟಿವ್ ಎಂಜಿನಿಯರೂ ರೇಲ್ವೆಯ ಜಿಲ್ಲಾ ಟ್ರಾಫಿಕ್ ಸೂಪರಿಂಟೆಂಡೆಂಟರೂ ಅಧಿಕಾರಿ ಸದಸ್ಯರಾಗಿರುವರು.

ಬೆಂಗಳೂರು ನಗರದಲ್ಲಿ ಜಾಡಮಾಲಿಗಳೆಲ್ಲರೂ ತುಳಸೀ ತೋಟದ ಮೈದಾನದಲ್ಲಿ ಅಗಸ್ಟ ೨೭ ರಲ್ಲಿ ಸಭೆಸೇರಿ ತಮ್ಮದೊಂದು ಸಂಘ ಸ್ಥಾಪಿಸಿಕೊಂಡಿದ್ದಲ್ಲದೆ ಈಗ ಹೂಡಿರುವ ಮುಷ್ಕರದ ಬಗೆ ಅಧ್ಯಕ್ಷರೂ ಕಾರ್ಯದರ್ಶಿಗಳೂ ಪೌರಸಭೆಯೊಡನೆ ಸಂಧಾನ ನಡೆಸಬೇಕೆಂದು ತೀರ್ಮಾನಿಸಿದರು.

ಮೈಸೂರು ಸರಕಾರದ ರೇಶಿಮೆ ಶಾಖೆಯ ಮುಖ್ಯಾಧಿಕಾರಿಗಳಾಗಿದ್ದು ಇತ್ತೀಚೆಗೆ ರೇಶಿಮೆ ಸಂಶೋಧನೆಯ ಸಂಸ್ಥೆಗೆ ಮುಖ್ಯಾಧಿಕಾರಿಗಳಾಗಿ ವರ್ಗವಾಗಿದ್ದ ಶ್ರೀ ಎಚ್. ಎಸ್. ಗೋವಿಂದರಾಯರು ಕಳೆದ ಕೆಲವು ತಿಂಗಳುಗಳಿಂದ ಕಾಹಿಲೆಯಲ್ಲಿದ್ದು ಅಗಸ್ಟ ೨೬ ರಲ್ಲಿ ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ನಿಧನ ಹೊಂದಿದರು.

ವಿಶ್ವೇಶ್ವರಪುರದಲ್ಲಿ ಮಳೆಯ ದೆಸೆಯಿಂದ ಒಂದು ಮನೆಯ ಪ್ರಾಕಾರ ಕುಸಿದುಬಿದ್ದು ಅದರಿಂದ ಗಾಯಹೊಂದಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದ ಶ್ರೀ ನರಸಿಂಹನಾಯುಡು ಎಂಬವರು ಅಗಸ್ಟ ೨೫ ರಲ್ಲಿ ಮೃತಪಟ್ಟರು.

ಅಗಸ್ಟ ೨೫-೨೬ ರಲ್ಲಿ ಮೈಸೂರು ಜಿಲ್ಲಾಧಿಕಾರಿಗಳು ಹಲವು ಪುರಪ್ರಮುಖರನ್ನೂ ವರ್ತಕರನ್ನೂ ಕರೆಸಿಕೊಂಡು ಕಾಂಗ್ರೆಸ್ಸಿನ ಸತ್ಯಾಗ್ರಹದ ಸಂದರ್ಭದಲ್ಲಿ ಅಂಗಡಿಗಳನ್ನು ಮುಚ್ಚಬಾರದೆಂದೂ ಹಾಗೆ ಮುಚ್ಚಿದಲ್ಲಿ ಪುಂಡ ಪೋಕರಿಗಳು ಅಂಗಡಿಗಳನ್ನು ಲೂಟಿ ಮಾಡಬಹುದೆಂದೂ ಹೇಳಿದುದಾಗಿ ಗೊತ್ತಾಗಿದೆ.

ಔಷಧಿಗಳ ಮೇಲಿನ ನಿಯಂತ್ರಣಾಜ್ಞೆಯನ್ನು ೧೯೪೭ ನೆಯ ಏಪ್ರಿಲ್ ೨೬ ರಿಂದ ರದ್ದು ಮಾಡಲಾಗಿದೆಯಾದರೂ ಮಕ್ಕಳಿಗೆ ಬೇಕಾದ ಗ್ಲಾಕ್ಸೋ ಮುಂತಾದ ಆಹಾರ ಸಂಬಂಧ ಪದಾರ್ಥಗಳನ್ನು ಅಧಿಕ ಲಾಭಕ್ಕೆ ಮಾರದಂತೆ ತಡೆಗಟ್ಟುವ ಶಾಸನವು ಅನ್ವಯಿಸುವುದೆಂದು ಸರಕಾರ ಪ್ರಕಟಿಸಿದೆ.

---

ಕರಾಚಿಯ ಡಾ. ಚೋಯಿಥರಾಮ ಗಿಡ್ವಾನಿಯವರು ಒಂದನೇ ತಾರೀಖಿಗೆ ಕೈಟಾಳ್ಕೆ ಭೆಟ್ಟಿಕೊಟ್ಟು ನಿರಾಶ್ರಿತರ ಶಿಬಿರಗಳನ್ನು ಸಂದರ್ಶಿಸಿ ಶಿಸ್ತನ್ನು ಕಾಯ್ದುಕೊಳ್ಳಬೇಕೆಂದು ಅವರಿಗೆ ಹೇಳಿ ನಿರಾಶ್ರಿತರ ಸ್ಥಳಾಂತರದ ವ್ಯವಸ್ಥೆಯ ಬಗ್ಗೆ ಸರ್ ಹೊಫ್ರೆಯವರೊಡನೆ ಚರ್ಚಿಸಿದರು.

## ವ್ಯಾಪಾರ ಪ್ರಪಂಚ

### ಮುಂಬಯಿ ಶೇರಪೇಟೆ

ಸೆಪ್ಟಂಬರ ೨— ಇಂದು ಮುಂಬಯಿ ಶೇರ ಪೇಟೆಯು ಅನಧಿಕೃತವಾಗಿ ಮುಚ್ಚಲ್ಪಟ್ಟಿತ್ತು. ಮಹಾತ್ಮರ ಉಪವಾಸದ ಬಗ್ಗೆ ಸಹಾನುಭೂತಿ ತೋರುವ ಸಲುವಾಗಿ ಸದಸ್ಯರು ಕೆಲಸಕ್ಕೆ ಹೋಗಲಿಲ್ಲ.

ಖಾಸಗಿ ಧಾರಣೆಗಳು ಸ್ವಲ್ಪ ಇಳಿತಾಯದಲ್ಲಿ ಇದ್ದವು. ತಾತಾ ಸ್ಟೀಲ ಡಿಫರ್ಡ್ ಮೊದಲು ರೂಪಾಯಿ ೧೫೦೦ ರಲ್ಲಿದ್ದು ಅನಂತರ ೧೪೭೦ ಕ್ಕಿಳಿತು. ಇಂಡಿಯನ್ ಆಯರ್ನ್ ರೂಪಾಯಿ ೩೩-೮-೦ ಯಲ್ಲಿತ್ತು. ಇಂಡಿಯಾ ಸ್ಟೀಂ ಶಿಪ್ ರೂ. ೧೪-೪-೦ ಯಲ್ಲಿಯೂ ಇಂಡಿಯನ್ ಕಾಪರ್ ರೂ. ೨—೨—೬ ರಲ್ಲೂ ಡಾಲ್ಮಿಯಾ ಜೈನ್ ಏರ್ ವೇಸ್ ರೂ. ೬ ಕ್ಕಿಂತ ಹೆಚ್ಚಾಗಿಯೂ ಬಾಂಬೆ ಡಾಯಿಂಗ್ ರೂ ೧೦೦೦ ದಲ್ಲೂ ಇದ್ದವು.

ಸೆಕ್ಯುರಿಟಿ ಮಾರ್ಕೆಟ್ಟು ಸ್ಥಿತ್ಯಂತರ ಹೊಂದದೆ ಹಾಗೇ ಇತ್ತು. ೧೯೪೬ ರ ೩% ಪರಿವರ್ತನೀಯ ಸಾಲ ರೂ. ೧೦೦—೧೪—೦ ಯಲ್ಲೂ ೩% ಮ್ಯುನಿಸಿಪಲ್ ಸಾಲ ಹಾಗೇ ರೂ. ೧೦೦-೧೫-೦ ರಲ್ಲಿತ್ತು. ಪುನಃ ಮಾರ್ಕೆಟ್ಟು ಸೆಪ್ಟಂಬರ ಐದರಲ್ಲಿ ತೆರೆಯುವುದು.

### ಚಿನ್ನ—ಬೆಳ್ಳಿ

ಖಾಸಗಿ ವ್ಯವಹಾರದಲ್ಲಿ ಸರಾಫಕಟ್ಟೆಯ ಪ್ರಗತಿಪರ ಭಾಗದಲ್ಲಿ ಮೇಲಿನಂತೆ ಮಹಾತ್ಮರ ಉಪವಾಸದಿಂದ ಇಳಿಮುಖವುಂಟಾಯಿತು. ಅಲ್ಲಿ ಇಲ್ಲಿ ಕೆಲ ಕಡೆ ಕೊಡುಕೊಳ್ಳು ನಡೆದಿತ್ತು. ಮುನ್ಸೋಟದ ಗಟ್ಟಿ ಹಿಡಿತದ ದೆಸೆಯಿಂದ ಚಿನ್ನದ ಬೆಲೆಯೇರಿತು. ಆದರೆ ಬೆಳ್ಳಿಯದು ಇಳಿಮತಾಯಿತು. ಗಟ್ಟಿದ ಕಡೆಯ ಹೇಳಿಕೆ ನಿರಾಶಾದಾಯಕವಿದ್ದು ಕೊಳ್ಳುವುದಕ್ಕಿಂತ ಮಾಲು ಬರುವುದು ಹೆಚ್ಚಾಗಿತ್ತು.

ಫಾರ್ವರ್ಡ ಚಿನ್ನ ೧೧೧—೧೦—೦ ರಿಂದ ೧೧೧-೬-೦ ರ ನಡುವೆ ಓಲಾಡಿತು. ಫಾರ್ವರ್ಡ ಬೆಳ್ಳಿ ೧೬೩—೨—೦ ರಲ್ಲಿ ಪ್ರಾರಂಭವಾಗಿ ೧೬೨—೪—೦ ಕ್ಕಿಳಿಯಿತು.

ಅಧಿಕೃತ ಕ್ಲೋಸಿಂಗ್‌ದರ ಹೊಸ ಬಂಗಾರ ರೂ. ೧೧೧—೧೪—೦, ರೆಡಿಗಿನಿ ೬೪—೪—೦ ರೆಡಿ ಬೆಳ್ಳಿ (೯೯೯) ರೂ. ೧೬೫, ರೆಡಿ ಬೆಳ್ಳಿ (೯೯೬) ರೂ. ೧೬೪—೪—೦

ಅಡ್ಜಸ್ಟ್‌ಮೆಂಟ್ ದರ: ಚಿನ್ನ ೧೧೧—೬—೦, ಬೆಳ್ಳಿ ರೂ. ೧೬೪-೫-೦

### ಅರಳೆ

ಮೇಲಿನಂತೆ ಇಲ್ಲಾದರೂ ಗಾಂಧೀಜಿಯ ಉಪವಾಸಕ್ಕೆ ಸಹಾನುಭೂತಿ ತೋರಿ ವ್ಯವಹಾರ ನಿಲ್ಲಿಸಲ್ಪಟ್ಟಿತ್ತು. ಹೊಸ ಕಾಂಟ್ರಾಕ್ಟಿನ ಬಗ್ಗೆ ನಿರ್ಧಾರ ತೆಗೆದುಕೊಂಡಿಲ್ಲ. ಖಾಸಗಿ ವ್ಯವಹಾರದಲ್ಲಿ ಸ್ಯಟಲ್‌ಮೆಂಟ್ ದರ ರೂ. ೪೫೬-೮-೦ ಇತ್ತು.

### ಸಾಂಗಲಿ ಪೇಟೆ

| | |
|---|---|
| ಅರಿಷಣ ಹೇರು | ೧೦೦-೧೧೨ |
| ಮೆಣಸಿನಕಾಯಿ ಹೇರು ,, | ೮೦-೧೦೦ |
| ಶೇಂಗಾ ಖಂಡಿ | ೧೨೮— |

### ಶಿವಮೊಗ್ಗೆ ಅಡಿಕೆ

| | |
|---|---|
| ದೇಶಾವರ ನಂ ೧ ಮಣ ೧ಕ್ಕೆ | ೫೨-೫೫ |
| ,, ,, ೨ | ೪೮-೫೨ |
| ,, ,, ೩ | ೪೬-೪೮ |
| ರಾಜಾಅಲವು | ೪೭-೫೨ |
| ಸುಲಿ | ೪೪—೫೦ |
| ಚೆಟ್ಟಿ ಮಂತಿ | ೩೨-೩೪ |
| ಚೆಟ್ಟಿ | ೨೮-೩೧ |

### ಹುಬ್ಬಳ್ಳಿ

| | |
|---|---|
| ಹೊಸ ಜಯವಂತ ಹತ್ತಿ ನಂ. ೧ | ೨೬೦-೨೭೦ |
| " ನಂ. ೨ | ೨೪೦-೨೪೫ |
| " ನಂ. ೩ | ೨೨೦-೨೩೦ |
| ಹಳೇ ಜಯವಂತ ಹತ್ತಿ | ೨೭೫-೨೯೬ |
| ಜಿನ ಹೊಸದು | ೧೭೦-೧೮೩ |
| ಜಿನ ಹಳೇದು | ೧೯೦-೨೦೦ |
| ದಬಲರೋಲ | ೧೬೫-೧೭೫ |
| ಸಾಜಿನ | ೧೬೦-೧೭೦ |

### ಕೊಡಗು

ಕೊಡ್ಲಿಪೇಟೆ ಗ್ರಾಮದಲ್ಲಿ ತಾ ೧೫-೮-೪೭ನೆ ಶುಕ್ರವಾರ ಸ್ವಾತಂತ್ರ್ಯ ವಿಜಯೋತ್ಸವ ನೆರವೇರಿತು. ಅಂದು ಮುಂಜಾನೆ ಪ್ರಭಾತಫೇರಿ ಗಂಟೆ ೯-೩೦ಕ್ಕೆ ಧ್ವಜಾರೋಹಣ (ಇಲ್ಲಿಯ ಪೋಲೀಸ ಹೆಡ್ ಕಾನಸ್ಟೇಬಲರವರಿಂದ) ೩೧ ಕುಶಾಲು ತೋಪು. ನಂತರ ೬ ಜೋಡಿ ಎತ್ತುಗಳಿಂದ ಶೃಂಗರಿಸಲ್ಪಟ್ಟ ರಥದಲ್ಲಿ ಮುಖಂಡರ ಫೋಟೋ ಮೆರವಣಿಗೆ ಮತ್ತು ೨೦ ಕುದುರೆಗಳಿಗೆ ಅಲಂಕರಿಸಲ್ಪಟ್ಟು ಧ್ವಜ ಮೆರವಣಿಗೆ ಸಾಯಂಕಾಲ ಭಾಷಣ ಶ್ರೀ ಎ ಆರ್ ಮಹಾಂತಪ್ಪ ಬಿ ಎ ಬಿ ಟಿ ರವರಿಂದ ಮತ್ತು ಪ್ರತಿಜ್ಞಾಪತ್ರ ಓದಿ ಅಂಗೀಕರಿಸುವಿಕೆ, ನಂತರ ಸಿಹಿ ಹಂಚುವಿಕೆ. ಬಡ ಜನರಿಗೆ ಶ್ರೀ ಕೆ. ಎಸ್. ಗುರುಲಿಂಗಪ್ಪನವರ ಉದಾರ ಸಹಾಯದಿಂದ ಅನ್ನದಾನ. ರಾತ್ರಿ ದೀಪೋತ್ಸವ ಈ ರೀತಿ ನಡೆದದ್ದಲ್ಲದೆ ಹಿಂದೂ ಮುಸ್ಲಿಮರು ಸೌಹಾರ್ದಭಾವದಿಂದ ವಿಜೃಂಭಣೆಯಿಂದ ನಡೆಸಿದರು.

ಶನಿವಾರಸಂತೆ ಗ್ರಾಮದಲ್ಲಿ ತಾ. ೧೫ ಶುಕ್ರವಾರ ಸ್ವಾತಂತ್ರ್ಯೋತ್ಸವ ನೆರವೇರಿತು. ಪ್ರಾತಃಕಾಲ ಪ್ರಭಾತಫೇರಿ ಗಂಟೆ ೯—೩೦ ಕ್ಕೆ ಧ್ವಜಾರೋಹಣ ಹಿರಿಯ ಕಾಂಗ್ರೆಸ ಕೆಲಸಗಾರರಲ್ಲೊಬ್ಬರಾದ ಬಿ. ಮಾದಯ್ಯನವರಿಂದ ನಂತರ ಅಧಿಕಾರಿಗಳಿಂದ ಧ್ವಜವಂದನೆ. ಪೇಟೆಯ ಮನೆ ಮನೆಗಳೂ ತಳಿರುತೋರಣಗಳಿಂದ ಶೃಂಗರಿಸಲ್ಪಟ್ಟಿತ್ತು. ಪೇಟೆಯ ಬೀದಿಗಳಲ್ಲಿ ಮುಖಂಡರ ಫೋಟೊ ೬ ಜೋಡಿ ಎತ್ತುಗಳಿಂದ ಶೃಂಗರಿಸಲ್ಪಟ್ಟ ಗಾಡಿಯಲ್ಲಿ ಮೆರವಣಿಗೆ. ಶ್ರೀ ಎಚ್. ಎಂ. ಪುಟ್ಟಣ್ಣನವರ ಅಧ್ಯಕ್ಷತೆಯಲ್ಲಿ ಭಾಷಣ. ಕಾಂಗ್ರೆಸ ಆದಹಾಕ್ ಕಮೀಟಿಯವರಿಂದ ಕಳುಹಲ್ಪಟ್ಟ ಶ್ರೀ ಎ. ಜಿ. ಅಯ್ಯಪ್ಪನವರಿಂದ ಭಾಷಣ. ರು. ಹೂ. ಕಾಂಗ್ರೆಸ ಕೆಲಸಗಾರರಲ್ಲೊಬ್ಬರಾದ ಶ್ರೀ ಎನ್. ಕೃಷ್ಣಮೂರ್ತಿಯವರಿಂದ ಪ್ರಮಾಣಪತ್ರಿಕೆ ಓದಿ ಅಂಗೀಕರಿಸುವಿಕೆ. ಮುಂತಾದ ಹಲವು ಕಾರ್ಯಕ್ರಮಗಳು ನೆರವೇರಿತು.

ಪೇಟೆಯ ಮಧ್ಯದಲ್ಲಿರುವ ಮಸೀತಿ ಮುಂದೆ ಓಲಗ (ವಾದ್ಯ) ಮಾಡಿಕೊಂಡು ಹೋಗಬಾರದೆಂದು ಮುಸಲ್ಮಾನರ ನಿರ್ಬಂಧ. ಇದಕ್ಕಾಗಿ ಹಿಂದೂ ಮುಸಲ್ಮಾನರಿಗೆ ಕಲಹವಾಗಲಿತ್ತು. ದೈವವಶಾತ್ ಯಾವ ಗಲಭೆಯೂ ಆಗಲಿಲ್ಲ.

ಇದೇ ರೀತಿ ಈ ನಾಡಿಗೆ ಸೇರಿದ ನಿಡ್ತ ಗ್ರಾಮದಲ್ಲಿಯೂ ಅತಿ ವಿಜೃಂಭಣೆಯಿಂದ ಸ್ವಾತಂತ್ರ್ಯ ವಿಜಯೋತ್ಸವ ನೆರವೇರಿತೆಂದು ಸುದ್ದಿಗಾರರಾದ ಎನ್. ಸಿ. ಮೂರ್ತಿಯವರು ತಿಳಿಸುತ್ತಾರೆ.

## ಮೈಸೂರಲ್ಲಿ ಸತ್ಯಾಗ್ರಹ
### ಪ್ರಚಂಡ ಹರತಾಳ ಹಾಗೂ ಮೆರವಣಿಗೆ

ಕಾಂಗ್ರೆಸ್ ಸತ್ಯಾಗ್ರಹ ಚಳವಳದ ಮೊದಲನೆಯ ಸರ್ವಾಧಿಕಾರಿಗಳಾದ ಶ್ರೀ ಕೆ. ಚೆಂಗಲ್ರಾಯ ರೆಡ್ಡಿಯವರು ತಾ. ೧ ರಲ್ಲಿ ಬೆಂಗಳೂರಲ್ಲಿ ನೆರೆದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತ ಮೈಸೂರ ಸಂಸ್ಥಾನ ಕಾಂಗ್ರೆಸ್ಸು ಸಂಸ್ಥಾನದ ಪ್ರತಿಯೊಂದು ಮೂಲೆಯಿಂದ ಮೈಸೂರ ಅರಮನೆಗೆ ನೂರಾರು ಸತ್ಯಾಗ್ರಹ ತಂಡಗಳನ್ನು ಕಳುಹುವದೆಂದೂ ಈ ತಂಡಗಳು ಸೆಪ್ಟಂಬರ ೪ನೆಯ ತಾರೀಕಿಗೆ ಕಾಲ್ನಡೆಯಿಂದ ತಮ್ಮ ತಮ್ಮ ಸ್ಥಳಗಳಿಂದ ಹೊರಟು ಹಳ್ಳಿಗರಲ್ಲಿ ಜಾಗೃತಿ ಉಂಟುಮಾಡುತ್ತ ಸಪ್ಟಂಬರ ೧೧ಕ್ಕೆ ಅರಮನೆ ಮುಟ್ಟುವವೆಂದೂ ಸಪ್ಟಂಬರ ೧೪ಕ್ಕೆ ಮಹಾರಾಜರ ಅರಮನೆ ಎದುರಿಗೆ ಪ್ರಚಂಡ ಮತಪ್ರದರ್ಶನ ನಡೆಯುವದೆಂದೂ ಘೋಷಿಸಿದರು.

ಹೊಣೆಗಾರ ಸರಕಾರ ಸ್ಥಾಪಿತವಾಗಬೇಕೆಂದು ಜನಾಭಿಪ್ರಾಯ ಸೂಚಿಸುವ ಸಲುವಾಗಿ ತಾ ೧ ರಲ್ಲಿ ಮೈಸೂರು ನಗರದಲ್ಲಿ ಮೈಸೂರ ಕಾಂಗ್ರೆಸ್ ಆಜ್ಞೆಯ ಮೇರೆಗೆ ಪ್ರಚಂಡ ಹರತಾಳ ಆಚರಿಸಲ್ಪಟ್ಟಿತು. ನಗರದ ಸಹಸ್ರಾರು ಅಂಗಡಿಗಳು ಮುಚ್ಚಿದ್ದವು. ಸುಬ್ಬರಾಯನ ಕೆರೆಯಲ್ಲಿ ಶ್ರೀ ಚೆನ್ನಯ್ಯನವರು ರಾಷ್ಟ್ರಧ್ವಜಾರೋಹಣ ಮಾಡಿದರು.

ಸಾವಿರಾರು ವಿದ್ಯಾರ್ಥಿಗಳು, ಕಾರಖಾನೆಯ ಕೆಲಸಗಾರರು ಮುಂತಾದವರಿಂದ ಕೂಡಿ ಹೊರಟ ಸಾರ್ವಜನಿಕ ಮೆರವಣಿಗೆ ಸುಮಾರು ಅರ್ಧ ಮೈಲುದ್ದವಿತ್ತು.

## ೮೪ ವರ್ಷದ ಉಮೇದುವಾರ

ಅ. ಸಂ. ಸಂಸ್ಥಾನದ ೧೯೪೮ ರಲ್ಲಿ ನಡೆವ ಅಧ್ಯಕ್ಷಪದದ ಚುನಾವಣೆಗೆ ಚಿಕಾಗೋದಿಂದ ಡಾ. ಜಾನ್ ಮ್ಯಾಕ್ಸ್‌ವೆಲ್ ಎಂಬ ನಿಸರ್ಗ ಚಿಕಿತ್ಸಕರು ಸಸ್ಯಾಹಾರಿ ಪಕ್ಷದ ಪ್ರತಿನಿಧಿಯೆಂದು ಉಕ್ತಪಕ್ಷದ ಸಭೆ ಆರಿಸಿತು.

ಜಾನ್ ಮ್ಯಾಕ್ಸ್‌ವೆಲ್ಲರ ವಯಸ್ಸು ೮೪. ಅವರ ಪಕ್ಷದ ಧ್ಯೇಯವೆಂದರೆ ಮಾಂಸಾಹಾರ ತ್ಯಾಗ. ಪ್ರಾಣಿಗಳ ಮಾಂಸ, ಮೀನು, ಕೋಳಿ ಯಾವುದೂ ಗ್ರಾಹ್ಯವಲ್ಲವೆಂದು ಆ ಪಂಥದ ಮತ. ಜಾನ್ ಮ್ಯಾಕ್ಸ್‌ವೆಲ್ಲರನ್ನು "ಸಸ್ಯಾಹಾರಿ ಪ್ರಪಂಚದ ದೊಡ್ಡ ಸ್ವಯಂಪ್ರಭರೆಂದು" ಕರೆಯುತ್ತಾರೆ.

ಅಮೇರಿಕದ ಸಸ್ಯಾಹಾರಿಗಳ ಅಧಿಕೃತ ಪ್ರಕಟನ ಶಾಖೆಯ ಸಹ ಸಂಪಾದಕರಾದ ಸೈಮನ್‌ಗೌಲ್ಡರು ಅಧ್ಯಕ್ಷಪದಂತಹ ಅತ್ಯುನ್ನತ ಸ್ಥಾನಕ್ಕೆ ಡಾ. ಮ್ಯಾಕ್ಸ್‌ವೆಲ್‌ರನ್ನು ಸೂಚಿಸಿದುದು ಸೋಜಿಗದ ಸಂಗತಿ.

ಹೆಸರನ್ನು ಸೂಚಿಸುವಾಗ ಶ್ರೀ ಗೌಲ್ಡರು ಸಸ್ಯಾಹಾರಿ ಪಕ್ಷದವರಿಗೆ ಚುನಾಯಿತರಾಗುವ ಭರವಸೆಯಿಲ್ಲೆಂದೂ ಆದರೂ ಆ ಮೂಲಕ ಮತದಾರರ ಲಕ್ಷ್ಯವನ್ನು ಮಾಂಸೇತರಾಹಾರದತ್ತ ಸೆಳೆಯಲನುಕೂಲವಾಗುವುದೆಂದೂ ಹೇಳಿದರು. ಸಸ್ಯಾಹಾರಿ ಪಕ್ಷಕ್ಕೆ ಚುನಾವಣೆಯಲ್ಲಿ ೫೦,೦೦,೦೦೦ ಮತಗಳು ಸಿಗಬಹುದೆಂದು ಊಹಿಸಲಾಗಿದೆ.

ಮೇಲಿನ ಸಂಖ್ಯೆಯಲ್ಲಿ ೩೦,೦೦,೦೦೦ ಅಮೇರಿಕದ ಸಸ್ಯಾಹಾರಿಗಳ ಮತಗಳು. ಉಳಿದವು ಮದ್ಯಪಾನ ನಿರೋಧಕರಿಂದ, ಪೃಥಕ್ಕರಣ ವಿರೋಧಿಗಳಿಂದ ಮತ್ತು ಧೂಮಪಾನ ವಿರೋಧಿಗಳಿಂದ ಬರಬೇಕಾಗಿದೆಯಂತೆ.



ಈ ಪತ್ರಿಕೆಯು ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ 'ಲೋಕಶಿಕ್ಷಣ ಟ್ರಸ್ಟ' ದ ಪರವಾಗಿ ಹ. ರಾ. ಮೊಹರೆಯವರಿಂದ ಮುದ್ರಿತವಾಗಿ ಪ್ರಕಟವಾಯಿತು.

KARMAVEER 8-9-47

LICENCE No. 3
Licenced to Post without Prepayment

Reg. No. B. 3148




ಜ್ಯೋತಿಷಿ-ಕೃಷ್ಣಶಾಸ್ತ್ರಿ ಭಡೆ, ಭವಿಷ್ಯಕಥನ ಆಫೀಸ ಖಡೇಬಜಾರ ಬೆಳಗಾವಿ

# ಸಪ್ಟೆಂಬರ ೮ ರಿಂದ ೧೪ ರ ವರೆಗೆ

## ಮೇಷ

ಸಂಸಾರದ ಪ್ರಕೃತಿ ಉತ್ತಮ. ಮಕ್ಕಳಲ್ಲಿ ಒಬ್ಬರ ವಿಶೇಷ ಉನ್ನತಿ. ಆದರೆ ಇತರ ವಿಷಯಗಳಲ್ಲಿ ಪ್ರಾಪಂಚಿಕ ಸಮಾಧಾನ ಕಡಿಮೆ. ಹಿರಿಯರ ದುರಾಗ್ರಹಿ ವರ್ತನ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆಗಳು ಉತ್ತಮ ಆದರೆ ಲಾಭದಲ್ಲಿ ಕೆಲವೊಂದು ವಿಘ್ನ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಯಶ ದೊರೆತರೂ ಶತ್ರುಗಳ ಪ್ರಾಬಲ್ಯವೂ ವಿಶೇಷ. ಪ್ರವಾಸ ಹಾಗು ಭೆಟ್ಟಿ ಪತ್ರವ್ಯವಹಾರಕ್ಕಿಂತ ನೆಟ್ಟಗೆ. ಅಶ್ವಿನಿಯು ೪ನೇ ಹಾಗು ಭರಣಿಯ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೮, ೯, ೧೦, ೧೩ ನೆಟ್ಟಗೆ.

## ವೃಷಭ

ಶರೀರ ಪ್ರಕೃತಿ ನೆಟ್ಟಗೆ ಆದರೆ ಸ್ವಕೀಯರಲ್ಲಿ ಮತಭೇದ. ಸ್ಥಾವರದಲ್ಲಿ ಅನುಕೂಲ ಘಟನೆಗಳು. ವಾಹನ ಸುಖ ಉತ್ತಮ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆಗಳು ಲಾಭಕ್ಕಿಂತ ಹೆಚ್ಚು ನೆಟ್ಟಗೆ. ಮಿತ್ರರಿಂದ ವಿನಾಕಾರಣ ಅಪಕೀರ್ತಿ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಕಿಂಚಿತ್ ಅನುಕೂಲತೆ. ಮಕ್ಕಳಲ್ಲಿ ವಿಶೇಷ ಪ್ರಗತಿಯ ಘಟನೆಗಳು, ಮತ್ತು ಸ್ವಂತ ಬೌದ್ಧಿಕ ಕೃತ್ಯ. ಪ್ರವಾಸಾದಿ ಕೆಲಸ ಹಿತಕರ. ಕೃತ್ತಿಕೆಯು ೪ ನೇ ಹಾಗು ರೋಹಿಣಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೯, ೧೦, ೧೧, ೧೨ ನೆಟ್ಟಗೆ.

## ಮಿಥುನ

ಪ್ರಕೃತಿ ಹಾಗು ಸ್ತ್ರೀಸುಖ ನೆಟ್ಟಗೆ. ಆದರೆ ಇತರ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ಬಹಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಹಾಗು ಲಾಭ ಉತ್ತಮ ಆದರೆ ವೆಚ್ಚವೂ ಬಹಳ. ಮಿತ್ರಸುಖ ಉತ್ತಮ ಆದರೆ ಶತ್ರುಗಳಿಂದ ತೊಂದರೆಯೂ ಬಹಳ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನಸ್ಥಿತಿ. ೨—೩ ದಿವಸ ಪೂಜ್ಯ ಜನರ ಸಹವಾಸ. ಪ್ರವಾಸ ಹಾಗು ಭೆಟ್ಟಿಗಿಂತ ಪತ್ರವ್ಯವಹಾರ ನೆಟ್ಟಗೆ. ಮೃಗಾದ ೪ ನೇ ಹಾಗು ಆರಿದ್ರಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೦, ೧೧, ೧೨, ೧೩ ನೆಟ್ಟಗೆ.

## ಕರ್ಕ

ಪ್ರಕೃತಿ ಉತ್ತಮ ಆದರೆ ಮಕ್ಕಳಿಗೆ ಸ್ವಲ್ಪ ಕ್ಲೇಶ. ಇತರ ವಿಷಯಗಳಲ್ಲಿ ಪ್ರಾಪಂಚಿಕ ಸುಖ ನೆಟ್ಟಗೆ. ಉದ್ಯೋಗದಲ್ಲಿ ಪ್ರಗತಿ ಹಾಗು ಲಾಭ ಬಹಳ ಉತ್ತಮ ಆದರೆ ಪ್ರತಿಷ್ಠೆಗೆ ಧಕ್ಕೆ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನಸ್ಥಿತಿ. ಪ್ರವಾಸ ಹಾಗು ಪತ್ರವ್ಯವಹಾರ ಭೆಟ್ಟಿಗಿಂತ ನೆಟ್ಟಗೆ. ಪುನರ್ವಸುವಿನ ೪ನೇ ಹಾಗು ಪುಷ್ಯದ ಮೊದಲನೆ ಮೂರು ಚರಣಗಳಿಗೆ ತೊಂದರೆ ಕಡಿಮೆ. ತಾ. ೮, ೧೩, ೧೪ ನೆಟ್ಟಗೆ.

## ಸಿಂಹ

ಸ್ವಂತ ಪ್ರಕೃತಿ ಉತ್ತಮ ಆದರೆ ಹೆಂಡತಿಗೆ ಅಸ್ವಸ್ಥತೆ. ಉಳಿದ ಸರ್ವ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಹೆಚ್ಚಿನ ಪ್ರಗತಿ, ವಿಶೇಷ ಪ್ರತಿಷ್ಠೆ ಹಾಗು ಅಂದಾಜಿಗಿಂತ ಹೆಚ್ಚು ಲಾಭ ಆದರೆ ವಿರೋಧಿಗಳಿಂದ ಅಶ್ಲಾಘ್ಯ ಕುತಂತ್ರ. ವೆಚ್ಚ ಬಹಳ ಆದರೆ ದಾನಶೂರತೆಯ ಪುಣ್ಯದ ಯೋಗ. ಸ್ವಂತ ಮುಟ್ಟಿಗೆ ಪ್ರಿಯನಾದ ಆದರೆ ಮನೆಯ ಇತರರಿಗೆ ತಿರಸ್ಕರಣೀಯನಾದ ವ್ಯಕ್ತಿಯು ಮನೆಯಲ್ಲಿ ಕೆಲವು ದಿವಸ ಬಂದು ಇರುವದರಿಂದ ಮನಸ್ವಾಸ್ಥ್ಯವು ಇಲ್ಲದಂತಾಗಿ ಅಪಹಾಸ್ಯದ ಸಂಭವ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಪ್ರತಿಪಕ್ಷಿಗಳ ಹೆಚ್ಚಳ. ಪ್ರವಾಸ ಹಾಗು ಪತ್ರವ್ಯವಹಾರ ಅತಿ ಉತ್ತಮ ಆದರೆ ಭೆಟ್ಟಿ ಕೆಲಸ ಅರ್ಧಮರ್ಧ. ಮಘಾದ ೪ನೇ ಹಾಗು ಪೂರ್ವಾದ ಮೊದಲನೆ ಮೂರು ಚರಣಗಳಿಗೆ ತೊಂದರೆಯಿಂದ ಯಶ. ತಾ. ೮, ೯, ೧೦, ೧೪ ನೆಟ್ಟಗೆ.

## ಕನ್ಯಾ

ಪ್ರಕೃತಿ ಉತ್ತಮ ಆದರೆ ಹೆಂಡತಿಯೊಡನೆ ವಿಷಗೆ ರಣ ವಿತಂಡವಾದದ ಪ್ರಸಂಗ ಉದ್ಭವಿಸಿ ಕೊನೆಗಳಲ್ಲಿ ಅದು ಪರಿಣಮಿಸಿ ಮನೆಯಲ್ಲಿಯ ಎಲ್ಲರಿಗೂ ವಿಷಣ್ಣತೆ. ಒಂದು ವಸ್ತುವು ಕಳವಾಗದೆ ಇಟ್ಟಲ್ಲಿಯೇ ಗುಪ್ತವಾಗುವ ಚಮತ್ಕಾರ. ಉದ್ಯೋಗದಲ್ಲಿ ಪ್ರಗತಿ ಸಾಧಾರಣವಿದ್ದರೂ ವಿಶೇಷ ಆದಂತೆ ತೋರಿಸುವಿಕೆ ಆದರೆ ಪ್ರತಿಷ್ಠೆ ಹಾಗು ಲಾಭ ನೆಟ್ಟಗೆ. ವೆಚ್ಚವೂ ಬಹಳ ಆದರೆ ವ್ಯರ್ಥ ಸಲುವಾಗಿಯೇ ಹೆಚ್ಚು ಖರ್ಚು. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಶತ್ರುಗಳ ಪ್ರಾಬಲ್ಯ ಬಹಳ. ಪ್ರವಾಸ ತೊಂದರೆಯುದು ಆದರೆ ಭೆಟ್ಟಿ ಹಾಗು ಪತ್ರವ್ಯವಹಾರ ನೆಟ್ಟಗೆ. ಉತ್ತರಾದ ೪ನೇ ಹಾಗು ಹಸ್ತಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೯, ೧೦, ೧೧, ೧೨ ನೆಟ್ಟಗೆ.

## ತುಲಾ

ಪ್ರಕೃತಿ ಹಾಗು ಪ್ರಾಪಂಚಿಕ ಸುಖ ಉತ್ತಮ ಆದರೆ ಮಕ್ಕಳೊಡನೆ ಹೆಂಡತಿಯ ವಿರೋಧ ವಿಶೇಷ. ಸ್ಥಾವರದಲ್ಲಿ ಹೆಚ್ಚು ವಿಚಿತ್ರ ಪ್ರಸಂಗಗಳು ಉಂಟಾದರೂ ಒಂದೆರಡು ಅನುಕೂಲ ಘಟನೆಗಳೂ ಸಂಭವಿಸುವ ಯೋಗ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಹಾಗು ಲಾಭ ಮನಸಿನಂತೆ ಆದರೆ ಆ ವಿಷಯದಲ್ಲಿ ಜನರಲ್ಲಿ ಬಹಳ ತಪ್ಪು ತಿಳುವಳಿಕೆ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸ ಸಾಧಾರಣ. ಚಿತ್ರಾದ ೪ನೇ ಹಾಗು ಸ್ವಾತಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೯, ೧೦, ೧೩, ೧೪ ನೆಟ್ಟಗೆ.

## ವೃಶ್ಚಿಕ

ಪ್ರಕೃತಿ ಹಾಗು ಪ್ರಾಪಂಚಿಕ ಸುಖ ಸಾಧಾರಣ ಆದರೆ ಸ್ತ್ರೀಸುಖ ನೆಟ್ಟಗೆ. ಸ್ವಕೀಯ ಅಣ್ಣತಮ್ಮಂದಿರ ಉನ್ನತಿ ಹಾಗು ಮನಸಿನಲ್ಲಿ ದುಷ್ಟ ಹಾಗು ಪಾಪ ವಿಚಾರಗಳ ಪ್ರಾಬಲ್ಯ ಬಹಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಹಾಗು ಲಾಭ ಅಂದಾಜಿಗಿಂತ ಹೆಚ್ಚು ಆದರೆ ವೆಚ್ಚವೂ ವಿಪರೀತ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಒಡಂಬಡಿಕೆಯ ಸಂಭವ ಮಿತ್ರ ಸುಖ ಸಂಸ್ಮರಣೀಯ. ಪ್ರವಾಸ ತೊಂದರೆಯುದು ಆದರೆ ಭೆಟ್ಟಿ ಹಾಗು ಪತ್ರವ್ಯವಹಾರ ನೆಟ್ಟಗೆ. ಅನುರಾಧೆಯ ೪ನೇ ಹಾಗು ಜೇಷ್ಠಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದ ಯಶ. ತಾ. ೧೧, ೧೨, ೧೩, ೧೪ ನೆಟ್ಟಗೆ.

## ಧನು

ಪ್ರಕೃತಿ ಹಾಗು ಪ್ರಾಪಂಚಿಕ ಸುಖ ಉತ್ತಮ ಆದರೆ ಹಟವಾದಿತನ ಹಾಗು ಮಹತ್ವಾಕಾಂಕ್ಷೆ ಮೂಲಕ ಹೆಂಡತಿಯ ಮನಸ್ಸು ಅಸಂತುಷ್ಟ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಹಾಗು ಲಾಭ ಅತಿ ಉತ್ತಮ. ಒಬ್ಬರೊಡನೆ ಅತಿಸ್ನೇಹದ ವಿಷಯದಲ್ಲಿ ಕೆಳಗಿನ ಜನರ ತಪ್ಪು ತಿಳುವಳಿಕೆ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಒಳ್ಳೆಯ ಯಶ. ಆದರೆ ಕೆಲವೊಂದು ಪ್ರಶ್ನೆಗಳು ಅರೆವಾಸಿ ಉಳಿಯುವದರಿಂದ ಮನಸ್ಸಿನಲ್ಲಿ ಗೊಂದಲ, ಪ್ರವಾಸಾದಿ ಕೆಲಸ ಉತ್ತಮ. ಮೂಲಾದ ೪ ನೇ ಹಾಗು ಪೂರ್ವಾಷಾಢಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದ ಯಶ. ತಾ ೯, ೧೦, ೧೩, ೧೪ ನೆಟ್ಟಗೆ.

## ಮಕರ

ಪ್ರಕೃತಿ ನೆಟ್ಟಗೆ. ಆದರೆ ಹೆಂಡತಿ ಹಾಗು ಮಕ್ಕಳ ಸುಖದಲ್ಲಿ ವ್ಯತ್ಯಯ. ಉದ್ಯೋಗದಲ್ಲಿ ಉತ್ತಮ ಪ್ರಗತಿ, ವಿಶೇಷ ಪ್ರತಿಷ್ಠೆ ಆದರೆ ಸಾಹಜಿಕ ಲಾಭವು ಸಹ ಚಮತ್ಕಾರಿಕ ಕಾರಣಗಳಿಂದ ಸ್ಥಗಿತ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಪ್ರಚಂಡ ವಿಜಯ ಆದರೆ ಆಪ್ತರು ಹಾಗು ಮಿತ್ರರಿಗೆ ಅದು ಸಹನವಾಗದೆ ಅವರು ಖೇದ ಪಡುವಿಕೆ. ದೈವಿಕ ಕೃಪೆ ಇಲ್ಲವೆ ಕ್ಷೋಭೆಯ ಒಂದು ಘಟನೆಯು ಸಂಭವ. ಭೆಟ್ಟಿಗಿಂತ ಪ್ರವಾಸ ಹಾಗು ಪತ್ರವ್ಯವಹಾರ ಹೆಚ್ಚು ನೆಟ್ಟಗೆ. ಉತ್ತರಾಷಾಢಾದ ೪ ನೇ ಹಾಗು ಶ್ರವಣಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೮, ೧೧, ೧೨ ನೆಟ್ಟಗೆ.

## ಕುಂಭ

ಸ್ವಂತ ಹಾಗು ಮಕ್ಕಳ ಪ್ರಕೃತಿ ಅಸ್ವಸ್ಥ. ಇದರಂತೆ ಅತಿಥಿಗಳ ಪ್ರಕೃತಿಯೂ ಒಮ್ಮೊಮ್ಮೆ ಕೆಡುವ ಸಂಭವ. ಇತರ ಪ್ರಾಪಂಚಿಕ ಸುಖ ಬಹಳ. ಉದ್ಯೋಗದಲ್ಲಿ ಪ್ರಗತಿ ಹಾಗು ಲಾಭ, ಉತ್ತಮ ಪ್ರತಿಷ್ಠೆ ವಿಷಯದಲ್ಲಿ ಜನರಿಗಿಂತ ಸ್ವತಃ ಹೆಚ್ಚಿನ ಸಂದೇಹ. ಅವಚಿತ ಲಾಭದ ಸಂಭವ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನಸ್ಥಿತಿ. ಪ್ರವಾಸ ಉತ್ತಮ ಆದರೆ ಭೆಟ್ಟಿ. ಹಾಗು ಪತ್ರವ್ಯವಹಾರ ಸಂಶಯಿತ. ಧನಿಷ್ಠೆಯ ೪ ನೇ ಹಾಗು ಶತತಾರಕೆಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ, ತಾ. ೯, ೧೦, ೧೩, ನೆಟ್ಟಗೆ.

## ಮೀನ

ಪ್ರಕೃತಿ ಹಾಗು ಪ್ರಾಪಂಚಿಕ ಸುಖ, ಬಾಹ್ಯದಲ್ಲಿ ಉತ್ತಮ ಆದರೆ ಒಳಗೆ ಅಷ್ಟಕಷ್ಟೆ. ಉದ್ಯೋಗದಲ್ಲಿ ಪ್ರಗತಿ ಹಾಗು ಲಾಭ, ಪ್ರತಿಷ್ಠೆಗಿಂತ ಹೆಚ್ಚು ನೆಟ್ಟಗೆ ಹೆಂಡತಿಯ ಬುದ್ಧಿ ಇಲ್ಲವೆ ಕಲಿಸುವಿಕೆಯಿಂದ ಹೆಚ್ಚಿನ ಲಾಭದ ನಿದರ್ಶನ. ವ್ಯಾಜ್ಯ ಹಾಗು ಸ್ಪರ್ಧೆಯಲ್ಲಿ ಅನುಕೂಲತೆ, ತಂಗಿ ಇಲ್ಲವೆ ಹೆಂಡತಿಯ ಮನೆಯವರಿಂದ ದ್ವೇಷ ಇಲ್ಲವೆ ಅಪಮಾನ. ಪ್ರವಾಸ ಹಾಗು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ನೆಟ್ಟಗೆ ಉತ್ತರಾಭಾದ್ರಪದದ ೪ ನೇ ಹಾಗು ರೇವತಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದ ಯಶ. ತಾ. ೮, ೧೧, ೧೨ ನೆಟ್ಟಗೆ.

## ಮಹಾತ್ಮರ ಹೆಸರು ಇನ್ನೂ ಬ್ಲ್ಯಾಕ್ ಲಿಸ್ಟಿನಲ್ಲಿ !

ಕೊಲ್ಹಾಪುರ— ಪೋಲೀಸ ಖಾತೆಯಲ್ಲಿ ನಾವು ಎಷ್ಟೋ ಸುಧಾರಣೆಗಳನ್ನು ಮಾಡಬೇಕಾಗಿದೆ. ನಮ್ಮ ಮೇಲೆ ಬ್ರಿಟಿಶ ಅಧಿಕಾರಿಗಳಿರುತ್ತಿದ್ದರಾದ್ದರಿಂದ ನಮಗೆ ಸ್ವತಂತ್ರ ಬುದ್ಧಿಯಿಂದ ಏನು ಮಾಡಲೂ ಶಕ್ಯವಿದ್ದಿಲ್ಲ. ಒಂದು ಉದಾಹರಣೆ ಕೊಡಬೇಕಾದರೆ ಅಗಸ್ಟ ೧೫ ರ ನಂತರ ಕೂಡ ಮಹಾತ್ಮಾ ಗಾಂಧಿಯವರ ಹೆಸರು ಬ್ಲ್ಯಾಕಲಿಸ್ಟಿನಲ್ಲಿದ್ದದ್ದು ನನಗೆ ಕಂಡು ಬಂದಿದೆ ಎಂದು ಮುಂಬಯಿ ಪ್ರಾಂತದ ಪೋಲೀಸ ಇನಸ್ಪೆಕ್ಟರ ಜನರಲ್ಲರಾದ ಕಾಮ್ಟೆಯವರು ಹೇಳಿದರು.

## ಮರೆಯದ "ಅಗಸ್ಟ"

- ವಂಗಭಂಗ ನಿರ್ಣಯವನ್ನು ಕರ್ಝನ್ನ ಮಹಾಶಯರು ೧೯೦೫ ಅಗಸ್ಟದಲ್ಲಿ ಸಾರಿದರು.
- ಸ್ವಾತಂತ್ರ್ಯ ಚಳವಳಿಯ ಪುರಸ್ಕರ್ತರಾದ ಲೋ. ತಿಳಕರೂ, ಕವಿವರ್ಯ ರವೀಂದ್ರರೂ ಮಹಾತ್ಮರ ಬಲಗೈಯಂತಿದ್ದ ಮಹಾದೇವ ಭಾಯಿಯವರೂ, ಅಗಸ್ಟ ತಿಂಗಳಿನಲ್ಲಿಯೇ ಮರಣಹೊಂದಿದರು.
- ಲಿನ್‌ಲಿಥಗೊಸಾಹೇಬರ ಪ್ರಸಿದ್ಧವಾದ ಅಗಸ್ಟ ಕೊಡುಗೆಯು ಅಗಸ್ಟ ತಿಂಗಳಿನಲ್ಲಿಯೇ ಸಾರಲ್ಪಟ್ಟಿತು.
- ಕಳೆದ ವರುಷದ ಕಲಕತ್ತೆಯ ಹತ್ಯಾಕಾಂಡವು ಅಗಸ್ಟ ತಿಂಗಳಿನಲ್ಲಿಯೇ ನಡೆದು ಹೋಯಿತು.
- 'ಚಲೇಜಾವ' ಚಳವಳಿಯು ಅಗಸ್ಟ ತಿಂಗಳಿನಲ್ಲಿಯೇ ಪ್ರಾರಂಭಿಸಲ್ಪಟ್ಟಿತು.
- ಕಳೆದ ಅಗಸ್ಟ ತಿಂಗಳಿನಲ್ಲಿಯೇ ಪಂಡಿತ ನೆಹರು ಅವರು, ವ್ಹಾಯಿಸರಾಯರ ವಿನಂತಿಯ ಮೇರೆಗೆ ನಡುಗಾಲ ಸರಕಾರ ರಚಿಸಲು ಒಪ್ಪಿಕೊಂಡರು.

★ ಅಂಥ ಅಗಸ್ಟ ತಿಂಗಳಿನಲ್ಲಿಯೇ ಹಿಂದುಸ್ಥಾನವು ಈಗ ಸ್ವತಂತ್ರವಾಗಿದೆ.

## ಭಾರತದ ವ್ಯಾಪಾರದ ತುಲನೆ

೧೯೪೭ ರ ಮಾರ್ಚಿಯ ವರೆಗಿನ ೯ ತಿಂಗಳಲ್ಲಿ ಹಿಂದುಸ್ಥಾನದ ಸಾಗರೋತ್ತರ ವ್ಯಾಪಾರವು (ವೈಯುಕ್ತಿಕ ಸಾಮಾನುಗಳಲ್ಲಿ) ४ಙಂ.ಲ ಕೋಟಿ ರೂಪಾಯಿಗಳ ಬೆಲೆಯದಾಗಿದೆ. ಅಷ್ಟೇ ಕಾಲದಲ್ಲಿ ೧೯೪೬ ರಲ್ಲಿ ೩೯೧.೮ ಕೋಟಿರೂಪಾಯಿಗಳಷ್ಟು ಮಾತ್ರವಾಗಿತ್ತು. ವರ್ಷಾದಿಯಲ್ಲಿ ಸರಕಾರವು ಆಯಾತದಲ್ಲಿ ಉದಾರ ನೀತಿತಳೆದುದರಿಂದ ನಿರ್ಯಾತದ ಬೆಲೆ ನೂರಕ್ಕೆ ಕೇವಲ ೧೩ ರಷ್ಟು ಏರಿ ಆಯಾತದ ಬೆಲೆಯು ನೂರಕ್ಕೆ ೩೫ ರಷ್ಟು ಏರುವಂತಾಯಿತು. ಇದರ ಫಲಿತಾಂಶವಾಗಿ ೧೯೪೭ ರ ಮಾರ್ಚಿಯವರೆಗೆ ಭಾರತದ ಅನುಕೂಲ ತುಲನದ ವ್ಯಾಪಾರವು ೯೦ ಲಕ್ಷ ರೂಪಾಯಿಗಳಷ್ಟು ಮಾತ್ರವಾಯಿತು. ಹಿಂದಿನ ವರ್ಷ ಇಷ್ಟೇ ಅವಧಿಯಲ್ಲಿ ಅದು ೩೫.೪ ಕೋಟಿ ರೂಪಾಯಿಗಳಷ್ಟಾಗಿತ್ತು.

## ಜೇನು ಹುಳುಗಳು

ಸುಮಾರು ೧೫೦೦೦ ಜೇನು ಹುಳುಗಳ ಪಾರ್ಸೆಲ್ಲುಗಳನ್ನು ಸೋವಿಯಟ್ ಟಪಾಲಿನವರು ಒಳ ದೇಶಕ್ಕೆ ಕಳುಹಿರುವರಂತೆ.

ಅವು ರಶಿಯದ ದಕ್ಷಿಣ ಭಾಗದಿಂದ ಮಧ್ಯ ಮತ್ತು ಪಶ್ಚಿಮದ ಭಾಗಗಳಿಗಾಗಿ ಟಪಾಲಿಗೆ ಹಾಕಿದವುಗಳಂತೆ. ಹುಳುಗಳನ್ನು ಮುದ್ರೆ ಹೊಡೆದು ಪಾರ್ಸೆಲ್ ಮಾಡಿದ್ದರೂ ಅವು ನೂರಾರು ಮೈಲುಗಳನ್ನು ದಾಟಿ ಸುರಕ್ಷಿತವಾಗಿ (ಸಜೀವವಾಗಿ) ಮುಟ್ಟತಕ್ಕ ಸ್ಥಾನವನ್ನು ಮುಟ್ಟಿದವು.

ಕೆಲವು ಪಾರ್ಸೆಲ್ಲುಗಳನ್ನು ವಿಮಾನದ ಮೂಲಕವೂ ಕಳುಹಲಾಗಿತ್ತಂತೆ.